ಗೌರಿ
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

25 ಮೇ 2016 ಪುಟ 20 ರೂ. 15/-



ಬ್ರಾಗಳು ಮೇಕೆ ಬಾಡು ತಿಂದದ್ದು

ನಕಲಿ ಮೋದಿ ಫೇಕ್ ಡಿಗ್ರಿ




ಮಂಡ್ಯ: ತಮ್ಮಣ್ಣನ ಬಾಲಕ್ಕೆ ಚೆಲುವಣ್ಣನ ಬೆಂಕಿ!

ಚಿತ್ರದುರ್ಗ: ಬಾಣಲೆಯ ಕಾಂಗ್ರೆಸ್‌ಗೆ ಬೆಂಕಿಯ 'ಸೌಭಾಗ್ಯ'!

ಉತ್ತರ ಕನ್ನಡ: ಡಿಸಿ-ಎಮ್ಮೆಲ್ಲೆ ಡಿಶುಂ..! ಡಿಶುಂ!!

ಹುಬ್ಬಳ್ಳಿ: ಮಲಹೊರುವ ಮಕ್ಕಳ ಮೇಲೆ ಕ'ಮಲ' ಪ್ರೀತಿ

ಅಂಚಿನಿಂದ...



ಡಾ.ವಾಸು ಎಚ್.ವಿ.

ಆ ಸಾವು ನಮ್ಮ ಆಸ್ತಿ!





"ಬೆಳಗ್ಗೆ 6.30ಕ್ಕೆ ಸರಿಯಾಗಿ ನನಗೆ ಫೋನ್ ಬಂತು. 6.35ಕ್ಕೆ ನಾನು ಎಸ್‌ಪಿಯವರಿಗೆ ಫೋನ್ ಮಾಡಿ ವಿಷಯ ತಿಳಿಸಿ, ಸೀದಾ ಘಟನೆ ನಡೆದ ಜಾಗಕ್ಕೆ ಹೋದೆ. ಪೊಲೀಸರಿಗಿಂತ ಮುಂಚೆ ನಾನು ಅಲ್ಲಿಗೆ ಹೋಗಿದ್ದೆ. ನಾನು ಹೋದಾಗ ಎರಡು ಶವಗಳಲ್ಲಿ ಒಂದರ ಮೈ ಇನ್ನೂ ಬೆಚ್ಚಗಿತ್ತು, ರಕ್ತ ಪೂರಾ ಒಣಗಿರಲಿಲ್ಲ. ಪೊಲೀಸರು ಬಂದು ಫೋಟೋ ತೆಗೆದುಕೊಂಡು, ಮಹಜರು ಮಾಡಿ, ಎಲ್ಲಾ ಕಡೆ ಇದು ಬ್ರೇಕಿಂಗ್ ನ್ಯೂಸ್ ಆಗಿ ಬಿತ್ತರವಾಗಲು ಆರಂಭವಾದ ನಂತರ ಅಲ್ಲಿಂದ ಹೊರಟೆ. ಮನೆಗೆ ವಾಪಸ್ಸು ಬರುತ್ತಿದ್ದಂತೆ ಟಿವಿಯಲ್ಲಾಗಲೇ ಚರ್ಚೆ ಶುರುವಾಗಿತ್ತು, ಮಧ್ಯೆ ನನ್ನನ್ನೂ ಫೋನ್‌ಗೆ ತೆಗೆದುಕೊಂಡರು. ಈ ಹತ್ಯೆಯ ಒಳಸುಳಿಗಳು ಮತ್ತು ಹತ್ಯೆ ನಡೆಯಬಹುದಾದ ಸಾಧ್ಯತೆಯು ನನಗೆ ಮೂರು ದಿನಗಳ ಕೆಳಗೇ ತಿಳಿದಿತ್ತಾದ್ದರಿಂದ, ಮುಂದೇನು ಮಾಡಬೇಕೆಂದು ಯೋಚಿಸಿ ಇವರಿಗೆ ಫೋನ್ ಮಾಡಿದೆ." ಈ ರೀತಿಯ ಕಥನಗಳನ್ನು ನೀವು ಕೇಳಿದ್ದೀರಾ?

ನಾನು ಆಯ್ದುಕೊಂಡಿರುವ ಬದುಕಿನ ಗುರಿಯ ಕಾರಣದಿಂದ ಆಗಾಗ್ಗೆ ಇಂಥದ್ದನ್ನು ಕೇಳುತ್ತಲೇ ಇರುತ್ತೇನೆ. ನಿಜಕ್ಕೂ ಇಂತಹದೊಂದು ದುರಂತದ ಕುರಿತು ಅಪಾರ ಮಾನವೀಯ ಸಂವೇದನೆ ಮತ್ತು ಕಾಳಜಿಯಿಂದ ಸ್ಪಂದಿಸಿರುವ ವ್ಯಕ್ತಿಗಳನ್ನು ನೋಡಿದ್ದೇನೆ. ಅಂತಹವರೂ ಇಂಥದ್ದೇ ಭಾಷೆಯಲ್ಲಿ ಘಟನೆಯನ್ನು ವಿವರಿಸಿದ್ದು ಉಂಟು. ಈ ರೀತಿಯಾಗಿ ಘಟನಾವಳಿಗಳನ್ನು ಬಿತ್ತರಿಸುವುದು ಕೇಳುಗರ ಮೇಲೆ ಪರಿಣಾಮ ಬೀರಲಿ ಎಂಬ ಉದ್ದೇಶದಿಂದಲೋ ಅಥವಾ ಅದೇ ಅವರ ಶೈಲಿಯೋ ಆಗಿರುತ್ತದೆ. ಅದರಲ್ಲಿ ಅಂತಹ ಸಮಸ್ಯೆಯೇನೂ ಇಲ್ಲ, ಆದರೆ ಪ್ರಥಮ ಪುರುಷ ಕಥಾನಕ ನಿರೂಪಣೆಯಲ್ಲಿ, ಘಟನೆ ಏನು ನಡೆಯಿತು ಎಂಬುದಕ್ಕಿಂತ, ತಾನೇನು ಮಾಡಿದೆ ಎಂಬುದಕ್ಕೇ ಒತ್ತು ಹೆಚ್ಚಾಗುತ್ತಾ ಇದೆ ಎಂದರೆ ಅದರಲ್ಲಿ ಏನೋ ಸಮಸ್ಯೆಯಿರುತ್ತದೆ. ಒಬ್ಬ ಪತ್ರಕರ್ತರೋ, ಸಾಮಾನ್ಯ ನೋಡುಗರೋ ಈ ರೀತಿ ಹೇಳಿದರೆ ತೊಂದರೆಯಿಲ್ಲ, ಆದರೆ, ಒಬ್ಬ ಸಾಮಾಜಿಕ ಕಾರ್ಯಕರ್ತರು ಇಂತಹ ಭಾಷೆಯನ್ನು ಬಳಸುತ್ತಿದ್ದರೆ, ಅದರಲ್ಲಿ ಇನ್ನೂ ಒಂದು ಅಂಶ ಸೇರಿಕೊಂಡಿರುವ ಸಾಧ್ಯತೆಯಿದೆ. ಅದು ಆ ಸಾವಿನ ಹಕ್ಕು ಸಾಧಿಸುವ ಅಂಶ.

ಜಾತಿ, ವರ್ಗ, ಲಿಂಗ ತಾರತಮ್ಯ ಅಥವಾ ಕೋಮುವಾದದ ಕಾರಣಕ್ಕೋ, ಇನ್ನಾವುದೋ ಕಾರಣಕ್ಕೋ ಹಲವು ರೀತಿಯ ದುರಂತಗಳು ನಮ್ಮ ಸಮಾಜದಲ್ಲಿ ಸಂಭವಿಸುತ್ತಿರುತ್ತವೆ. ಸಣ್ಣಪುಟ್ಟ ದೌರ್ಜನ್ಯಗಳು ಮಾತ್ರವಲ್ಲದೇ, ಕೊಲೆ ಹತ್ಯಾಕಾಂಡಗಳೂ ನಡೆಯುತ್ತವೆ. ಕೆಲವು ಘಟನೆಗಳು ಬೆಳಕಿಗೇ ಬರುವುದಿಲ್ಲ; ಹಳ್ಳಿಯೊಂದರಲ್ಲಿ ಎಲ್ಲರ ಕಣ್ಣೆದುರಿಗೇ ಹತ್ಯೆಯೊಂದು ನಡೆದು ತಿಂಗಳು ಕಳೆದರೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುವುದಿಲ್ಲ, ಘಟನೆಯಲ್ಲಿ ನೊಂದವರು ಆ ನಂತರವೂ ಅಭದ್ರತೆ ಹಾಗೂ ಆತಂಕದಲ್ಲೇ ಇರುತ್ತಾರೆ. ಈ ರಿಸ್ಕ್ ಘಟನೆಯ ಬಲಿಪಶುಗಳಿಗೆ ಮಾತ್ರವಲ್ಲದೇ, ಅದನ್ನು ಹೊರತೆಗೆಯಲು ಯತ್ನಿಸುವ ಸಾಮಾಜಿಕ ಕಾರ್ಯಕರ್ತರಿಗೂ ಇರುತ್ತದೆ. ಅಂಥವರೂ ನಂತರ ಕೊಲೆಯಾಗಿರುವ ಉದಾಹರಣೆಗಳೂ ಸಾಕಷ್ಟಿವೆ. ಅಂತಹ ರಿಸ್ಕ್ ತೆಗೆದುಕೊಂಡು ಅನ್ಯಾಯ, ದಬ್ಬಾಳಿಕೆಗಳನ್ನು ವಿರೋಧಿಸಿ, ನ್ಯಾಯಕ್ಕಾಗಿ ಹೋರಾಡಿದ ಹೋರಾಟಗಾರರ ಕಾರಣಕ್ಕೇ ಈ ನಾಡಿನಲ್ಲಿ ನೆಲದ ಕಾನೂನು ಸ್ವಲ್ಪ ಮಟ್ಟಿಗಾದರೂ ಜಾರಿಯಲ್ಲಿದೆ. ಅಂತಹ ಹೋರಾಟಗಾರರನ್ನು ಈ ಸಮಾಜದಲ್ಲಿ ಬದಲಾವಣೆ ಬಯಸುವ ಎಲ್ಲರೂ ಅಭಿನಂದಿಸಬೇಕಿದೆ; ಅವರ ಕೆಲಸವನ್ನು ಗುರುತಿಸಿ ಆಡುವ ನಾಲ್ಕು ಒಳ್ಳೆಯ ಮಾತುಗಳು, ಅಂತಹವರ ನೈತಿಕ ಸ್ಥೈರ್ಯವನ್ನೂ ಹೆಚ್ಚಿಸುತ್ತದೆ.

ಆದರೆ, ಇನ್ನೊಂದು ದುರಂತವೂ ಇದರ ಜೊತೆಗೆ ಹೊಂದಿಕೊಂಡಿದೆ. ಅದೇ ಮೇಲೆ ಹೇಳಲಾದ ಸಾವಿನ ಹಕ್ಕು (claim) ಸಾಧಿಸುವ ದುರಂತ. ಅದನ್ನು ಹೊರತೆಗೆದದ್ದು ನಾನು ಅಥವಾ ನಾವು ಅಥವಾ ನಮ್ಮ ಸಂಘಟನೆ ಎನ್ನುವ ಹಕ್ಕುಸ್ವಾಮ್ಯ ಸ್ಥಾಪಿಸುವುದು. ಸಂಘಟನೆ ಮಾಡುವುದೂ ವ್ಯಕ್ತಿಗಳ ಕೆರಿಯರ್ ಆದಾಗ ಈ ರೀತಿ ಆಗುತ್ತದೆನ್ನಿಸುತ್ತದೆ. ಕನ್ನಡದ ಪ್ರಮುಖ ಚಿಂತಕರಲ್ಲೊಬ್ಬರು "ಎಲ್ಲಾ ಹೋರಾಟಗಳೂ ಮಾನವೀಯಗೊಳ್ಳುವುದು ಅದರಲ್ಲಿ ಮಹಿಳೆಯರು ಮತ್ತು ಗೃಹಸ್ಥರು ಸೇರಿಕೊಂಡಾಗ" ಎನ್ನುತ್ತಿದ್ದರು. ಪಕ್ಕಾ ಗೃಹಸ್ಥರಾಗಿರುವವರು ತಮ್ಮದೇ ಲೋಕದಲ್ಲಿ ತಮ್ಮದೇ ಗೋಳುಗಳಲ್ಲಿ ಮುಳುಗಿರುತ್ತಾರೆ. ಅಂತಹವರನ್ನು ಹೇಗಪ್ಪಾ ಇದಕ್ಕೆ ಕರೆತರುವುದು ಎಂಬ ಚಿಂತೆ ಚಳವಳಿಯ ಸಂಘಟಕರಲ್ಲಿರುತ್ತದೆ. ಆದರೆ, ಚಳವಳಿಯೇ ವೃತ್ತಿ ಆಗಿಬಿಟ್ಟಿರುವವರು ಮಾತ್ರ ಅದರಲ್ಲಿ ತೊಡಗಿಕೊಂಡು, ಉಳಿದವರು ಪ್ರೇಕ್ಷಕರಾಗಿರುವುದು ಸರಿಯಲ್ಲ; ಅದರ ಜೊತೆಗೆ ಈ ಹೋರಾಟದ ಮೂಲ ಆಶಯದಲ್ಲಿ ಸಮಸ್ಯೆಯನ್ನು ಬಗೆಹರಿಸುವುದರ ಬದಲಿಗೆ, ಅದರ ಮುಂಚೂಣಿಯಲ್ಲಿರುವವರ ಕೆರಿಯರ್ ಗ್ರಾಫ್ ಮೇಲಕ್ಕೆ ಹೋಗುವ ಅಂಶವೇ ಹೆಚ್ಚಾಗಿಬಿಟ್ಟರೆ ಅದರಲ್ಲಿ ಅಪಾಯಗಳು ತಲೆದೋರುತ್ತವೆ.

ಇದರರ್ಥ ಚಳವಳಿಗಳಲ್ಲಿ ಪೂರ್ಣಾವಧಿ ಕಾರ್ಯಕರ್ತರು ಇರಬಾರದು ಎಂದಲ್ಲ. ಪೂರ್ಣಾವಧಿ ಕಾರ್ಯಕರ್ತರು ಇಲ್ಲದೇ ಎಂದೂ ಯಾವ ಚಳವಳಿಯೂ ಬೃಹತ್ತಾಗಿ ಬೆಳೆದಿಲ್ಲ. ಕೆಲವು ಸಂಘಟನೆಗಳಲ್ಲಿ ಘೋಷಿತ ಪೂರ್ಣಾವಧಿ ಕಾರ್ಯಕರ್ತರಿರುತ್ತಾರೆ. ಇನ್ನು ಕೆಲವು ಚಳವಳಿಗಳಲ್ಲಿ ಅಘೋಷಿತವಾದ (ಕೆಲವು ಸಾರಿ ಸ್ವತಃ ಅವರಿಗೂ ಗೊತ್ತಿರದೇ!) ಪೂರ್ಣಾವಧಿ ಕಾರ್ಯಕರ್ತರಿರುತ್ತಾರೆ. ಇದನ್ನು ಕೆರಿಯರ್ ಎಂದು ಕರೆಯುತ್ತಿರುವುದಲ್ಲ, ಸಂಘಟನೆ ಮಾಡುವುದರ ಮುಖಾಂತರ ತಾನು ದೊಡ್ಡವನಾಗಬೇಕು (ಇದು 'ಬೆಳೆಯುವುದು', 'ಬೆಳೆಯಲಿಕ್ಕೆ ಬಿಡುವುದಿಲ್ಲ', 'ನಾನೂ ಸ್ವಲ್ಪ ಇದರಲ್ಲಿ ಬೆಳೆಯಬೇಕು, ಸಪೋರ್ಟ್ ಮಾಡಿ ಸಾರ್' ಇತ್ಯಾದಿ ನುಡಿಗಟ್ಟುಗಳ ಮೂಲಕ ಚಾಲ್ತಿಯಲ್ಲಿದೆ) ಎಂಬ ಇರಾದೆ ಪೂರ್ಣಾವಧಿ ಕಾರ್ಯಕರ್ತರಲ್ಲೂ ಇರಲು ಸಾಧ್ಯ, ಅರೆಕಾಲಿಕ ಸಂಘಟಕರಲ್ಲೂ ಇರಲು ಸಾಧ್ಯ. ಪೂರ್ಣಾವಧಿ ಇರಲಿ, ಕಾಲು ಭಾಗ ಸಮಯವನ್ನೂ ಸಾಮಾಜಿಕ ಕೆಲಸಕ್ಕೆ ಕೊಡದೇ, ಅದರ ಲಾಭವನ್ನು ಪಡೆಯಬೇಕೆಂದು ಬಯಸುವವರೂ ಇರುತ್ತಾರೆ. ಸಾಮಾಜಿಕ ಕೆಲಸದಲ್ಲಿ ತೊಡಗುವವರಲ್ಲಿ ಹೆಚ್ಚಿನವರು ನಿಸ್ವಾರ್ಥತೆಯಿಂದಲೇ, ಅದಕ್ಕೆ ಮುಂದಾಗಿರುತ್ತಾರಾದರೂ, ನಿಧಾನಕ್ಕೆ ಅವರಲ್ಲಿ ಇತರ ಅಂಶಗಳು ಸೇರಿಕೊಳ್ಳುವ ಸಾಧ್ಯತೆಯೂ ಇದೆ. ಅದರ ಪರಿಣಾಮವಾಗಿ ಪೈಪೋಟಿಯೂ ಏರ್ಪಡುತ್ತದೆ.

ಕೇವಲ ಇದು ಮಾತ್ರವೇ ಇರುತ್ತದೆ ಎಂದು ಹೇಳಲಾಗುವುದಿಲ್ಲ, ಕಾಳಜಿ ಮತ್ತು ಕ್ಲೈಮು ಸಾಧಿಸುವುದು ಯಾವ್ಯಾವುದೋ ಪ್ರಮಾಣದಲ್ಲಿ ಮಿಶ್ರಣಗೊಂಡಿರುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ, ಸಂಘಟನೆಯಿಂದ ಸಂಘಟನೆಗೆ ಅದು ಬೇರೆ ಬೇರೆ ಅನುಪಾತದಲ್ಲಿ ಇರಬಹುದು ಅಷ್ಟೇ. ಒಂದಲ್ಲ ಒಂದು ಪ್ರಮಾಣದಲ್ಲಿ ಇದು ಇಂದಿನ ಎಲ್ಲಾ ಸಾಮಾಜಿಕ ಕಾರ್ಯಕರ್ತರಲ್ಲೂ (ಇದನ್ನು ಬರೆಯುತ್ತಿರುವ ವ್ಯಕ್ತಿಯನ್ನೂ ಒಳಗೊಂಡಂತೆ) ಇರಬಹುದು, ಇದೆ.

ಹಾಗೆಂದು, ಪ್ರತೀ ಘಟನೆಗೂ ಭಾವನಾತ್ಮಕ ನೆಲೆಯಲ್ಲಿ ಮಾತ್ರ ಸ್ಪಂದಿಸುತ್ತಾ ಇರುವುದೇ ಸರಿಯಾ? ದೌರ್ಜನ್ಯದ ವಿರುದ್ಧ ಕಟ್ಟಲ್ಪಡುವ ಚಳವಳಿ ತನ್ನಂತೆ ತಾನೇ ಆಗಿಬಿಡುವುದಿಲ್ಲವಲ್ಲಾ? ಅಲ್ಲಿ ಪ್ರಜ್ಞಾಪೂರ್ವಕವಾಗಿ ಸಂಘಟನೆ ಕಟ್ಟುವ ಆಲೋಚನೆಯೂ ಇರಬೇಕಲ್ಲವೇ? ಇಲ್ಲದಿದ್ದರೆ ದೌರ್ಜನ್ಯ ನಡೆಸುವ ಶಕ್ತಿಗಳು ಪ್ರಬಲವಾಗುತ್ತಾ ಇದ್ದು, ಅದರ ವಿರುದ್ಧ ಮಾನವೀಯತೆಯನ್ನು ಎತ್ತಿ ನಿಲ್ಲಿಸುವವರ ಬಲ ಮಾತ್ರ ಹೆಚ್ಚಾಗದಿದ್ದರೆ, ಸಮಾಜವನ್ನು ನಿಜವಾದ ಅರ್ಥದಲ್ಲಿ ಮಾನವೀಯಗೊಳಿಸುವುದು ಹೇಗೆ ಸಾಧ್ಯ? ಪ್ರಬಲ ಸಂಘಟನೆ ಕಟ್ಟುವುದು ಅಂದರೆ, ... ದುರಂತ ಘಟನೆಗಳ ಸಂದರ್ಭದಲ್ಲಿ ನಾವು ... ರೀತಿ ಸದರಿ ಘಟನೆ ಹಾಗೂ ಅದರ ವಿರು... ಪ್ರಯತ್ನವನ್ನು ಸಮಾಜದ ಮುಂದೆ ಇಡುತ್ತ... ಎಂಬುದೂ ಮುಖ್ಯವಲ್ಲವೇ? ಹೌದು ಮು... ಇಲ್ಲದಿದ್ದರೆ ನಮ್ಮದು ಕೇವಲ ಭೋಳೆತನವ...

ಮೈಸೂರಿನಲ್ಲಿದ್ದ ಕನ್ನಡದ ಪ್ರಮುಖ ಹೋರಾಟಗಾರ, ಚಿಂತಕರಲ್ಲೊಬ್ಬರು ನಮಗೆ ಹೇಳಿದ್ದರು: "ನೀವು ಕೋಮುವಾದದ ವಿರು... ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆಸುತ್ತಿರುವ ಹೋರಾಟದ ಬಗ್ಗೆ ನಮಗೆ ಅಭಿಮಾನವಿದೆ. ಈ ಹೋರಾಟವನ್ನು ನೀವು ನಿಮ್ಮ ಸಂಘಟ... ಬೆಳವಣಿಗೆಗೆ ಬಳಸಿಕೊಳ್ಳಬಾರದು." ನಾವು ಎದುರಿಸುತ್ತಿದ್ದದ್ದು ಪ್ರಬಲವಾಗಿ ಬೆಳೆದು ವಿ... ಕೋಮುವಾದಿ ಶಕ್ತಿಗಳನ್ನು. ಅದು ಅತ್ಯಂತ ಸಂಘಟಿತವಾದ ಶಕ್ತಿ, ಅದರ ವಿರುದ್ಧ ನಾವು ... ಕಟ್ಟದೇ ಹೋರಾಡುವುದು ಹೇಗೆ? ನಾವು ದುರ್ಬಲರಾಗುತ್ತಾ, ಪ್ರತಿಕ್ಷಣ ಪ್ರಬಲವಾಗುತ್ತಿ... ಶಕ್ತಿಯೊಂದಿಗೆ ಸೆಣಸುವುದು ಹೇಗೆ?

ಹೌದು, ಮೇಲಿನೆಲ್ಲವೂ ನಿಜ. ಸಂಘಟ... ಇಂತಹ ಕಾರ್ಯಸೂಚಿಯೂ ಇರುತ್ತದೆ, ಇ... ಆದರೆ, ಅದು ದುರಂತಗಳ ಸುತ್ತ ಕೆಲಸ ಮ... ಸಮಾಜದಲ್ಲಿ ಮಾನವೀಯ ಸ್ಪಂದನೆಯನ್ನು ... ಆ ಮೂಲಕ ಪ್ರಜಾತಂತ್ರವನ್ನು ವಿಸ್ತರಿಸಲು ... ಬೇರಾರಿಗೂ ಅವಕಾಶ ಇರಬಾರದು; ಏಕೆಂ... ಈಗಾಗಲೇ ಅದರ ಮೇಲೆ ನಮ್ಮ ಸೀಲನ್ನು ... ಹಾಕಿಯಾಗಿದೆ ಎಂದು ವರ್ತಿಸಬಾರದು. ಇ... ಬಹಳ ಹೊಸ ವಿದ್ಯಮಾನವಲ್ಲ, ಹಿಂದಿನಿಂದ... ಇರುವ 'ಪದ್ಧತಿ'ಯೇ. ಈಗಾಗಲೇ ಇಂತಿಂತ... ಜಾಗಗಳಲ್ಲಿ ನಮ್ಮ ಅಶ್ವಮೇಧ ಕುದುರೆ ಓ... ಹಾಗಾಗಿ ಆ ಎಲ್ಲಾ ಜಾಗ ನಮ್ಮದು ಎಂದು ಹೇಳುವ, ಪ್ರತಿಪಾದಿಸುವ ಸಂಘಟನೆಗಳು ಹಿಂದಿನಿಂದಲೂ ಇದ್ದವು. ಆದರೆ, ಈಗ ಸಾ... ಜಾಲತಾಣಗಳು 'ಸೀಲು ಹಾಕುವ' ಈ ಕ್ರಿ... ಮತ್ತಷ್ಟು ಹೆಚ್ಚಿಸಿದೆ. ನೀವು ಎಲ್ಲರಿಗಿಂತ ಮೊ... ಸೀಲು ಹಾಕಲು ಬೇಕಾದ ಜಾಗವನ್ನು ಈ ... ಜಾಲತಾಣಗಳು ಒದಗಿಸಿವೆ.

ಯಾರು ತಮ್ಮ ಸಮಸ್ಯೆಯು ಒಂದು ಸಾ... ಸಮಸ್ಯೆ ಎಂದೇ ಗೊತ್ತಿರದೇ, ಅದಕ್ಕಾಗಿ ನಾ... ಸಂಘಟಿತ ಹೋರಾಟ ಮಾಡಬೇಕು ಎಂಬ ... ಇಲ್ಲದೇ ಇರುತ್ತಾರೋ, ಅಂತಹ ದಮನಿತರ... ಹಂಚಿಕೊಳ್ಳಲು ನಡೆಯುವ ಪೈಪೋಟಿ ನೋ... ವಿಚಿತ್ರ ಭಾವನೆಯನ್ನು ಮೂಡಿಸುತ್ತದೆ. ನಡೆ... ಒಳ್ಳೆಯ ಕೆಲಸಗಳಲ್ಲಿ ನಾವೂ ಸ್ವಲ್ಪ ಜೊತೆಯ... ಎಂಬ ಆಶಯವಿರುವವರಲ್ಲೂ ಗೊಂದಲ ವ... ವಾಕರಿಕೆ ಹುಟ್ಟಿಸುತ್ತದೆ. ನೋಡುಗರಲ್ಲಿ ಯಾ... ಭಾವನೆ ಮೂಡಿಸುತ್ತದೆ ಎಂಬುದಕ್ಕಿಂತ ಮು... ದದ್ದು ಇನ್ನೊಂದಿದೆ. ಇಂತಹ ಪೈಪೋಟಿಯ... ತೊಡಗುವುದು, ಅದರಲ್ಲಿ ತೊಡಗಿರುವವರ ವ್ಯಕ್ತಿತ್ವವನ್ನೇ ಹಾಳುಗೆಡವುತ್ತದೆ. ಹೀಗಿರುವಾಗ ನಾವೆಲ್ಲರೂ ಇಂತಹದೊಂದು ಆರೋಗ್ಯಕರವ... ಮನೋಭಾವವನ್ನು ಬದಲಿಸಿಕೊಳ್ಳಲು ಏನು ಮಾಡಬೇಕು ಎಂಬುದನ್ನು ನಮ್ಮ ನಮ್ಮೊಳಗ... ಆಲೋಚಿಸುವ ಅಗತ್ಯವಿದೆ.

ಈಗ ಜಾದವ್‌ಪುರ್ ವಿವಿಯ ಸರದಿ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಮೊದಲು ಪುಣೆಯಲ್ಲಿರುವ ಎಫ್‌ಟಿಐಐ ಮೇಲೆ ...ನೊಬ್ಬನನ್ನು ಹೇರುವ ಮೂಲಕ ಮೋದಿ ಸರ್ಕಾರ ...ಮುರುಡತನವನ್ನು ತೋರಿತು. ಆಮೇಲೆ ಚೆನ್ನೈನಲ್ಲಿರುವ ...ಯಲ್ಲಿ ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್ ...ಕೊಂಡಿರುವ ದಲಿತ-ಪ್ರಗತಿಪರ ವಿದ್ಯಾರ್ಥಿಗಳು ...ವಾದಿಗಳು, ದೇಶದ್ರೋಹಿಗಳು, ಮೋದಿಯ ಮತ್ತು ...ೂ ಧರ್ಮದ ವಿರೋಧಿಗಳು' ಎಂದು ಆರೋಪಿಸಿ ...ದನಿಯನ್ನು ಅಡಗಿಸಲು ನೋಡಿತು. ಆದಾದನಂತರ ...ರಾಬಾದಿನ ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆಯ ...ಯೂ ಅಂತಹದ್ದೇ ಆರೋಪಗಳನ್ನು ಹೊರಿಸಿ ಅಪಾರ ...ಯನ್ನು ಹೊಂದಿದ್ದ ದಲಿತ ವಿದ್ಯಾರ್ಥಿ ರೋಹಿತ್ ...ುಲನನ್ನು ಕೊಂದು ಹಾಕಿತು. ಅಲ್ಲಿಗೆ ತೆಪ್ಪಗಾಗದೆ, ...ಲಿಯ ಜೆಎನ್‌ಯು ವಿಶ್ವವಿದ್ಯಾಲಯದ ಹಲವು ...ರ್ಥಿಗಳ ಮೇಲೂ 'ದೇಶದ್ರೋಹದ' ಆರೋಪವನ್ನು ...ರಿಸಿ ಮೂವರನ್ನು ಬಂಧಿಸಿತು. ಈಗ ಮೋದಿ ...ರದ ಕೆಟ್ಟ ಕಣ್ಣು ಜಾದವ್‌ಪುರ್ ವಿಶ್ವವಿದ್ಯಾಲಯದ ...ಲೆ ಬಿದ್ದಿದೆ.

ಅದಕ್ಕೆ ಕಾರಣವೂ ಇದೆ. ಹೇಳಿಕೇಳಿ ಜಾದವ್‌ಪುರ್ (ಇದು ಕೂಡ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ...ದಿರುವ ವಿವಿ) ಇರುವುದು ಎಡಪಕ್ಷಗಳು ಮತ್ತು ...ಮೂಲ ಕಾಂಗ್ರೆಸ್ ಬಲಿಷ್ಠವಾಗಿರುವ ಪಶ್ಚಿಮ ...ಾಳದಲ್ಲಿ. ಅಷ್ಟೇ ಅಲ್ಲ, ಜಾದವ್‌ಪುರ್ ವಿವಿಯಲ್ಲೂ ...ಯಾಗಿರುವುದು ಎಡಪಕ್ಷಗಳ ವಿದ್ಯಾರ್ಥಿ ಸಂಘಟನೆಗಳೇ ...ರತು, ಆರೆಸ್ಸೆಸ್‌ನ ಎಬಿವಿಪಿ ಅಲ್ಲ. ಆದರೆ ಆ ...ಸಂಘಟನೆಗಳನ್ನು ಬಗ್ಗುಬಡಿದು ತಮ್ಮ ಬಲಪಂಥೀಯ ...ಘಟನೆಯನ್ನು ಗಟ್ಟಿಗಳಿಸುವುದು ಹೇಗೆ? ಇತ್ತೀಚೆಗೆ ..., ಹೈದರಾಬಾದ್, ದೆಹಲಿಯಲ್ಲಿ ಮಾಡಿರುವ ತಂತ್ರವನ್ನೇ ಮೋದಿ ಸರ್ಕಾರ ಇಲ್ಲೂ ಉಪಯೋಗಿಸಿದೆ. ಮೊದಲು ಆರೋಪ ಮಾಡುವುದು, ಅದು ಕಾರ್ಯಗತವಾಗುವಂತೆ ತನ್ನ ಚೆಡ್ಡಿ ನಾಯಕರಿಂದ ಒತ್ತಡ ತರುವುದು, ಆಮೇಲೆ ವಿದ್ಯಾರ್ಥಿಗಳನ್ನು ಶಿಕ್ಷೆಗೆ ಗುರಿಪಡಿಸುವುದು.

ಮೋದಿಯ ಕೆಂಗಣ್ಣು ಜಾದವ್‌ಪುರ್ ವಿವಿಯ ಮೇಲೆ ಬಿದ್ದದ್ದು ದೆಹಲಿಯ ಪೊಲೀಸರು ಕನ್ಹಯ್ಯನನ್ನು ಬಂಧಿಸಿದಾಗ. ಆಗ ಜಾದವ್‌ಪುರ್ ವಿವಿಯ ಎಡಪಂಥೀಯ ವಿದ್ಯಾರ್ಥಿಗಳು ಜೆಎನ್‌ಯು ಪರವಾಗಿ ಒಂದು ಪ್ರತಿಭಟನೆಯನ್ನು ಹಮ್ಮಿಕೊಂಡರು. ವಿವಿಯ ಆವರಣದಲ್ಲಿ ಕನ್ಹಯ್ಯನನ್ನು ಬೆಂಬಲಿಸುವ, ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದ್ದನ್ನು ಖಂಡಿಸುವ ಪೋಸ್ಟರ್‌ಗಳನ್ನು ಅವರು ಅಂಟಿಸಿದ್ದರು. ಇದಾದ ಕೆಲವೇ ದಿನಗಳ ನಂತರ ಹಲವು ಚೆಡ್ಡಿ ವಿದ್ಯಾರ್ಥಿಗಳು ಮತ್ತು ಹೊರಗಿನಿಂದ ಬಂದಿದ್ದ ಬಿಜೆಪಿ ಸದಸ್ಯರು ಪ್ರತಿಭಟನೆಯನ್ನು ಹಮ್ಮಿಕೊಂಡು ಆ ಎಲ್ಲಾ ಪೋಸ್ಟರ್‌ಗಳನ್ನು ಸುಟ್ಟುಹಾಕಿ ದಾಂಧಲೆ ನಡೆಸಿದರು. ಆಗ ಎಂದಿನ ಫಾರ್ಮುಲ ಪ್ರಕಾರ ಬಿಜೆಪಿ ನೇಮಿಸಿರುವ ಚೆಡ್ಡಿ ಚಿಂತಕ ರಾಜ್ಯಪಾಲ ಕೆ.ಎನ್.ತ್ರಿಪಾಠಿ ಜಾದವ್‌ಪುರ್ ವಿವಿಯ ಉಪಕುಲಪತಿ ಸುರಂಜನ್ ದಾಸ್ ಅವರಿಗೆ ಮೇಲಿಂದ ಮೇಲೆ ಪತ್ರ ಬರೆದು "ಆಜಾದಿ ಎಂದು ಕೂಗಿರುವ ವಿದ್ಯಾರ್ಥಿಗಳ ವಿರುದ್ಧ ಎಫ್‌ಐಆರ್‌ಗಳನ್ನು ದಾಖಲಿಸಿ, ದಾಂಧಲೆ ಮಾಡಿರುವವರನ್ನು ಶಿಕ್ಷಿಸಿ. ಯಾಕೆಂದರೆ ಹಿಂದೊಮ್ಮೆ ಉತ್ತಮ ಶಿಕ್ಷಣ ಕೇಂದ್ರ ಎನಿಸಿಕೊಂಡಿದ್ದ ವಿವಿ ಈಗ ದಾಂಧಲೆಯ ಕೇಂದ್ರ ಎನಿಸಿಕೊಳ್ಳುತ್ತಿದೆ. ಆಡಳಿತವರ್ಗದವರು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು" ಎಂದು ಫತ್ವಾ ಹೊರಡಿಸಿದ್ದ. ಆದರೆ ಸುರಂಜನ್ ದಾಸ್ ಅವರು ಹೈದರಾಬಾದ್ ಕೇಂದ್ರ ವಿವಿಯ ಅಪ್ಪಾರಾವ್ ಅಥವಾ ಜೆಎನ್‌ಯು ಉಪಕುಲಪತಿ ಜಗದೀಶ್ ಕುಮಾರ್‌ರಂತೆ ಚೆಡ್ಡಿಯೂ ಅಲ್ಲ, ಮಾನಮರ್ಯಾದೆ ಇಲ್ಲದವರೂ ಅಲ್ಲ. ವಿವಿ ಅಂದರೆ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡಬೇಕು, ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ದಮನ ಮಾಡಕೂಡದು ಎಂದೇ ನಂಬಿರುವ ಸುರಂಜನ್ ದಾಸ್ "ವಿವಿಯಲ್ಲಿ ದಾಂಧಲೆ ನಡೆಸಿದವರು ನಮ್ಮ ವಿದ್ಯಾರ್ಥಿಗಳಲ್ಲ, ಬದಲಾಗಿ ಹೊರಗಿನಿಂದ ಬಂದವರು" ಎಂದು ವರದಿ ನೀಡಿದರು.

ಆದರೆ ಚೆಡ್ಡಿಗಳು ಸುಮ್ಮನಾಗಬೇಕಲ್ಲ. ಮೇ 6ರಂದು ಮೋದಿಯ ಭಕ್ತ ಅನುಪಮ್ ಖೇರ್ ಮತ್ತು ಆತ ನಟಿಸಿರುವ 'ಬುದ್ಧ ಇನ್ ಟ್ರಾಫಿಕ್ ಜ್ಯಾಮ್' (ಇದು ಕಮ್ಯುನಿಸ್ಟರನ್ನು ಖಂಡಿಸುವ ಮತ್ತು ಚೆಡ್ಡಿಗಳನ್ನು ಕೊಂಡಾಡುವ ಸಿನಿಮಾ ಎಂಬ ಮಾತಿದೆ) ಸಿನಿಮಾದ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ವಿವಿಗೆ ಭೇಟಿ ನೀಡಿ ತಮ್ಮ ಚಿತ್ರವನ್ನು ಪ್ರದರ್ಶಿಸಲು ಮುಂದಾದರು. ಮೊದಲು ವಿವಿಯ ಆಡಳಿತಕ್ಕೆ ಬಾರದ ಹಾಲ್ ಒಂದರಲ್ಲಿ ಆ ಚಿತ್ರದ ಪ್ರದರ್ಶನಕ್ಕೆ ಅನುಮತಿ ನೀಡಲಾಗಿತ್ತು, ಆದರೆ ಆನಂತರ ಈಗ ಆ ರಾಜ್ಯದಲ್ಲಿ ಚುನಾವಣೆಗಳು ನಡೆಯುತ್ತಿರುವುದರಿಂದ ಅನುಮತಿಯನ್ನು ಹಿಂದೆ ಪಡೆಯಲಾಯಿತು. ಇದರಿಂದ ಕೆರಳಿದ ಚೆಡ್ಡಿಗಳು ಅನುಮತಿ ಇಲ್ಲದೆ ಬಯಲಿನಲ್ಲಿ ಚಿತ್ರಪ್ರದರ್ಶನವನ್ನು ಹಮ್ಮಿಕೊಂಡರು. ಎಡಪಂಥೀಯರು ಅದನ್ನೇನು ವಿರೋಧಿಸಲಿಲ್ಲ. ತಮಗೆ ಅಭಿವ್ಯಕ್ತಿ ಸ್ವಾತಂತ್ರ ಇರುವಂತೆಯೇ ಬಲಪಂಥೀಯರಿಗೂ ಇದೆ ಎಂದ ಅವರು ಅದರ ಜೊತೆಗೆ 'ಅನುಮತಿ ಇಲ್ಲದೆ ಅವರು ಚಿತ್ರವೊಂದನ್ನು ಪ್ರದರ್ಶಿಸಿದರೆ ನಾವೂ ಅನುಮತಿ ಇಲ್ಲದೆ ಚಿತ್ರವೊಂದನ್ನು ಪ್ರದರ್ಶಿಸುತ್ತೇವೆ' ಎಂದು ಹೇಳಿ 'ಮುಜಫರ್‌ನಗರ್ ಅಭಿ ಬಾಕಿ ಹೈ' ಎಂಬ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲು ಮುಂದಾದರು. ಅಷ್ಟೇ ಅಲ್ಲ, ಅನುಪಮ್ ಖೇರ್ ಮತ್ತು ವಿವೇಕ್ ಅಗ್ನಿಹೋತ್ರಿ ಆಗಮಿಸಿದಾಗ ಅವರ ವಿರುದ್ಧ ಕಪ್ಪುಬಾವುಟಗಳನ್ನು ಎಡಪಂಥೀಯರು ಪ್ರದರ್ಶಿಸಿದರಾದರೂ ಅವರಿಬ್ಬರ ಮೇಲೆ ಯಾರೂ ದಾಳಿ ಮಾಡದಂತೆ ರಕ್ಷಣೆಯನ್ನೂ ನೀಡಿದರು. ಆದರೆ ಚೆಡ್ಡಿಗಳು ಎಂತಹ ವಿಕೃತಿಗಳೆಂದರೆ ಹೀಗೆ ರಕ್ಷಣೆಯನ್ನು ನೀಡಿದ ವಿದ್ಯಾರ್ಥಿಗಳ ಮೇಲೆಯೇ ದಾಳಿ ಮಾಡಿದರು. ಆಮೇಲೆ 'ಮುಜಫರ್‌ನಗರ್ ಅಭಿ ಬಾಕಿ ಹೈ' ಪ್ರದರ್ಶನಗೊಳ್ಳುತ್ತಿದ್ದಲ್ಲಿಗೂ ಹೋದ ಚೆಡ್ಡಿಗಳು ಅಲ್ಲೂ ವಿದ್ಯಾರ್ಥಿಗಳ ಮೇಲೆ ಹರಿಹಾಯ್ದರು. ಅಷ್ಟೇ ಅಲ್ಲ, ಅಲ್ಲಿದ್ದ ಹಲವು ಮಹಿಳಾ ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಕೆಟ್ಟದಾಗಿ ಘೋಷಣೆಗಳನ್ನು ಕೂಗಿದರಲ್ಲದೆ, ಹಲವರ ಮೇಲೆ ದೈಹಿಕವಾಗಿಯೂ ದಾಳಿ ಮಾಡಿದರು.

ಕೊನೆಗೆ ವಿವಿಯ ಆಡಳಿತ ಮಂಡಳಿ, ನಾಲ್ವರು ಎಬಿವಿಪಿ ಸದಸ್ಯರ ವಿರುದ್ಧ ದೂರನ್ನು ದಾಖಲಿಸಿತು. ಇದು ಚೆಡ್ಡಿಗಳನ್ನು ಮತ್ತಷ್ಟು ಕೆರಳಿಸಿತು. ಆಗ ಬಿಜೆಪಿ ನಾಯಕಿ ರೂಪಾ ಗಂಗೂಲಿ (ಮಹಾಭಾರತ ಟಿವಿ ಸೀರಿಯಲ್‌ನಲ್ಲಿ ದ್ರೌಪದಿ ಪಾತ್ರ ಮಾಡಿದ್ದಾಕೆ) ತನ್ನ ಗೂಂಡಾಗಳೊಂದಿಗೆ ಹಾಜರಾಗಿ ಮತ್ತಷ್ಟು ಗಲಭೆ ಮಾಡಿದಳು.

ಎಬಿವಿಪಿ ಸದಸ್ಯರು ಎಂತಹ ಕೆಟ್ಟಕೊಳಕು ಮನಸ್ಸಿನವರು ಎಂದರೆ, "ನಿಮ್ಮವರು ಮಹಿಳಾ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಿದ್ದು ಯಾಕೆ" ಎಂದು ಪ್ರಶ್ನಿಸಿದರೆ, ಒಬ್ಬ ಎಬಿವಿಪಿ ನಾಯಕ "ಅವರ ಮುಖಗಳನ್ನು ನೋಡಿ. ಅವರ ಮೈಮೇಲೆ ದಾಳಿ ಮಾಡುವಷ್ಟು ಸುಂದರಿಯರಾಗಿದ್ದಾರೆಯೇ ಅವರು? ನಾವು ರೂಪವತಿಯರು ಮತ್ತು ಬಿಗುಮಾನದ ಸಂಸ್ಕಾರಸ್ಥ ಮಹಿಳೆಯರ ಮೇಲೆ ಮಾತ್ರ ಅತ್ಯಾಚಾರ ಎಸಗುವುದು" ಎಂದಿದ್ದಾನೆ.

ಮರುದಿನವೇ ಜಾದವ್‌ಪುರ್ ವಿವಿಯ ವಿದ್ಯಾರ್ಥಿಗಳು ಕೊಲ್ಕತ್ತಾದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡರು. ಈಗ ಅಲ್ಲಿ ಪರೀಕ್ಷೆಗಳು ನಡೆಯುತ್ತಿದ್ದರೂ 2,000 ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭಾಗವಹಿಸಿದ್ದರು. ವಿದ್ಯಾರ್ಥಿಗಳೊಂದಿಗೆ ವಿವಿಯ ಅಧ್ಯಾಪಕರೂ ಕೈಜೋಡಿಸಿದರು. ಅದಕ್ಕೆ ಪ್ರತಿಯಾಗಿ ಚೆಡ್ಡಿಗಳ ವಿಕೃತರು ವಿವಿಯ ಪ್ರವೇಶ ದ್ವಾರದ ಮೇಲೆ ಪಾಕಿಸ್ತಾನದ ಧ್ವಜ ಹಾರುತ್ತಿರುವಂತೆ ಫೋಟೋಶಾಪ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡರು. ಜೊತೆಗೆ ಮೊನ್ನೆ, ಮೇ 9ರಂದು, ವಿವಿಯ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಂಡರು. ಅದರಲ್ಲಿ ಈಗ ನಲವತ್ತು ದಾಟಿರುವ ಚೆಡ್ಡಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಂತೆ ಪೋಸು ಕೊಟ್ಟಿದ್ದು ಹಾಸ್ಯಾಸ್ಪದವಾಗಿತ್ತು.

ಇದೆಲ್ಲದರ ಹಿಂದೆ ಚೆಡ್ಡಿಗಳ ಚುನಾವಣಾ ತಂತ್ರ ಇದೆ. ಜಾದವ್‌ಪುರ್ ವಿವಿಯಲ್ಲಿಯೇ ಓದಿ ಅಲ್ಲೀಗ ಅಧ್ಯಾಪಕರಾಗಿರುವ ಸಮಂತಕ್ ದಾಸ್ ಎನ್ನುವವರು ಬರೆದಿರುವಂತೆ "2011ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪಶ್ಚಿಮ ಬಂಗಾಳದಲ್ಲಿ ಸಿಕ್ಕಿದ್ದು ಶೇ 4.06 ಮತಗಳು ಮತ್ತು ಶೂನ್ಯ ಸೀಟುಗಳು. ಆದರೆ 2014ರ ಸಂಸತ್ತು ಚುನಾವಣೆಯಲ್ಲಿ ಬಿಜೆಪಿಯ ಓಟುಗಳು ಶೇ 11.66ಕ್ಕೆ ಏರಿ ಇಬ್ಬರು ಸಂಸದರು ಆಯ್ಕೆಯಾದರು. ಈಗ ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳ ಮತ್ತು ತೃಣಮೂಲ ಪಕ್ಷದ ವಿರುದ್ಧ ಅಸಮಾಧಾನ ಹೆಚ್ಚಾಗಿದೆ. ಅದರಲ್ಲೂ ಈಗ ಮೊದಲ ಬಾರಿಗೆ ಓಟ್ ಹಾಕುವ ಅರ್ಹತೆ ಪಡೆದಿರುವ ಯುವ ಜನತೆಯಲ್ಲಿ ಆ ಅಸಮಾಧಾನ ಹೆಚ್ಚಾಗಿದೆ. ಈ ಯುವ ಜನತೆ ಸುಲಭವಾಗಿ ದೇಶಭಕ್ತಿ ಮತ್ತು ಭಾರತ್ ಮಾತಾ ಕಿ ಜೈ ತರಹದ ತಂತ್ರಗಳಿಗೆ ಬಲಿಯಾಗುತ್ತಾರೆ. ಅದಕ್ಕೇ ಸರ್ಕಾರ ವಿವಿಯ ಮೇಲೆ ದಾಳಿ ಮಾಡುತ್ತಿದೆ."

ಇದನ್ನು ಬರೆಯುತ್ತಿರುವಾಗಲೇ ಮೋದಿ ಸರ್ಕಾರ ಅಲಹಾಬಾದ್ ವಿವಿಯಲ್ಲೂ ಇಂತಹದ್ದೇ ಕುತಂತ್ರವನ್ನು ಮಾಡಿರುವ ಸುದ್ದಿ ಬರುತ್ತಿದೆ. ಈ ಎಲ್ಲಾ ಕುತಂತ್ರಗಳು ಇನ್ನೂ ಮುಂದುವರೆಯುತ್ತದೆ ಮತ್ತು ಇನ್ನೂ ಹೆಚ್ಚಿನ ವಿವಿಗಳ ಮೇಲೂ ಪ್ರಯೋಗವಾಗುತ್ತದೆ. ಯಾಕೆಂದರೆ ಮೋದಿ ಸರ್ಕಾರ ತೋರಿಸಿಕೊಳ್ಳುವ ಸಾಧನೆಯನ್ನೇನೂ ಮಾಡಿಲ್ಲ, ಚುನಾವಣೆ ಮುನ್ನ ಕೊಟ್ಟ ಯಾವ ಭರವಸೆಯನ್ನೂ ಈಡೇರಿಸಿಲ್ಲ. ನಕಲಿಶಾಮರಿಂದ ಇಷ್ಟಲ್ಲದೆ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ, ಹೇಳಿ?

ದಲಿತ, ಅಲ್ಪಸಂಖ್ಯಾತ ಯುವಕರ ಹೆಮ್ಮೆಯ ಸಾಧನೆ

ನಿನ್ನೆ ಯುಪಿಎಸ್‌ಸಿ ಪರೀಕ್ಷೆಗಳ ಫಲಿತಾಂಶ ಹೊರಬಿದ್ದಾಗ ದೇಶದಾದ್ಯಂತ ಬಹಳಷ್ಟು ...ರಿಗೆ ತಮ್ಮ ಕುಟುಂಬದವರೇ ಒಬ್ಬರು ಆ ಕಠಿಣ ಪರೀಕ್ಷೆಗಳಲ್ಲಿ ಪಾಸ್ ಆದಷ್ಟು ...ೋಷವಾಯಿತು. ಅದರಲ್ಲೂ ದಲಿತರಿಗೆ ಮತ್ತು ದಲಿತರ ಪರ ಇರುವವರಿಗೆ ...ಪ್ರಮವೋ ಸಂಭ್ರಮ. ಅವರೆಲ್ಲರ ಸಂಭ್ರಮಕ್ಕೆ ಕಾರಣ ಯುಪಿಎಸ್‌ಸಿ ಪರೀಕ್ಷೆಯಲ್ಲಿ ...ಮ ಸ್ಥಾನ ಪಡೆದ ಟೀನಾ ದೋಬಿ. ಆಕೆ ದಲಿತ ಕುಟುಂಬದವಳು.



...ಟೀನಾಳ ತಂದೆ ಮತ್ತು ತಾಯಿ ಇಬ್ಬರೂ ಇಂಜಿನಿಯರ್‌ಗಳು. ...ರೆ ಆ ಪರೀಕ್ಷೆಗಳನ್ನು ಎದುರಿಸಲು ಟೀನಾ ಪ್ರತಿ ದಿನ 8 ...ದ ಹತ್ತು ಗಂಟೆಗಳ ಕಾಲ ಓದುತ್ತಿದ್ದಳು. ಮಗಳ ಓದಿಗೆ ...ವುದೇ ಅಡಚಣೆ ಬಾರದಂತೆ ನೋಡಿಕೊಳ್ಳಲು ಆಕೆಯ ತಾಯಿ ...ೂನಿ ತಮ್ಮ ಇಂಜಿನಿಯರ್ ವೃತ್ತಿಗೆ ರಾಜೀನಾಮೆ ನೀಡಿ ಮಗಳ ...ಬಲಕ್ಕೆ ನಿಂತರು. ನಿನ್ನೆ ಟೀನಾ "ನನ್ನ ಗೆಲುವಿಗೆ ಕಾರಣ ನನ್ನ ...ಮ" ಎಂದು ತನ್ನ ತಾಯಿಗೆ ಥ್ಯಾಂಕ್ಸ್ ಹೇಳಿದಳು. ಟೀನಾಳ ...ಧನೆಯನ್ನು ಮೆಚ್ಚುತ್ತಾ ಬಿಜೆಪಿಯ ದಲಿತ ಸಂಸದ ಉದಿತ್ ...ಜ್ ಹೀಗೆ ಟ್ವೀಟ್ ಮಾಡಿದರು: "ನೆಪೋಲಿಯನ್ ಹೇಳಿದ್ದರು ...ಕಾಶ ಇಲ್ಲದಿದ್ದರೆ ಪ್ರತಿಭೆಯನ್ನು ಕೃಷಿ ಮಾಡಲಾಗುವುದಿಲ್ಲ' ಎಂದು." ಹಾಗೆಯೇ ...ುಜನ ವಿದ್ಯಾರ್ಥಿ ಸಂಘಟನೆಯ ರಾಜ್ಯ ನಾಯಕ ಹರಿರಾಮ್ ಅವರು ಫೇಸ್‌ಬುಕ್‌ನಲ್ಲಿ ...ಗೆ ಬರೆದರು: "ಇದು ಬಾಬಾಸಾಹೇಬ್ ಅಂಬೇಡ್ಕರ್ ಅವರ 125ನೇ ಹುಟ್ಟುಹಬ್ಬಕ್ಕೆ ...ರುವ ನಿಜವಾದ ಉಡುಗೊರೆ. ಅವರು ಇವತ್ತು ಇದ್ದಿದ್ದರೆ ಕಣ್ಣೀರು ಹಾಕುತ್ತಿದ್ದರು. ...ರೆ ಅವು ಸಂತೋಷದ ಬಾಷ್ಪಗಳಾಗಿರುತ್ತಿದ್ದವು. ಅಭಿನಂದನೆಗಳು ಸಹೋದರಿ ...ಾ ಅವರಿಗೆ."

...ನಿಜ, ಟೀನಾ ಬಡ ಕುಟುಂಬದವಳಲ್ಲ, ಆಕೆ ಇತರೆ ದಲಿತರಂತೆ ...ೋಷಣೆಗೊಳಪಟ್ಟವಳಲ್ಲ, ಆದರೂ ನಮ್ಮ ದೇಶದಲ್ಲಿ ಇವತ್ತಿಗೂ ದಲಿತರಿಗಿಂತ ...ಲು' ಜಾತಿಯ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಅಂತಹ ಕುಟುಂಬಗಳ ...ಳೂ ಇದೇ ಪರೀಕ್ಷೆಗಳನ್ನು ಬರೆದಿದ್ದಾರೆ. ಆದ್ದರಿಂದ ಮೊದಲ ಪ್ರಯತ್ನದಲ್ಲೇ ...ರೆಲ್ಲರನ್ನು ಹಿಮ್ಮೆಟ್ಟಿಸಿ ಒಬ್ಬ ಹೆಣ್ಣುಮಗಳು, ಅದರಲ್ಲೂ ಒಬ್ಬ ದಲಿತ ಹೆಣ್ಣುಮಗಳು ...ಮ ಸ್ಥಾನ ಪಡೆಯುತ್ತಾಳೆಂದರೆ ನಮ್ಮಂಥವರಿಗೆ ಸಂತೋಷ ಆಗದೇ ಇರುತ್ತದೆಯೇ.

...ನ್ನು, ಎರಡನೆ ಸ್ಥಾನ ಪಡೆದ ಅಥರ್ ಆಮಿರ್-ಉಲ್ ಶೇಖ್ ಬಗ್ಗೆ ಒಂದೆರಡು ...ತು. ಈತ ಕಾಶ್ಮೀರದ ಒಂದು ಪುಟ್ಟ ಹಳ್ಳಿಯವನು. ಕಾಶ್ಮೀರದಲ್ಲಿ ಹಲವು ...ಗಳಿಂದ ಏನಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಒಂದೆಡೆ ಪ್ರತ್ಯೇಕತಾವಾದಿಗಳ ಆರ್ಭಟ, ಇನ್ನೊಂದೆಡೆ ಪೊಲೀಸ್ ಮತ್ತು ಸೈನ್ಯದ ದಮನ. ಇಂತಹ ಸ್ಥಿತಿಯಲ್ಲಿ ಅದೆಷ್ಟೋ ಕಾಶ್ಮೀರದ ಯುವಕರು ದಾರಿ ತಪ್ಪುತ್ತಿದ್ದಾರೆ ಅಥವಾ ಕನಸುಗಳನ್ನೇ ಕಳೆದುಕೊಂಡು ಬದುಕುತ್ತಿದ್ದಾರೆ. ಆದರೆ ಅಂತಹವನ್ನೆಲ್ಲ ಮೀರಿ ಈ ಅಥರ್ ಆಮಿರ್-ಉಲ್ ಶೇಖ್ ಎಂಬ ಮುಸಲ್ಮಾನ ಯುವಕ ಎರಡನೆ ಸ್ಥಾನ ಪಡೆದಿರುವುದೂ ಹೆಮ್ಮೆಯ ಸಂಗತಿಯೇ.


ಮೂರನೆ ಸ್ಥಾನ ಪಡೆದಿರುವ ಜಸ್ಮೀತ್ ಸಿಂಗ್ ಸಂಧು ಕೂಡ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವನು. ಸಿಖ್ ಸಮುದಾಯದವನಾದ ಸಂಧು ಕೂಡ ಕಷ್ಟಪಟ್ಟು ಓದಿ ಮೂರನೆ ರ್‍ಯಾಂಕ್ ಪಡೆದಿದ್ದಾನೆ.

ಇವರೆಲ್ಲರಿಗಿಂತ ದೊಡ್ಡ ಸಾಧನೆ ಮಾಡಿರುವವನು ಅನ್ಸರ್ ಅಹಮದ್ ಶೇಖ್. ಮಹಾರಾಷ್ಟ್ರದ ಒಂದು ಕುಗ್ರಾಮದ ಅನ್ಸರ್ ಓರ್ವ ಆಟೋರಿಕ್ಷಾ ಡ್ರೈವರ್‌ರ ಪುತ್ರ. ಆತನ ತಂದೆಗೆ ಮೂವರು ಹೆಂಡತಿಯರು. ಅನ್ಸರ್ ಅಪ್ಪನ ಎರಡನೆ ಹೆಂಡತಿಯ ಮಗ. ಆತನ ಕುಟುಂಬದಲ್ಲಿ ಯಾರೂ ಓದಿದವರು ಇಲ್ಲ. ಆದರೆ ಅನ್ಸರ್ ಮೊದಲಿನಿಂದಲೂ ಓದಿನಲ್ಲಿ ಚುರುಕು. ಆತ ಡಿಗ್ರಿ ಪಡೆದ ನಂತರ ಯುಪಿಎಸ್‌ಸಿ ಪರೀಕ್ಷೆಗೆ ಟ್ರೈನಿಂಗ್ ಪಡೆಯಲು ಪೂನಾಕ್ಕೆ ಹೋದ. ಆದರೆ ಅಲ್ಲಿ ಅನ್ಸರ್ ಮುಸಲ್ಮಾನ ಎಂಬ ಕಾರಣಕ್ಕೆ ಯಾರೂ ಹಾಸ್ಟಲ್ ರೂಮ್ ಅನ್ನು ಬಾಡಿಗೆಗೆ ನೀಡಲಿಲ್ಲ. ಆಗ ಆತ "ನನ್ನ ಹೆಸರು ಶುಭಂ" ಎಂದು ಸುಳ್ಳು ಹೇಳಿ ರೂಮ್ ಪಡೆಯಬೇಕಾಯಿತು. ಇವತ್ತು ಅನ್ಸರ್ ತನ್ನ ಪ್ರಥಮ ಪ್ರಯತ್ನದಲ್ಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ 361 ರ್‍ಯಾಂಕ್ ಪಡೆದಿದ್ದಾನೆ. "ನಾನು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪಾಸಾಗಿದ್ದೇನೆ ಎಂದೂ, ಪ್ರಾಯಶಃ ಐಎಎಸ್ ಅಧಿಕಾರಿ ಆಗುತ್ತೇನೆಂದೂ ನನ್ನ ಕುಟುಂಬದರಿಗೆ ಹೇಳಿದಾಗ ಅವರಿಗೆ ನಂಬಲಿಕ್ಕಾಗಲಿಲ್ಲ. ಅದೇನೇ ಇರಲಿ, ಇನ್ನು ಮುಂದೆ ನಾನು ಹೆಸರು ಅನ್ಸರ್ ಎಂದು ಹೇಳುತ್ತೇನೆ ಹೊರತು ಸುಳ್ಳು ಹೆಸರನ್ನು ಹೇಳುವುದಿಲ್ಲ" ಎನ್ನುತ್ತಾನೆ. ಅಷ್ಟೇ ಅಲ್ಲ, ಮುಸಲ್ಮಾನ ಆಗಿರುವುದಕ್ಕೆ ತನ್ನ ಜೀವನದುದ್ದಕ್ಕೂ ಅನ್ಯಾಯಕ್ಕೆ ತುತ್ತಾಗುತ್ತಲೇ ಬಂದಿರುವ ಅನ್ಸರ್ ಐಎಎಸ್ ಅಧಿಕಾರಿಯಾಗಿ ಕೋಮು ಸೌಹಾರ್ದಕ್ಕೆ ದುಡಿಯುವುದಾಗಿ ಹೇಳಿದ್ದಾನೆ.

ದರಿದ್ರ ಜಾತಿ ವ್ಯವಸ್ಥೆ ಮತ್ತು ವಿಷಕಾರಿ ಕೋಮುದ್ವೇಷದಲ್ಲೇ ಬೆಂದುಹೋಗಿರುವ ನಮ್ಮ ದೇಶದಲ್ಲಿ ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯದ ಇಂತಹ ಯುವಕರು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸವಾಲುಗಳನ್ನು ಮೀರಿ ಇಷ್ಟು ದೊಡ್ಡ ಸಾಧನೆಯನ್ನು ಮಾಡಿರುವುದು ಭವಿಷ್ಯದಲ್ಲಿ ಭರವಸೆಯನ್ನು ಮೂಡಿಸುತ್ತದೆ.



ಉತ್ತರ ಕನ್ನಡ: ಡಿಸಿ-ಎಮ್ಮೆಲ್ಲೆ ಡಿಶುಂ!.... ಡಿಶುಂ!!



ಡಿಸಿ ಉಜ್ವಲ್ ಕುಮಾರ್

ಉತ್ತರ ಕನ್ನಡದ ಜಿಲ್ಲಾಡಳಿತ ಹಳಿ ತಪ್ಪಿದೆ! ಜಿಲ್ಲೆಯ ಕಾರ್ಯಾಂಗದ ಕಪ್ತಾನ್ ಜಿಲ್ಲಾಧಿಕಾರಿ ಉಜ್ವಲ್‌ಕುಮಾರ್ ಘೋಷ್ ಮತ್ತು ಶಾಸಕಾಂಗದ ಹಿಟ್ಲರ್‌ಶಾಹಿ ಸರದಾರ ಆರ್.ವಿ. ದೇಶಪಾಂಡೆ ಗ್ಯಾಂಗಿಗೆ ಆಡಳಿತಾರೂಢ ಕಾಂಗ್ರೆಸ್‌ನ ನಾಲ್ವರು ಎಮ್ಮೆಲ್ಲೆ ಮತ್ತೊಬ್ಬ ಎಮ್ಮೆಲ್ಸಿಯ ಪಂಚರ ಕೋಳಿ ತಿರುಗಿಬಿದ್ದು ಗುಟುರು ಹಾಕುತ್ತಿದೆ. ಡಿಸಿ ಉಜ್ವಲ್‌ರ ಕಂಡ-ಕಂಡಲ್ಲಿ ಗುರಾಯಿಸುತ್ತಿರುವ ಕಾರವಾರದ ಶಾಸಕ ಸತೀಶ್ ಸೈಲ್, ಕುಮಟೆಯ ಶಾರದಾ ಶೆಟ್ಟಿ, ಭಟ್ಕಳದ ಮಂಕಾಳ ವೈದ್ಯ, ಯಲ್ಲಾಪುರದ ಶಿವರಾಮ ಹೆಬ್ಬಾರ್ ಹಾಗು ಎಮ್ಮೆಲ್ಸಿ ಶ್ರೀಕಾಂತ ಘೋಟನೇಕರ್ ಅಸಹನೆ ಈಗ ಮಿತಿಮೀರಿ ಹೋಗಿದೆ! ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯುತ್ತಿದೆ. ಈ ಅಧಿಕಪ್ರಸಂಗಿ ಅಧಿಕಾರಸ್ಥರ ಒಣ ರುಬಾಬಿನ ಕಿತ್ತಾಟದಿಂದ ಅಮಾಯಕರು ಅನುಭವಿಸುತ್ತಿರುವ ಗೋಳು ಹೇಳತೀರದು!!


ಹೆಚ್ಚುಕಮ್ಮಿ ಕಳೆದೊಂದು ವರ್ಷದಿಂದ ನಡೆಯುತ್ತಿರುವ ಡಿಸಿ ಮತ್ತು ಪಂಚ ಶಾಸಕರ ಮುಸುಕಿನ ಗುದುಮುರಿಗೆ ಈಗ ಭರ್ಜರಿ ಬೀದಿ ಕಾಳಗವಾಗಿ ಮಾರ್ಪಟ್ಟಿದೆ. ಹೊರನೋಟಕ್ಕೆ ಕಾನೂನುಬದ್ಧ ಐಎಎಸ್‌ನಂತೆ ಕಾಣಿಸುವ ಜಿಲ್ಲಾಧಿಕಾರಿ ಉಜ್ವಲ್ ಒಳಗುಟ್ಟು ದೇಶಪಾಂಡೆಗಷ್ಟೇ ಗೊತ್ತು! ಹುಡುಗು ಬುದ್ಧಿ ಹುಂಬತನದ ಉಜ್ವಲ್‌ರ ಕಟ್ಟುನಿಟ್ಟು ಅಸಹಾಯಕರ ಕಂಗೆಡಿಸಿದ್ದೂ ಇದೆ, ಜನಪ್ರತಿನಿಧಿಗಳ ಪ್ರಭಾವಳಿಗೆ ಮಂಕು ಬಡಿಸಿ ಆಡಳಿತಶಾಹಿಯ ಹುಚ್ಚಾಟಕ್ಕೆ ಆಸ್ಪದವಾಗಿದ್ದೂ ಇದೆ. ಬಿಸಿರಕ್ತದ ಬ್ರಹ್ಮಚಾರಿ ಡಿಸಿಯ ದೌರ್ಬಲ್ಯ ಅರ್ಥ ಮಾಡಿಕೊಂಡಿರುವ ತಲೆ ಮಾಸಿದ ಅನುಭವಿ ರಾಜಕಾರಣಿ ದೇಶಪಾಂಡೆ ತನಗಾಗದ ಪಂಚ ಶಾಸಕರ ಹಣಿಯಲು ಆತನನ್ನು ಅಸ್ತ್ರ ಮಾಡಿಕೊಂಡಿದ್ದಾರೆ. ದೇಶಪಾಂಡೆಯ ಈ ಕಂತ್ರಿ ರಾಜಕಾರಣವೇ ಇವತ್ತು ಉತ್ತರ ಕನ್ನಡದಲ್ಲಿ ಡಿಸಿ-ಎಮ್ಮೆಲ್ಲೆ ಕಾಳಗ ಭುಗಿಲೆದ್ದು ಆಡಳಿತ ಅಧ್ವಾನವಾಗಲು ಮೂಲ ಕಾರಣ!!

ದೇಶಪಾಂಡೆಯ ಧಡಪ್‌ಶಾಹಿ ಆಡಳಿತ ವೈಖರಿ ಈಗ ಮೊದಲಿನಂತಿಲ್ಲ. ಆತ ದಳದಲ್ಲೇ ಇರಲಿ, ಕಾಂಗ್ರೆಸಲ್ಲೇ ಇರಲಿ ಸ್ವ-ಪಕ್ಷದ ಶಾಸಕರನ್ನೆಲ್ಲ ಮೆಟ್ಟನಿಂತು ದೌರ್ಜನ್ಯದ ದರ್ಬಾರು ನಡೆಸಿಕೊಂಡಿದ್ದರು. ಆದರೀಗ ವಯೋಸಹಜ ಹಿನ್ನಡೆ ಬೆನ್ನಟ್ಟಿದೆ; ಜನರಿಗೂ ಆತನ ಫ್ಯೂಡಲ್ ಪಾತಕ ಅರ್ಥವಾಗಿದೆ. ಶಾಸಕರು ಆತನ ಏಕಚಕ್ರಾಧಿಪತ್ಯ ಪ್ರಶ್ನಿಸಿ ನೆಲೆ ಕಾಣಲು ಹವಣಿಸುತ್ತಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮವೇ ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ದೇಶಪಾಂಡೆ ಸಾಹೇಬರ ಕುಲಕಂಠೀರವ ಪ್ರಶಾಂತನಿಗಾದ ಹೀನಾಯ ಸೋಲು! ತನ್ನ ಮಗ ಮೂಲೆಗುಂಪಾಗಲು ಸ್ವ-ಪಕ್ಷದ ಶಾಸಕರ ಸಂಘಟಿತ ಸಂಚೇ ಕಾರಣವೆಂಬ ತೀರ್ಮಾನಕ್ಕೆ ಬಂದ ದೇಶಪಾಂಡೆ ಶತ್ರು ಶಾಸಕರ ನಿಯಂತ್ರಿಸಲು ಡಿಸಿ ಉಜ್ವಲ್‌ರ ಛೂಬಿಟ್ಟುಬಿಟ್ಟರು. ಮೊದಲೇ ಜನಪ್ರತಿನಿಧಿಗಳೆಂದರೆ ಪೂರ್ವಾಗ್ರಹದಿಂದ ದೂರ ನಿಲ್ಲಿಸುವ ಜಾಯಮಾನದ ಡಿಸಿಗೆ ಸರ್ವಶಕ್ತ ಮಂತ್ರಿ ದೋಷಪಾಂಡೆ ಸಾಹೇಬರ ಕುಮ್ಮಕ್ಕು ಸಿಕ್ಕಿದ್ದೇ ತಡ, ಡಿಶುಂ!... ಡಿಶುಂ...!! ಸದ್ದು ಜಿಲ್ಲಾಡಳಿತದಲ್ಲಿ ಮೊಳಗಲಾರಂಭಿಸಿತು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾರ್ಯಾಂಗಕ್ಕಿಂತ ಜನಪ್ರತಿನಿಧಿ ಮೇಲು. ಜಿಲ್ಲಾಧಿಕಾರಿ ಐಎಎಸ್ ಆದರೂ ಶಾಸಕರನ್ನು 'ಸರ್' ಎಂದು ಸಂಬೋಧಿಸುವುದು ಶಿಷ್ಟಾಚಾರ; ಕಡ್ಡಾಯ. ತನ್ನನ್ನು ಕಾಣಲು ಶಾಸಕ ಬಂದಿದ್ದಾನೆಂದು ಗೊತ್ತಾದ ತಕ್ಷಣ ಬಾಗಿಲಿಗೆ ಬಂದು ಬರಮಾಡಿಕೊಳ್ಳಬೇಕು ಡಿಸಿ ಸಾಹೇಬ. ಹಾಗೆಯೇ ಶಾಸಕ ಬೇಕಾಬಿಟ್ಟಿಯಾಗಿ ಮಾತಾಡುವಂತೆಯೂ ಇಲ್ಲ. ಮಿಸ್ಟರ್ ಡೆಪ್ಯೂಟಿ ಕಮೀಷನರ್ ಅಥವಾ ಮಿಸ್ಟರ್ ಸೋ ಅಂಡ್ ಸೋ ಎಂದು ಎಮ್ಮೆಲ್ಲೆ ಮಾತು ಆರಂಭಿಸಿ ಗೌರವಿಸಬೇಕು. ಹಾಗಂತ ಕಾನೂನುಬಾಹಿರ ಕೆಲಸಕ್ಕೆ ಒತ್ತಡ, ರಾಜಕೀಯ ಹಿಕಮತ್ತು ಪ್ರಯೋಗ ಶಾಸಕ ಡಿಸಿ ಮೇಲೆ ಮಾಡುವಂತಿಲ್ಲ. ಇಂಥ ರೀತಿ-ರಿವಾಜಿರುವಾಗ ಜಿಲ್ಲಾಧಿಕಾರಿ ಶಾಸಕರ ಫೋನ್ ಕರೆಯನ್ನೇ ಸ್ವೀಕರಿಸದೇ ಕಡೆಗಣಿಸಿದರೆ ಏನರ್ಥ? ಕ್ಷೇತ್ರದ ಸಮಸ್ಯೆ ಹೇಳಿದಾಗ ಸ್ಪಂದಿಸದೇ ಕಾನೂನಿನ ಕೊಕ್ಕೆ ಹಾಕಿದರೆ ಏನಾದೀತು? ಭಾರತದಂಥ ಸಮಸ್ಯೆ-ಸಂಕಷ್ಟ-ಕಾನೂನಿನ ತೊಡಕಿನ ದೇಶದಲ್ಲಿ ಜಿಲ್ಲಾಧಿಕಾರಿಯಾದವನು ಕೊಂಚ ರಿಯಾಯಿತಿ, ಕರುಣೆ, ಮಾನವೀಯತೆ ಅಳವಡಿಸಿಕೊಳ್ಳದಿದ್ದರೆ ಐಎಎಸ್‌ನಿಂದೇನು ಪ್ರಯೋಜನ?

ಸರಿ. ಆದರೆ ಅರ್ಹ-ಅಸಹಾಯಕ ಬೆಟ್ಟದ ಜೀವಗಳ ಸಂಕಷ್ಟವೂ ಜಿಲ್ಲಾಧಿಕಾರಿಗೆ ಅರ್ಥವಾಗುತ್ತಿಲ್ಲ ಏಕೆ?

ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆ ಆದ ಹೊರತೂ ಹಳ್ಳಿಗಳಲ್ಲೂ ಬಡವರು ಮನೆ ಕಟ್ಟುವಂತಿಲ್ಲ ಎಂಬುದು ಸರ್ಕಾರದ ಮೂರ್ಖ ನಿಯಮ. ಸದ್ರಿ ಕಾನೂನು ಡಿಸಿ ಉಜ್ವಲ್ ಕೈಯ್ಯಲ್ಲಿ ಗಂಡಾಂತರಕಾರಿಯಾಗಿ ಝಳಪಿತ ಆಗುತ್ತಿದೆ. ಹೀಗಾಗಿ ಹಳ್ಳಿಗಾಡಿನ ಬಡವರು ಪಡುತ್ತಿರುವ ಕಷ್ಟ ಒಂದೆರಡಲ್ಲ. ಸಾಲ ಮಾಡಿ ಪುಟ್ಟ ಗುಡಿಸಲು ಕಟ್ಟಲೆಂದು ಎನ್‌ಎ (ಬಿನ್ ಶೇತ್ಕಿ)ಗೆ ಅರ್ಜಿ ಹಾಕಿದರೆ ಡಿಸಿ ಸಾಹೇಬರು ನೂರೆಂಟು ಕ್ವಾಯರಿ ಹಾಕಿ ತಿರಸ್ಕರಿಸುತ್ತಾರೆ. ಹಾಗಂತ ಗಿಲ್ಮಿಟ್ ಮಂದಿ ಹೋಗಿ ಪೂಸಿ ಹೊಡೆದರೆ, ಉಘೇ, ಉಘೇ ಹಾಕಿದರೆ ಅಂಥವರ ಎನ್‌ಎ ಸಲೀಸಾಗಿ ಆಗಿದ್ದೂ ಇದೆ. ಏನೂ ಬೇಡ ಕೇಂದ್ರ ಮಂತ್ರಿ ನಿತಿನ್




ಡಿಸಿಗೆ ಬಯ್ಯುತ್ತಿರುವ ಎಂಎಲ್‌ಎ


ಗಡ್ಕರಿಯ ಐಆರ್‌ಬಿ ಉತ್ತರ ಕನ್ನಡದಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಮಾಡುವ ಕಾಮಗಾರಿ ಹಿಡಿದರೆ ಈ ಕಂಪನಿಯ ಹತ್ತಾರು ಎಕರೆ ಭೂಮಿ ರಾತ್ರೋರಾತ್ರಿ ಎನ್‌ಎ ಆಗಿದ್ದೂ ಇದೆ. ಬಡವರು ಡಿಸಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಶಾಸಕರ ಸಖ್ಯದ ರಿಯಲ್ ಎಸ್ಟೇಟ್ ಲಾಬಿಗೆ ಅಂಕುಶ ಇಡುವ ಆವಸರದಲ್ಲಿ ಬದುಕು ಕಟ್ಟಿಕೊಳ್ಳುವ ಕನಸಲ್ಲಿರುವ ನಿಷ್ಪಾಪಿಗಳಿಗೆ ಡಿಸಿಯಿಂದ ತೊಂದರೆ ಆಗುತ್ತಿರುವುದು ವಿಪರ್ಯಾಸ!

ಇಂಥದೇ ಎಡವಟ್ಟು ಉತ್ತರ ಕನ್ನಡ ಜಿಲ್ಲಾಡಳಿತದಲ್ಲಾಗಿದೆ. ಶಾಸಕರಾದ ಶಾರದಾ ಶೆಟ್ಟಿ, ಶಿವರಾಮ ಹೆಬ್ಬಾರ್, ಸತೀಶ್ ಸೈಲ್, ಮಂಕಾಳ ವೈದ್ಯ ಮತ್ತು ಶ್ರೀಕಾಂತ ಘೋಟನೇಕರ್ ಒಂದಲ್ಲ ಒಂದು ಸಂದರ್ಭದಲ್ಲಿ ಡಿಸಿ ಉಜ್ವಲ್ ತನ್ನನ್ನು ಉದಾಸೀನದಿಂದ ಕಾಣುತ್ತಿದ್ದಾರೆ; ತಮ್ಮ ಕ್ಷೇತ್ರದ ಸಮಸ್ಯೆ ಪರಿಹಾರ ಮಾಡದೇ ಸತಾಯಿಸಿ ಜನರ ಮುಂದೆ ತಲೆತಗ್ಗಿಸುವಂತೆ ಮಾಡುತ್ತಿದ್ದಾರೆಂದು ಒಂದು ವರ್ಷದಿಂದ ಗೊಣಗುತ್ತಲೇ ಬಂದಿದ್ದರು. ಈಗದು ಕತ್ತಿ ಕಾಳಗವಾಗಿ ಹೋಗಿದೆ. ಅರಣ್ಯ ಹಕ್ಕು ಕಾಯ್ದೆ, ಬಿನ್ ಶೇತ್ಕಿ ಭೂ ಪರಿವರ್ತನೆ, ಕುಡಿಯುವ ನೀರು ಪೂರೈಕೆ-ಸಮಸ್ಯೆ, ಶಾಸಕರ ಅನುದಾನ ವ್ಯಯದಂಥ

ಹಿಂದೆಂದೂ ಕಂಡರಿಯದ ಬಿಸಿಲು-ಬರ ಈ ಬಾರಿ ಉತ್ತರ ಕನ್ನಡ ಬಾಧಿಸುತ್ತಿದೆ. ಕುಡಿವ ನೀರಿಗೂ ತತ್ವಾರ ಬಂದಿದೆ. ಈ ಕುಡಿವ ನೀರು ಪೂರೈಕೆಯಲ್ಲಿ




ದೇಶಪಾಂಡೆ




ಶಿವರಾಮ




ಶಾರದಾ ಶೆ



ಘೋಟನೇಕರ್



ಸತೀಶ್ ಸೈಲ್




ರಾಮ್‌ಮನೋಹರ್

ಮಹತ್ವ ವಿಷಯದಲ್ಲೂ ಡಿಸಿ ತಮ್ಮನ್ನು ಗಣನೆಗೇ ತೆಗೆದುಕೊಳ್ಳುತ್ತಿಲ್ಲ ಎಂಬ ಸಿಟ್ಟು ಪಂಚ ಶಾಸಕರದು.

ಅನುಸೂಚಿತ ಬುಡಕಟ್ಟು ಮತ್ತು ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆಯಂತೆ ಅತಿಕ್ರಮಣದಾರರಿಗೆ ಭೂಮಿ ಮಂಜೂರಿ ವಿಷಯ ಡಿಸಿ ಮತ್ತು ಶಾಸಕರ ನಡುವಿನ ಮನಸ್ತಾಪಕ್ಕೆ ಮೊಟ್ಟಮೊದಲ ನೆಪ! ಸುಮಾರು 90 ಸಾವಿರ ಅರಣ್ಯ ಅತಿಕ್ರಮಣದಾರರು ಹಕ್ಕಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಭೂ ಮಂಜೂರಾತಿಯಲ್ಲಿ ಇಲ್ಲದ ಕೊಕ್ಕೆ ಹಾಕಿ ಡಿಸಿ ಕ್ಯಾತೆ ತೆಗೆಯುತ್ತಾರೆ; ಬಡವರಿಗೆ ಅನ್ಯಾಯ ಮಾಡುತ್ತಿದ್ದಾರೆಂಬುದು ಶಾಸಕರ ಅಳಲು. ಆದರೆ ಇದೇ ಶಾಸಕರು ಐದಾರು ಎಕರೆ ಅರಣ್ಯ ಅತಿಕ್ರಮಿಸಿರುವಂಥವರ, ಬೇರೆ ಭೂಮಿಯಿದ್ದರೂ ಅರಣ್ಯ ಭೂಮಿ ಮಂಜೂರಿ ಕೇಳುತ್ತಿರುವವರ ಪರ ವಕಾಲತ್ತು ಮಾಡುತ್ತಿದ್ದಾರೆಂಬುದು ಡಿಸಿ ಪರಿವಾರದ ಆಕ್ಷೇಪ. ಉಳ್ಳವರಿಗೆ ನಿಯಮದ ಅಂಕುಶ ಇಡುವುದು

ಡಿಸಿ ಸಾಹೇಬರು ಕಟ್ಟುನಿಟ್ಟಿನ ನಿಯಮ ಪಾಲನೆಗೆ ಹೇಳಿದ್ದಾರೆ. ಇದು ಜನರ ನಡುವೆ ರಾಜಕಾರಣ ಮಾಡುವ ಶಾಸಕರ ಕುಂಡಿಗೆ ಬೆಂಕಿ ಹಚ್ಚಿದೆ! ಶಾಸಕ ಸೈಲ್, ವೈದ್ಯ, ಹೆಬ್ಬಾರ್‌ಗಳೆಲ್ಲ ತುಂಡುಗುಪ್ಪಳವೇ ಹೊಡೆಯುತ್ತಿದ್ದಾರೆ. ಬರದ ನೆಪದಲ್ಲಿ ಬೇಕಾಬಿಟ್ಟಿಯಾಗಿ ಬೋರ್ ಕೊರೆಯದಂತೆ ಡಿಸಿ ಆಜ್ಞೆ ಮಾಡಿದ್ದಾರೆ; ಟ್ಯಾಂಕರ್ ಮೂಲಕ ನೀರು ಪೂರೈಕೆಗೂ ಮಿತಿ ಹೇರಿದ್ದಾರೆ. ನೀರಿನ ಲಾರಿಗಳಿಗೆ ಜಿಪಿಎಸ್ ಅಳವಡಿಸಿದ್ದಾರೆ. ಇದೆಲ್ಲ ಓಕೆ; ಶಾಸಕರ ಬೇಡಿಕೆಗೆ ಉದಾರವಾಗಿ ಸ್ಪಂದಿಸಿ ನೀರು ಕೊಡಲು ಡಿಸಿ ಮೊಂಡುತನ ಪ್ರದರ್ಶಿಸುತ್ತಿರುವುದೇಕೆ? ಮರಳು, ಕೆಂಪು ಚಿರೆ ಕಲ್ಲು, ಜಲ್ಲಿ ಗಣಿಗಾರಿಕೆಗೆ ಡಿಸಿ ಉಜ್ವಲ್ ಕಡಿವಾಣ ಹಾಕಿದ್ದಾರೆ. ಇದರಿಂದ ಸಮಸ್ಯೆ-ಸಂಕಷ್ಟ ಬಂದಿರುವುದು ಜನಸಾಮಾನ್ಯರಿಗಷ್ಟೇ. ಹಣವಂತರು, ಅಧಿಕಾರಸ್ಥರ ಮಹಲುಗಳು ಏರುತ್ತಲೇ ಇವೆ; ರೇತಿ ಮಾಫಿಯಾ ಯಾವ್ಯಾವುದೋ ನದಿಯಿಂದ ರೇತಿ



ಮಂಕಾಳ್ ವೈದ್ಯ

ತೆಗೆದು ಎಲ್ಲೆಲ್ಲೋ ಸಂಗ್ರಹಿಸಿ ಮಾರುತ್ತಿದೆ.
ಅಘನಾಶಿನಿಯಲ್ಲಿ ಕಾನೂನು ಧಿಕ್ಕರಿಸಿ ಮರಳ
ನಡೆಯುತ್ತಿದೆ. ಪ್ರಭಾವಿಗಳು ಸಿಆರ್‌ಝಡ್
ಬುದ್ಧಿಪೂರ್ವಕವಾಗೇ ಕಡೆಗಣಿಸಿ ರೆಸಾರ್ಟ್
ಹೋಮ್‌ಸ್ಟೇ ಮಾಡಿ ದೋಚುತ್ತಿದ್ದಾರೆ. ಇದ
ಖಡಕ್ ಡಿಸಿ ಸಾಹೇಬರಿಗೆ ಕಾಣಿಸುತ್ತಿಲ್ಲ.

ಡಿಸಿ ಸಾಹೇಬರು ತಾವು ಅದೆಷ್ಟೇ ಜನ
ಎಂದು ಪೋಸು ಕೊಟ್ಟರೂ ಸರ್ಕಾರಿ ಕಚೇರಿ
ಲಂಚಾವತಾರ-ಭ್ರಷ್ಟಾಚಾರವೇನೂ ಕಮ್ಮಿಯಾ
ಬಡವರು, ಅನಕ್ಷರಸ್ಥರು ತಾಲ್ಲೂಕು ಕಚೇರಿಗ
ಅಲೆದಲೆದೇ ಹೈರಾಣಾಗುತ್ತಿದ್ದಾರೆ. ಸರ್ಕಾರಿ
ಪಾಪದವರನ್ನು ಗೋಳಾಡಿಸುತ್ತಿರುವುದು ಬ
ಅಮಾನುಷವಾಗಿದೆ. ಜನಪ್ರತಿನಿಧಿಗಳೆಲ್ಲ ಘಟಿ
ಶೋಷಕರು, ತಾನೊಬ್ಬನೇ ಜನಸಾಮಾನ್ಯರಿಗೆ
ನೀಡಬಲ್ಲ ಪುಣ್ಯವಂತ ಎಂಬ ಯೋಚನೆಯ
ಉಜ್ವಲ್‌ಗೆ ಮಂತ್ರಿ ದೇಶಪಾಂಡೆಯ ದಾಳ
ತಾನಾಗುತ್ತಿದ್ದೇನೆಂಬ ಅರಿವು ಇವತ್ತಿಗೂ ಮ
ಸುಖಾಸುಮ್ಮನೆ ಶಾಸಕರನ್ನು ಎದುರು ಹಾಕಿ
ಜಿಲ್ಲಾಡಳಿತದ ದಿಕ್ಕು ತಪ್ಪಿಸಿಬಿಟ್ಟಿದ್ದಾರೆ. ಅಧಿಕ
ಅಕ್ರಮ ಕೆಲಸ ಮಾಡಿಸಿ, ತನ್ನಿಚ್ಛೆಯಂತೆ ಜಿಲ
ನಡೆಸುವುದರಲ್ಲಿ ದೇಶಪಾಂಡೆ ನಂಬರ್ ಒನ್
ಚಾಂಪಿಯನ್; ಆತನ ಮೂರೂವರೆ ದಶಕದ
ಪರ್ವದಲ್ಲಿ ಇಂಥ ಅಕ್ರಮ-ಅನ್ಯಾಯ-ಅವಾಂತ
ದಿನದಿನವೂ ನಡೆದ ನಿದರ್ಶನಗಳಿವೆ. ದಾದಾ
ದೇಶಪಾಂಡೆ ಕಾನೂನುನಿಷ್ಠ ಡಿಸಿ ಮತ್ತಿತರ
ಅಧಿಕಾರಿಗಳ ಸಹಿಸಿಕೊಂಡ ಪುರಾವೆ ಒಂದೂ
ಇಂಥ ದೇಶಪಾಂಡೆ ಮತ್ತು 'ಖಡಕ್' ಡಿಸಿ
ನಡುವೆ ಹೊಂದಾಣಿಕೆ ಇದೆ ಎಂದರೆ ಏನರ್ಥ

ಈಗ ಪಂಚ ಶಾಸಕರು ಡಿಸಿಯಿಂದ ತಮ
ಯಾವ್ಯಾವ ರೀತಿಯ ಸಮಸ್ಯೆ ಎದುರಾಗುತ್ತಿ
ಯಾವ್ಯಾವ ಬೇಡಿಕೆ ಈಡೇರುತ್ತಿಲ್ಲ ಎಂದು
ಹೊಡೆಯುತ್ತಿದ್ದಾರೋ ಆ ಕೊರತೆಯೆಲ್ಲ
ದೇಶಪಾಂಡೆಯ ಹಳಿಯಾಳದಲ್ಲೂ ಇರುವಂ
ಆದರೆ ದೇಶಪಾಂಡೆ ಎಂದೂ ಡಿಸಿ ಅಸಹಕಾ
ಎಡವಟ್ಟು ಎಂದು ಹೇಳಿದ್ದೇ ಇಲ್ಲ. ಅಂದರೆ
ದೇಶಪಾಂಡೆ ಡಿಸಿ ಕಾರ್ಯವೈಖರಿಯಿಂದ
ಖುಷಿಗೊಂಡಿದ್ದಾರೆಂದಾಯ್ತಲ್ಲವಾ? ಇದರರ್ಥ
ಡಿಸಿ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿ
ನೀತಿ ಅನುಸರಿಸುತ್ತಿದ್ದಾರೆ. ದೇಶಪಾಂಡೆಯ
ರಾಜಕಾರಣಕ್ಕೆ ಬಲಿಯಾಗಿ ಶಾಸಕರಿಂದ
ಬೈಸಿಕೊಳ್ಳುತ್ತಿದ್ದಾರೆ. ದೇಶಪಾಂಡೆಗೆ ತೋರಿಸು
ರಿಯಾಯಿತಿ, ಆತನ ಜತೆ ಮಾಡಿಕೊಂಡಿರುವ
ಹೊಂದಾಣಿಕೆ ಇತರ ಶಾಸಕರೊಂದಿಗೆ ಡಿಸಿ
ಮಾಡಿಕೊಂಡರೆ ವಿವಾದ ಆಗುವ ಚಾನ್ಸೇ ಇ
ದೇಶಪಾಂಡೆ ಮಾತುಕೇಳಿ ಡಿಸಿ ಸಮಸ್ಯೆ ಮೈ
ಎಳೆದು ಕೊಳ್ಳುತ್ತಿದ್ದಾರೆ. ಒಂದಂತೂ ಖರೆ.
ಜಿಲ್ಲೆಯಲ್ಲಿ ಭುಗಿಲೆದ್ದಿರುವ ಅರಾಜಕತೆಗೆ
ದೇಶಪಾಂಡೆಯ ದುಷ್ಟತನ, ದ್ವೇಷಾಸೂಯೆಯ
ಮೇಲಾಟವೇ ಕಾರಣ.

ದೇಶಪಾಂಡೆ ವೈರಿ ಶಾಸಕರು ಮತ್ತು ಡಿ
ಇಟ್ಟಿರುವ ಫಿಟ್ಟಿಂಗ್‌ನ ಅಡ್ಡ ಪರಿಣಾಮ ಕಳೆ
ಅಸೆಂಬ್ಲಿ ಅಧಿವೇಶನದಲ್ಲಾಗಿದೆ. ರೆಬೆಲ್ ಶಾಸ
ಲೀಡರ್ ಯಲ್ಲಾಪುರದ ಎಮ್ಮೆಲ್ಲೆ ಶಿವರಾಮ
ಡಿಸಿ ಉಜ್ವಲ್ ಕುಮಾರ್‌ರ ಅಸಹಕಾರ,
ಕಿರುಕುಳದಿಂದ ಕ್ಷೇತ್ರದಲ್ಲಿ ಕೆಲಸಗಳಾಗುತ್ತಿಲ್ಲ
ಸ್ಪೀಕರ್ ಕಾಗೋಡು ತಿಮ್ಮಪ್ಪರಿಗೆ ದೂರಿದ್ದಾರೆ
ಶಿವರಾಮ್ ಹೆಬ್ಬಾರ್‌ರ ಕಂಪ್ಲೇಂಟ್ ಧಾಟಿ
ಜೋರಾಗಿತ್ತೆಂದರೆ, ಸ್ಪೀಕರ್ ತಿಮ್ಮಪ್ಪರೇ ಡಿಸಿ
ರಾಂಗ್ ಆಗಿಬಿಟ್ಟರು. ಡಿಸಿ-ದೇಶಪಾಂಡೆ ನಂ

ವೂ ಕಾಗೋಡರಿಗೆ ಗೊತ್ತಾಗಿರಬೇಕು. ಹೀಗಾಗಿ ನೇರ ಕಂದಾಯ ಮಂತ್ರಿ ಶ್ರೀನಿವಾಸ್ ಪ್ರಸಾದ್‌ಗೆ ಕನ್ನಡ ಡಿಸಿ ಮೇಲೆ ಕ್ರಮ ಕೈಗೊಂಡು ಯಿಸಲು ಆದೇಶಿಸಿದ್ದರು. "ಕಂದಾಯ ಗಳೇ ನೀವೇ ಆ ಡಿಸಿನ ವರ್ಗಾ ಮಾಡ್ರಿ... ಪಾಂಡೆಯವ್ರಿಗೆ ಆತನ ಬಗ್ಗೆ ಪ್ರೀತಿ ತುದು..." ಎಂಬರ್ಥ ಮಾತಾಡಿದ್ದರು ಸ್ಪೀಕರ್ ೇತು.

ಷ್ಟಾದರೂ ಡಿಸಿ ಉಜ್ವಲ್‌ರನ್ನು ಒಂಚೂರೂ ಾಡಿಸಲು ಪಂಚ ಶಾಸಕರಿಂದಾಗಲಿಲ್ಲ. ಿಯಲ್ಲೇ ಸಾಕ್ಷಾತ್ ಸ್ಪೀಕರ್‌ರಿಂದಲೇ ಳಿಸಿಕೊಂಡ ಡಿಸಿಯನ್ನು ಕಂದಾಯ ಯಿಂದ ಎತ್ತಂಗಡಿ ಮಾಡಲಾಗಲಿಲ್ಲ. ಅಷ್ಟು ಫುಲ್ ದೇಶಪಾಂಡೆ! ಸ್ಪೀಕರ್-ಕಂದಾಯ ಗಳನ್ನೆಲ್ಲ ನಿಭಾಯಿಸಿ ತನ್ನ ಅಚ್ಚುಮೆಚ್ಚಿನ ನೀಲಿ ಹುಡುಗ ಉಜ್ವಲ್‌ರನ್ನು ಜಿಲ್ಲೆಯಲ್ಲೇ ಕೊಂಡಿದ್ದಾರೆ ದೇಶಪಾಂಡೆ. ಈಗ ಪಂಚ ಶಾಸಕರ ಯ ಕಟ್ಟೆ ಒಡೆದುಹೋಗಿದೆ. ಐದೂ ಶಾಸಕರು ಕ್ಕಲ್ಲಿ ಡಿಸಿ ಉಜ್ವಲ್ ಮೇಲೆ ಮುರಕೊಂಡು ತ್ತಿದ್ದಾರೆ. ಈಚೆಗೆ ಹೊನ್ನಾವರದಲ್ಲಿ ದೇಶಪಾಂಡೆ ಕೊಂಡಿದ್ದ ಬರ-ಕುಡಿವ ನೀರು ಪೂರೈಕೆ ಪಣಾ ಮೀಟಿಂಗ್‌ನಲ್ಲಿ ಭಟ್ಕಳದ ಭಂಡ ಶಾಸಕ ಾಳ ವೈದ್ಯ ಏಕವಚನದಲ್ಲೇ ಡಿಸಿಯನ್ನು ಬೈದು-ದಲಿಸಿ ಮೋಕಳಿಕ್ ಆಗಿದ್ದಾನೆ!

"ಏ ಜಿಲ್ಲಾಧಿಕಾರಿ ನೀನು ಸರ್ಕಾರದ ಸುತ್ತೋಲೆ ುತ್ತಿಲ್ಲ... ನಾನು ಹೇಳಿದ ಕೆಲ್ಸಾ ಒಂದೂ ಯಿಲ್ಲ... ನನ್ನ ಫೋನ್ ಕೂಡ ನೀನು ೋದಿಲ್ಲ... ಎಮ್ಮೆಲ್ಲೆ ಫೋನ್ ತಗಳೋಕೂ ೇದಿಲ್ಲಾಂತಾದ್ರೆ ನೀನು ಡಿಸಿ ಆಗ್ಲಿಕ್ಕೆ ಯೋಗ್ಯತೆ ವ್ನು....!!" ಎಂದು ವೀರಾವೇಶದಿಂದ ಕೂಗಾಡಿದ ಾಳಗೆ ಜನರಿಂದ ಭಾರೀ ಕರತಾಡನದ ಬೆಂಬಲ . ಒಂದೇ ಹಾರಾಟಕ್ಕೆ ಮಂಕಾಳ ಆ್ಯಂಟಿ ೋನಂತಾದರೆ ಡಿಸಿ ಉಜ್ವಲ್ ಪಕ್ಕಾ ವಿಲನ್ ೋದರು. ಶಾಸಕನಾಗಿ ಮಂಕಾಳ ತನ್ನ ಬೇಗುದಿ ರಹಾಕಿದ್ದು ತಪ್ಪೇನೂ ಅಲ್ಲ. ಆದರೆ ಏಕವಚನದಲ್ಲಿ ಾರಿಯನ್ನು ನಿಂದಿಸುವ ಥರ ಮಾತಾಡಿದ್ದು ಮಾತ್ರ ುವೇ ಸರಿ!

ಮಗುವನ್ನು ಚಿವುಟಿ ನಂತರ ತೊಟ್ಟಿಲು ತೂಗುವ ಕರಗತ ಮಾಡಿಕೊಂಡಿರುವ ದೇಶಪಾಂಡೆ ಡಿಸಿಯ ಮೋರೆ ನೋಡಿ ದಂಗಾಗಿ ಹೋದರು. ಮಂಕಾಳ ುತ್ತಿರುವುದು ಡಿಸಿಗಲ್ಲ ತನಗೇ ಎಂಬಂತೆ ಪಡಿಸಿದ ದೇಶಪಾಂಡೆ ಆತನ ಸಮಾಧಾನಪಡಿಸಲು ಾಡಿದರು. ದೇಶಪಾಂಡೆ ತೊಟ್ಟಿಲು ತೂಗಿದಂತೆಲ್ಲ ಾಳನ ಸಿಟ್ಟಿನ ಆಕ್ರಂದನ ಜೋರಾಗಿ ಹೋಯ್ತು. ಾಳನ ಮಾತುಗಾರಿಕೆ ಆತನ ಯೋಗ್ಯತೆ ಬಿಂಬಿಸಿದರೆ, ಕಂಗಾಲಾಗಿ ಕುಂತಿದ್ದ ಡಿಸಿ ಪಾಂಡೆಯ ದೂರಾಚಾರಕ್ಕೆ ಸಂಕೇತವಾಗಿದ್ದರು. ! ಅಧಿಕಾರಿಗಳನ್ನು ಜನಪರವಾಗಿ ದುಡಿಸಲು ದ ಚಾಣಾಕ್ಷತೆ, ಅಧ್ಯಯನ, ಪ್ರಾಮಾಣಿಕತೆ, ತೆಯ ಕೊರತೆಯಿಂದಾಗಿ ಪಂಚ ಶಾಸಕರು ಾರಶಾಹಿ ಎದುರು ಎಡವಿ ಬೀಳುವ ್ಲಾಂಡಿಗಳಾಗಿದ್ದಾರೆ.

ಶಾಸಕರ ಪೆದ್ದುತನದಿಂದ ಅಧಿಕಾರಿಗಳು ಆಡಿದ್ದೇ ಮಾಡಿದ್ದೇ ಕಾನೂನಾಗಿದೆ. ಡಿಸಿ ್ವಲ್‌ರಂತೆಯೇ ಜಿಲ್ಲಾ ಪಂಚಾಯ್ತಿ ಮುಖ್ಯ ್ಯನಿರ್ವಹಣಾಧಿಕಾರಿ ರಾಮಪ್ರಸಾದ್ ೋಹರ್ ಸಹ ಶಾಸಕರ ಬಾಲ ತುಳಿದು ುತ್ತಿದ್ದಾರೆ. ಈತನ ವರ್ಗಾಯಿಸುವಂತೆ ಒಮ್ಮೆ ಕಿ ಶಾರದಾ ಶೆಟ್ಟಿ, ಮಂತ್ರಿ ದೇಶಪಾಂಡೆಗೆ ತು ಮಾಡಿ ಆತನ ಫಂಕ್ಷನ್‌ಗೆ ಬಹಿಷ್ಕಾರವೂ ದ್ದರು. ಇದೇ ರಾಮ್‌ಪ್ರಸಾದ್‌ರನ್ನು ಎಮ್ಮೆಲ್ಸಿ ೇಟಸೇಕರ್ ಮಂತ್ರಿ ದೇಶಪಾಂಡೆಯ ಟಿಂಗ್‌ನಲ್ಲಿ ತರಾಟೆಗೆ ತೆಗೆದುಕೊಂಡಿದ್ದರು. ೇನ್ ಮಾಡಿದರೆ ಎತ್ತೋದಿಲ್ಲ ಯಾಕೆ? ರಾತ್ರಿ ತ್ತಲ್ಲಿ ಫೋನಾಯಿಸಿದ್ರೂ ಮೀಟಂಗ್ ಅಂತೀರಲ್ಲಾ, ನೂ ಮೀಟಂಗಾ...." ಎಂದು ಕಿಚಾಯಿಸಿದ್ದರು. ಕ ಜಬ್ಬಾರ್ ಹಾಗೂ ಸ್ಟೈಲಂತೂ ದೇಶಪಾಂಡೆ ಕ್ಷಮದೇ ಡಿಸಿಯನ್ನು ಹಂಗಿಸಿ-ಅವಮಾನಿಸಿದ್ದಕ್ಕೆ, ಲೇ ಇಲ್ಲ!

ಒಟ್ಟಿನಲ್ಲಿ ದೋಷಪಾಂಡೆಯ ದಿವಾಳಿಕೋರ ಕಾರಣದ ಜಿದ್ದಿಗೆ ಜಿಲ್ಲಾಧಿಳಿತ V/s ಪಂಚ ಕರ ಭೀಕರ ಕಾಳಗ ನಡೆಯುತ್ತಿದೆ. ಮಳೆ ುತ್ತಲೇ ಡಿಸಿ ವರ್ಗಾವಣೆ ಆಗಲಿದೆ ಎಂಬ ಸುದ್ದಿ ದೆ. ಯಾವ ಡಿಸಿ ಬಂದರೂ ಈಗಿನ ದುರಂತ ್ಥಿತಿ ಬದಲಾಗದು. ಎಲ್ಲಿವರೆಗೆ ದೇಶಪಾಂಡೆ ಜಿಲ್ಲಾ ಿಯಾಗಿರುತ್ತಾರೋ ಅಲ್ಲಿವರೆಗೆ ಉತ್ತರ ಕನ್ನಡಕ್ಕೆ ಾರ ತಪ್ಪದು!

■ ವರದಿಗಾರ


ಮೊನ್ನೆ ನಡೆದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಸ್ಥಾನ ಕೂಡ ಸುಡುಗಾಡು ಸಿದ್ಧರ ಪೈಕಿ ಸುಂದರಿ ಚೈತ್ರಶ್ರೀಯವರ ಪಾಲಾಗಿದೆ. ಹಾಗೆ ನೋಡಿದರೆ ಜಿಲ್ಲಾ ಪಂಚಾಯ್ತಿ ಎಂಬ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಿಂದ ಒಂದು ಮೌನ ಕ್ರಾಂತಿಯೇ ನಡೆದುಹೋಗಿದೆ. ಕಂಡುಕೇಳರಿಯದ ಜಾತಿಯ ಅನಾಮಧೇಯರೆಲ್ಲಾ ಮೀಸಲಾತಿ ಮಾನದಂಡದ ಮಾಂತ್ರಿಕ ಸ್ಪರ್ಶಕ್ಕೆ ಸಿಕ್ಕಿ ಅಧ್ಯಕ್ಷರಾಗಿ ಹೋಗಿದ್ದಾರೆ. ಸಹಜವಾಗಿ ದಲಿತ ವಿರೋಧಿ ಮತ್ತು ಮೀಸಲಾತಿ ವಿರೋಧಿ ಜನಗಳ ಹೊಟ್ಟೆಗೆ ಸುಣ್ಣ ಹುಯ್ದಂತಾಗಿದೆ. ಇದು ಬಹಿರಂಗವಾಗಿ ಪ್ರಕರಣಗೊಂಡಿದ್ದು ಹಾಸನದಲ್ಲಿ. ರೇವಣ್ಣ ಇಂತಹ ಮೀಸಲಾತಿ ಹೊಡೆತಕ್ಕೆ ಸಿಕ್ಕಿ ಪತ್ನಿಸಮೇತ ರೋದಿಸುತ್ತ ಪ್ರತಿಭಟಿಸತೊಡಗಿದ್ದಾರೆ. ಇದು ಪ್ರಕಟಗೊಂಡ ದಳ್ಳುರಿ. ಇದೇ ಸಂಗತಿ ಚಿಕ್ಕಮಗಳೂರಿನಲ್ಲೂ ಒಳಗೊಳಗೆ ಕುದಿಯುವಂತೆ ಮಾಡಿದೆ. ಇಲ್ಲಿ ಅಧ್ಯಕ್ಷ ಪಟ್ಟ ಹಿಂದುಳಿದ ವರ್ಗದ ಜ್ಯೋತಿ ಪಾಲಾದರೆ, ಉಪಾಧ್ಯಕ್ಷ ಪಟ್ಟ ಒಕ್ಕಲಿಗ ರಾಮಸ್ವಾಮಿ ಪಾಲಾಗಿದೆ. ಆದ್ದರಿಂದ ಇಡೀ ಜಿಲ್ಲೆಯಲ್ಲಿ ಯಾವ ಸ್ಥಾನದಲ್ಲೂ ಇಲ್ಲದ ಲಿಂಗಾಯತರು ಸಿ.ಟಿ. ರವಿಗೆ ಒತ್ತೆಯಿಟ್ಟಂತಾಗಿದ್ದಾರೆ.

ಚಿಕ್ಕಮಗಳೂರು: ಲಿಂಗಾಯತರ ಕಡೆಗಣನೆ

ಕಾಂಗ್ರೆಸ್ ರಾಜಕಾರಣದಲ್ಲಿ ಲಿಂಗಾಯತರಿಗೆ ಪ್ರಥಮ ಪ್ರಾತಿನಿಧ್ಯ ದೊರಕಲು ಸಾಧ್ಯವೇ ಇಲ್ಲವೆಂದು ಭಾವಿಸಿ ಪುರೋಹಿತಶಾಹಿಗಳ ಹಿಂಬಾಲಕರಾಗಿ ಹೋದ ಚಿಕ್ಕಮಗಳೂರಿನ ಲಿಂಗಾಯತರಿಗೆ ಜಿಲ್ಲೆಯ ರಾಜಕಾರಣದಲ್ಲಿ ಯಾವ ಪ್ರಾತಿನಿಧ್ಯವೂ ದೊರಕದೆ ಕಡೆಗಣನೆಗೆ ಗುರಿಯಾಗಿ ನರಳುವ ದುಸ್ಥಿತಿ ಬಂದೊದಗಿದೆ. ತಮ್ಮ ಪ್ರಾತಿನಿಧ್ಯದ ಬಗ್ಗೆ ಸದಾ ಚಿಂತಿಸುವ ನಮ್ಮ ನಡುವಿನ ಮುಂದುವರಿದ ಮತ್ತು ಎಚ್ಚೆತ್ತ ಜನಾಂಗವಾದ ಲಿಂಗಾಯತರು ತಮ್ಮ ಹಿತಾಸಕ್ತಿಗಾಗಿ ಬಸವ ತತ್ವಕ್ಕೇ ತಿಲಾಂಜಲಿ ಇತ್ತು ಭಗವಾಧ್ವಜ ಹಿಡಿದು ದತ್ತಪೀಠದ ಕಡೆ ಹೋಗಿದ್ದರು. ಆದರೆ ಇವರನ್ನು ಸಂಪೂರ್ಣ ಉಪಯೋಗಿಸಿಕೊಂಡ ಪುರೋಹಿತರ ಪ್ರತಿನಿಧಿಗಳಾದ ಇತರ ಶೂದ್ರರು ಎಲ್ಲಾ ಸ್ಥಾನಮಾನಗಳಲ್ಲಿ ತುಂಬಿಕೊಂಡು ಶರಣರಿಗೆ ತಕ್ಕ ಶಾಸ್ತಿ ಮಾಡಿಬಿಟ್ಟಿದ್ದಾರೆ. ಇವರ ರಾಜಕಾರಣದ ನೆಲವೇ ಎನ್‌ಕ್ರೋಚ್ ಆಗಿಬಿಟ್ಟಿದೆ. ಆದರೆ ಏನೂ ಮಾಡಲಾಗದೆ ಅಸಹಾಯಕ ಸ್ಥಿತಿಯಲ್ಲಿ ಒದ್ದಾಡುತ್ತಿದ್ದಾರೆ.



ಚೈತ್ರ



ಮೂರ್ತಿ

ಜಿಲ್ಲಾ ರಾಜಕಾರಣದ ಪ್ರಾತಿನಿಧ್ಯವನ್ನು ಗಮನಿಸುವುದಾದರೆ ಎಂಪಿಯಾಗಿ ಶೋಭಾ ಕರಂದ್ಲಾಜೆ ಮಿಂಚುತ್ತಿದ್ದಾರೆ. ಇವರು ಯಡಿಯೂರಪ್ಪನ ಬಳಗದೊಳಗಿದ್ದರೂ ಜಿಲ್ಲೆಯ ಒಕ್ಕಲಿಗರು ನಮ್ಮವಳೆಂದು ಅಭಿಮಾನದಿಂದ ಓಟು ಒತ್ತಲಾಗಿ ಸಭ್ಯ ರಾಜಕಾರಣಿ ಜಯಪ್ರಕಾಶ್ ಗೌಡರು ಸೋಲುವಂತಾಯ್ತು. ಇನ್ನು ಶೃಂಗೇರಿಗೆ ಜೀವರಾಜ, ಚಿಕ್ಕಮಗಳೂರಿಗೆ ಸಿ.ಟಿ. ರವಿ ವಕ್ಕರಿಸಿರುವುದರಿಂದ ಈ ಹೊಸ ತಲೆಮಾರಿನ ಲಿಂಗಾಯತರ ಯಾವ ನಾಯಕರು ತಲೆ ಎತ್ತದಂತೆ ನೋಡಿಕೊಳ್ಳುತ್ತಿದ್ದಾರೆ. ಇನ್ನ ಕಡೂರಿನ ಎಮ್ಮೆಲ್ಲೆ ವೈ.ಎಸ್.ವಿ. ದತ್ತ ಜಾತ್ಯತೀತ ಓಟುಗಳೊಂದಿಗೆ ಭರ್ಜರಿ ಜಯ ಸಾಧಿಸಿದ್ದಾರೆ. ಮೂಡಿಗೆರೆ ಮೀಸಲು ಕ್ಷೇತ್ರ ಜೆ.ಡಿ.ಎಸ್‌ನ ನಿಂಗಯ್ಯನವರ ಪಾಲಾಗಿದೆ. ಇಲ್ಲಿ ಕಾಂಗ್ರೆಸ್‌ನ ಚಂದ್ರಪ್ಪ ಗೆಲ್ಲುವ ಎಲ್ಲಾ ಅವಕಾಶಗಳಿದ್ದರೂ ಹೊಟ್ಟೆಕಿಚ್ಚಿನ ಮೋಟಮ್ಮ ಕಾಂಗ್ರೆಸ್‌ನ ಲೀಡರುಗಳಿಗೇ ಚಾಡಿ ಹೇಳಿ ಚಂದ್ರಪ್ಪ ಸೋಲುವಂತೆ ಮಾಡಿದರು. ಇದಕ್ಕೆ ಬೇಕಾದ ಸಾಕ್ಷಿಗಳು ಇನ್ನೂ ಜೀವಂತವಾಗಿದೆ.

ತರೀಕೆರೆ ಲಿಂಗಾಯತರ ಪಾಲಾಗುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. ಯಡಿಯೂರಪ್ಪನವರ ಕೆಜೆಪಿ ಅಭ್ಯರ್ಥಿಯ ಗೆಲುವಿಗೆ ಪಕ್ಷೇತರ ಅಭ್ಯರ್ಥಿಯೊಬ್ಬ ತೊಡಕಾಗಿ, ಶ್ರೀನಿವಾಸ್ ಎಂಬ ಕಾಂಗೈ ಆಸಾಮಿ ಗೆಲ್ಲುವಂತಾಗಿತ್ತು. ಲಿಂಗಾಯತರ ಭದ್ರಕೋಟೆಯಾಗಿದ್ದ ತರೀಕೆರೆಯೂ ಆಗಾಗ್ಗೆ ಕೈಕೊಡುತ್ತ ಅವರ ಕೋಟೆಯೇ ಶಿಥಿಲವಾಗಿ ಹೋಗಿದೆ. ಇನ್ನ ಬೀರೂರು ಕ್ಷೇತ್ರವಾಗಿದ್ದ ಕಾಲದಲ್ಲಿ ದಕ್ಷ ಪ್ರಾಮಾಣಿಕ ಲಿಂಗಾಯತ ಲೀಡರುಗಳು ಇಲ್ಲಿಂದ ಬಂದಿದ್ದರು. ಡಿ.ಸಿ. ಶ್ರೀಕಂಠಪ್ಪನವರು ತಮ್ಮ ಸರಳ ಸಜ್ಜನಿಕೆ ನಡವಳಿಕೆಯಿಂದಲೇ ಮಲೆನಾಡಿನ ಗಟ್ಟಿಸ ಗೌಡರನ್ನು ಸೋಲಿಸಿ ಮೂರು ಬಾರಿ ಎಂ.ಪಿ. ಆಗಿದ್ದರು.


ಯಾವಾಗ ಉಡುಪಿ ಕ್ಷೇತ್ರವಾಗಿ ವಿಂಗಡಣೆಯಾಯ್ತೋ ಅಂದಿನಿಂದ ಎಂ.ಪಿ ಸೀಟು ಬಯಲುಸೀಮೆಯಿಂದ ಕೈತಪ್ಪಿ ಹೋಯ್ತು. ಇತ್ತ ಬೀರೂರು ಕ್ಷೇತ್ರವೂ ಕಡೂರಿಗೆ ಸೇರ್ಪಡೆಯಾದ್ದರಿಂದ ಲಿಂಗಾಯತರ ಕ್ಷೇತ್ರವೊಂದು ಮುಳುಗಿಹೋಯ್ತು.

ಕಡೂರು ಕೂಡ ಆಗಾಗ್ಗೆ ಲಾಟರಿ ಹೊಡೆದಂತೆ ಅವಕಾಶಗಳನ್ನು ಲಿಂಗಾಯತರ ಬುಟ್ಟಿಗೆ ಹಾಕುತ್ತಿತ್ತು. ಆದರೆ ಅಲ್ಲಿನ ಕುರುಬರು ಮತ್ತು ಲಿಂಗಾಯತರ ಜಟಾಪಟಿ ನೋಡಿದ ಮತದಾರ ರೋಸಿ ಜಾತ್ಯತೀತ ಮನಸ್ಸಿನ ದತ್ತ ಅವರನ್ನು ಆಯ್ಕೆ ಮಾಡಿಕೊಂಡಿದೆ. ಆದರೆ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಈ ದತ್ತನ ಬುಡವೂ ಅಲ್ಲಾಡಿದೆ. ಮುಂದೆ ಇಲ್ಲಿ ಕಾಂಗ್ರೆಸ್‌ಗೇ ಭದ್ರಬುನಾದಿಯಾಗಿರುವುದರಿಂದ ಲಿಂಗವಂತರು ಕಾಂಗ್ರೆಸ್ ಕಡೆ ಮುಖ ಮಾಡಿದರೆ ಈ ಕ್ಷೇತ್ರ ದಕ್ಕಬಹುದು. ಇನ್ನ ಪಾರ್ಟಿಗಳ ಪ್ರೆಸಿಡೆಂಟ್‌ಗಿರಿಯೂ ಲಿಂಗಾಯತರ ಕೈಲಿಲ್ಲ. ಕಾಂಗ್ರೆಸಿನ ವಿಜಯಕುಮಾರ್, ಜೆಡಿಎಸ್‌ನ ಮಂಜಪ್ಪ ಲಿಂಗಾಯತರಲ್ಲ. ಕಲ್ಮರಡಪ್ಪ ಲಿಂಗಾಯತ ಬಿಜೆಪಿ ಅಧ್ಯಕ್ಷನಾದರೂ ಈತ ಸಿ.ಟಿ. ರವಿ ಚೇಲನಾದ್ದರಿಂದ ಒಂದು ರೀತಿ ಸಿ.ಟಿ. ರವಿಯೇ ಜಿಲ್ಲಾಧ್ಯಕ್ಷ ಎನ್ನುವಂತಾಗಿದೆ.

ಮೊನ್ನೆ ನಡೆದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಸ್ಥಾನ ಕೂಡ ಸುಡುಗಾಡು ಸಿದ್ಧರ ಪೈಕಿ ಸುಂದರಿ ಚೈತ್ರಶ್ರೀಯವರ ಪಾಲಾಗಿದೆ. ಹಾಗೆ ನೋಡಿದರೆ ಜಿಲ್ಲಾ ಪಂಚಾಯ್ತಿ ಎಂಬ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಿಂದ ಒಂದು ಮೌನ ಕ್ರಾಂತಿಯೇ ನಡೆದುಹೋಗಿದೆ. ಕಂಡುಕೇಳರಿಯದ ಜಾತಿಯ ಅನಾಮಧೇಯರೆಲ್ಲಾ ಮೀಸಲಾತಿ ಮಾನದಂಡದ ಮಾಂತ್ರಿಕ ಸ್ಪರ್ಶಕ್ಕೆ ಸಿಕ್ಕಿ ಅಧ್ಯಕ್ಷರಾಗಿ ಹೋಗಿದ್ದಾರೆ. ಸಹಜವಾಗಿ ದಲಿತ ವಿರೋಧಿ ಮತ್ತು ಮೀಸಲಾತಿ ವಿರೋಧಿ ಜನಗಳ ಹೊಟ್ಟೆಗೆ ಸುಣ್ಣ ಹುಯ್ದಂತಾಗಿದೆ. ಇದು ಬಹಿರಂಗವಾಗಿ ಪ್ರಕರಣಗೊಂಡಿದ್ದು ಹಾಸನದಲ್ಲಿ. ರೇವಣ್ಣ ಇಂತಹ ಮೀಸಲಾತಿ ಹೊಡೆತಕ್ಕೆ ಸಿಕ್ಕಿ ಪತ್ನಿಸಮೇತ ರೋದಿಸುತ್ತ ಪ್ರತಿಭಟಿಸತೊಡಗಿದ್ದಾರೆ. ಇದು ಪ್ರಕಟಗೊಂಡ ದಳ್ಳುರಿ. ಇದೇ ಸಂಗತಿ ಚಿಕ್ಕಮಗಳೂರಿನಲ್ಲೂ ಒಳಗೊಳಗೆ ಕುದಿಯುವಂತೆ ಮಾಡಿದೆ. ಇಲ್ಲಿ ಅಧ್ಯಕ್ಷ ಪಟ್ಟ ಹಿಂದುಳಿದ ವರ್ಗದ ಜ್ಯೋತಿ ಪಾಲಾದರೆ, ಉಪಾಧ್ಯಕ್ಷ ಪಟ್ಟ ಒಕ್ಕಲಿಗ ರಾಮಸ್ವಾಮಿ ಪಾಲಾಗಿದೆ. ಆದ್ದರಿಂದ ಇಡೀ ಜಿಲ್ಲೆಯಲ್ಲಿ ಯಾವ ಸ್ಥಾನದಲ್ಲೂ ಇಲ್ಲದ ಲಿಂಗಾಯತರು ಸಿ.ಟಿ. ರವಿಗೆ ಒತ್ತೆಯಿಟ್ಟಂತಾಗಿದ್ದಾರೆ. ಇಂತಹ ರಾಜಕಾರಣದಿಂದ ಬೇಸತ್ತ ಜಿಲ್ಲಾ ಲಿಂಗಾಯತರು ಸಿ.ಟಿ. ರವಿಗೆ ಮುಂದಿನ ಚುನಾವಣೆಯಲ್ಲಿ ತಕ್ಕ ಶಾಸ್ತಿ ಮಾಡಲು ಕಾಯುತ್ತಿದ್ದಾರೆ. ಆದರೆ ಕಾಂಗ್ರೆಸ್ ಎಂಬ ಹೋಕಗೇಡಿ ಪಾರ್ಟಿಗೆ ಇಂತಹ ಅವಕಾಶವನ್ನು ಉಪಯೋಗಿಸಿಕೊಳ್ಳುವ ಬುದ್ಧಿವಂತಿಕೆಯೇ ಇಲ್ಲ.

ಮುಂದಿನ ವಿಧಾನಸಭಾ ಚುನಾವಣೆಗೆ ಇಲ್ಲಿ, ಸಮರ್ಥರಾದ ಎಂಟು ಜನ ಅಭ್ಯರ್ಥಿಗಳಿದ್ದಾರೆ. ಚುನಾವಣೆಗೆ ಬೇಕಾದ ಹಣ ಗುಡ್ಡೆ ಹಾಕಿಕೊಂಡಿರುವ ವಿಜಯಕುಮಾರ, ತಮ್ಮ ನೇರ ನಿಷ್ಠೂರ ಮಾತುಗಳಿಂದಲೇ ಪಾರ್ಟಿಯವರನ್ನೇ ಎದುರು ಹಾಕಿಕೊಳ್ಳುವ ಗಾಯತ್ರಿ ಶಾಂತೇಗೌಡ, ಸೌಮ್ಯ ಸ್ವಭಾವದ ಶಾಂತೇಗೌಡ, ಶಾಸಕನಾಗಲು ಎಲ್ಲಾ ಅರ್ಹತೆಗಳಿದ್ದರೂ ದುಡ್ಡಿನ ಕೊರತೆಯಿರುವ ಎಂ.ಎಲ್.ಮೂರ್ತಿ, ಇವರಂತೆಯೇ ಇದ್ದರೂ ಸಾಂಸ್ಕೃತಿಕವಾಗಿ ಗುರುತಿಸಿಕೊಂಡಿರುವ ರವೀಶ್ ಬಸಪ್ಪ ಹಾಗು ಎ.ಎನ್. ಮಹೇಶ್ ಇದ್ದಾರೆ. ಇವರಲ್ಲದೆ ರಾಜಕಾರಣದಲ್ಲಿ ಹೇರಳವಾಗಿ ಹಣ ಮಾಡಿಕೊಂಡು ರಾಜಕಾರಣದ ಗುಜರಿ ಸೇರಿರುವ ಸಗೀರ್ ಅಹಮದ್ ಕೂಡ ಇದ್ದಾರೆ.

ಇವರೆಲ್ಲಾ ಮುಂದಿನ ಚುನಾವಣೆಗೆ ತಯಾರಿ ನಡೆಸುತ್ತ ಟಿಕೆಟ್‌ಗಾಗಿ ಕಾದಿರುವವರು. ಆದರೆ, ಇವರಲ್ಲಿ ಯಾರೊಬ್ಬನಿಗೂ ಟಿಕೆಟ್ ಸಿಕ್ಕರೂ ಉಳಿದವರೆಲ್ಲಾ ಸಿ.ಟಿ. ರವಿ ಪಾಲಾಗಿ ತಟಸ್ಥವಾಗೊ, ಭೂಗತವಾಗೊ ಅಥವಾ



ರಾಮಸ್ವಾಮಿ

ಪುಣ್ಯ ಕ್ಷೇತ್ರಗಳಿಗೆ ಪ್ರವಾಸ ಹೋಗಿಯೋ, ಕಾಂಗ್ರೆಸ್‌ಗೆ ಕೈಕೊಡುವುದರಿಂದ ಹಾಳೂರಿಗೆ ಉಳಿದವನೇ ಗೌಡನಂತಾಗುತ್ತದೆ. ಆದ್ದರಿಂದ ಈಗಲಾದರೂ ಲಿಂಗಾಯತರು ಎಚ್ಚೆತ್ತು ತರೀಕೆರೆ-ಕಡೂರು-ಚಿಕ್ಕಮಗಳೂರಲ್ಲಿ ತಮ್ಮ ಜನಾಂಗದ ಪ್ರತಿನಿಧಿಗಳನ್ನು ತಯಾರು ಮಾಡಿ ಕಾಂಗ್ರೆಸ್ ದೊಡ್ಡಿಯ ಬಾಗಿಲಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರೆ ಜಿಲ್ಲೆ ಮತ್ತೆ ಅವರ ಕೈತಪ್ಪದಂತೆ ತಮ್ಮ ಪಾಲಿನ ಹಕ್ಕುಗಳು ದಕ್ಕಬಹುದು. ಸದ್ಯದ ಸಿದ್ದರಾಮಯ್ಯನ ಬಳಿ ಇವರದೇನೂ ನಡೆಯುವುದಿಲ್ಲ. ಮುಂದಿನ ಕಾಂಗ್ರೆಸ್ ನಾಯಕರಿಗೆ ಜಿಲ್ಲೆಯ ತಮ್ಮ ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟರೆ ಖಂಡಿತ ಲಿಂಗವಂತರು ಕಳೆದುಕೊಂಡಿರುವ ಕ್ಷೇತ್ರಗಳು ದಕ್ಕಬಹುದು.

ಅಂದಹಾಗೆ, ಚಿಕ್ಕಮಗಳೂರಿನ ಎಲ್ಲಾ ತಾಲ್ಲೂಕುಗಳವರೂ ಮಂತ್ರಿಗಳಾಗಿ ಮೆರೆದು ಮಣ್ಣಾಗಿದ್ದಾರೆ. ಆದರೆ ಇಲ್ಲಿಯವರೆಗೆ ಕಡೂರಿನಿಂದ ಆಯ್ಕೆಯಾದ ಯಾರೂ ಮಂತ್ರಿಗಳಾಗಿಲ್ಲ. ಯಾಕೆಂದರೆ ಅಲ್ಲಿ ಗೆದ್ದವರೆಲ್ಲಾ ಕುರುಬರು. ಅವರನ್ನು ಕರೆದು ಯಾರೂ ಕೂಡ ಮಂತ್ರಿ ಮಾಡಲಿಲ್ಲ. ದಳದ ಕಾಲದಲ್ಲಿ ಮೂರು ಬಾರಿ ಗೆದ್ದ ಕೆ.ಎಂ. ಕೃಷ್ಣಮೂರ್ತಿ ದೇವೇಗೌಡರ ಬಳಿಗೆ ಹೋಗಿ "ಮಂತ್ರಿ ಮಾಡಿ" ಎಂದಾಗ ಗೌಡರು "ಸಿದ್ದರಾಮಯ್ಯನ ಬಳಿಗೆ ಹೋಗಿ ಕೇಳು" ಎಂದರು. ಸಿದ್ದು ಇಂತಹ ಜಾತಿಬಾಂಧವರನ್ನು ಬೆಳೆಸಿದ ಉದಾಹರಣೆಯೇ ಇರಲಿಲ್ಲ. ಆದ್ದರಿಂದ ಮೂರು ಬಾರಿ ಗೆದ್ದರೂ ಮಂತ್ರಿಯಾಗುವ ಕನಸಿನಿಂದಲೇ ಕೃಷ್ಣಮೂರ್ತಿ ಕಣ್ಮರೆಯಾದರು. ಹಾಗಾಗಿ ಕಡೂರಿನ ಈ ದಾಖಲೆಯನ್ನು ಯಾರು ಮುರಿಯುತ್ತಾರೋ ನೋಡಬೇಕು.


■ ವರದಿಗಾರ

ಚಿತ್ರದುರ್ಗ: ಬಾಣಲೆಯ ಕಾಂಗ್ರೆಸ್‌ಗೆ ಬೆಂಕಿಯ 'ಸೌಭಾಗ್ಯ'!



ಸೌಭಾಗ್ಯ ಬಸವರಾಜು

ಅಂತೂಇಂತೂ ದುರ್ಗದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಗಾದಿಗೆ ತನ್ನ ಹೆಂಡತಿ ಸೌಭಾಗ್ಯಳನ್ನು ಪ್ರತಿಷ್ಠಾಪನೆ ಮಾಡುವಲ್ಲಿ ಮಾಜಿ ಶಾಸಕ ಬಸವರಾಜನ್ ಯಶಸ್ವಿಯಾಗಿದ್ದಾನೆ. ಅಲ್ಲಿಗೆ, ಇಂತಹದ್ದೊಂದು ಅನಾಹುತ ಘಟಿಸಬಾರದೆಂದು ತಿಪ್ಪರಲಾಗ ಹಾಕಿದ್ದ ಮುರುಘಾ ಶರಣರ ಮುಲುಕಾಟಗಳೆಲ್ಲ ಮೆತ್ತಗಾದಂತಾಗಿವೆ; ಅಟ್ ದಿ ಸೇಮ್ ಟೈಮ್ ಜಿಲ್ಲೆಯ ಕಾಂಗ್ರೆಸ್ ರಾಜಕಾರಣ ಬಾಣಲೆಯಿಂದ ನೆಗೆದು ಬೆಂಕಿಗೆ ಹಾರಿಕೊಂಡಂತಾಗಿದೆ. ಯಾಕೆಂದ್ರೆ ಪಕ್ಷಾಂತರಿ ಸ್ಪೆಷಲಿಸ್ಟ್‌ಗಳಂತಿರುವ ಸೌಭಾಗ್ಯ-ಬಸವರಾಜನ್ ದಂಪತಿಗೆ ಜಿಲ್ಲಾ ಉಸ್ತುವಾರಿ ಮಂತ್ರಿ ಎಚ್.ಆಂಜನೇಯರು ಅಗತ್ಯಕ್ಕಿಂತಲೂ ಹೆಚ್ಚಾಗಿ ಮಣೆ ಹಾಕುತ್ತಿರೋದು ಪಕ್ಷದ ತಳಮಟ್ಟದ ಕಾರ್ಯಕರ್ತರಿಗೆ ಸುತಾರಾಂ ಇಷ್ಟವಾಗುತ್ತಿಲ್ಲ. ಹಾಗೆ ನೋಡಿದರೆ, ಜಿ.ಪಂ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಬಂದಿದ್ದ 22 ಕೈ ಸದಸ್ಯರಲ್ಲಿ ಬಹುತೇಕರಿಗೆ ಸೌಭಾಗ್ಯ ಅಧ್ಯಕ್ಷೆಯಾಗುವುದು ಬೇಕಾಗಿರಲಿಲ್ಲ. ಜೊತೆಗೆ ಜಿಲ್ಲೆಯ ಒಂದಿಷ್ಟು ಕಾಂಗ್ರೆಸ್ ಶಾಸಕರಿಗೂ ಈ ಬಗ್ಗೆ ಸಮ್ಮತಿಯಿರಲಿಲ್ಲ. ಅವರನ್ನೆಲ್ಲ ಬದಿಗೊತ್ತಿ, ಖುದ್ದು ಮುರುಘಾ ಶರಣರ ವಿರೋಧವನ್ನೂ ಮೂಲೆಗೆ ತಳ್ಳಿ ಸೌಭಾಗ್ಯಳಿಗೆ ಅಸ್ತು ಅಂದಿದ್ದಕ್ಕೆ ಮುಂದೊಮ್ಮೆ ಆಂಜನೇಯರು ಭಾರೀ ಬೆಲೆ ತೆರಬೇಕಾಗುತ್ತೆನ್ನುವ ಗುಸುಗುಸು ಕೈ ಪಾಳಯದಲ್ಲೇ ಹರಿದಾಡುತ್ತಿದೆ.

ಅಷ್ಟಕ್ಕೂ, 2014ರ ಪಾರ್ಲಿಮೆಂಟ್ ಚುನಾವಣೆ ಎಡತಾಕುವ ಮುನ್ನ ಈ ಗಂಡಹೆಂಡತಿ ಜೆಡಿಎಸ್ ಪಾರ್ಟಿಯಲ್ಲಿದ್ದರು. ಅದಕ್ಕೂ ಮೊದಲು ಕಾಂಗ್ರೆಸ್‌ನಿಂದಲೇ ಅಲ್ಲಿಗೆ ಗುಳೆ ಹೋದದ್ದು, ಹಾಗೆ ಗುಳೆ ಹೋಗುವುದಕ್ಕೂ ಮುನ್ನ ಅದೇ ಕಾಂಗ್ರೆಸ್‌ನಿಂದ ಸೌಭಾಗ್ಯ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯಾಗಿ ಮೆರೆದಾಡಿದ್ದು ಎಲ್ಲಾ ಹಳೇ ಮಾತು. ದೇವೇಗೌಡರು ಶ್ಯಾನೆ ದಾಳ ಉರುಳಿಸಿದರೂ 'ಮಾತು ತಪ್ಪಿದ ಮಗ' ಕುಮಾರಣ್ಣನ ಅವಾಂತರಗಳಿಂದ ಜೆಡಿಎಸ್‌ಗೆ ಸದ್ಯಕ್ಕಂತೂ ಭವಿಷ್ಯವಿಲ್ಲ ಅನ್ನೋದು ಖಾತ್ರಿಯಾಗುತ್ತಿದ್ದಂತೆಯೇ ಮರಳಿ ಕಾಂಗ್ರೆಸ್‌ಗೆ ಬಂದು ಠಳಾಯಿಸಿದರು. ಅಂದಹಾಗೆ, ಇವರಿನ್ನೂ ಜೆಡಿಎಸ್‌ನಲ್ಲಿದ್ದಾಗಲೇ ಗಂಡ ಬಸವರಾಜನ್ ಕಾಂಗ್ರೆಸ್‌ಗೆ ಹಾರಿಬರಲು ವೇದಿಕೆ ಸಜ್ಜು ಮಾಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಪತ್ರಕರ್ತರೊಮ್ಮೆ ಈ ಬಗ್ಗೆ ಸೌಜನ್ಯಾಳಿಗೆ ಪ್ರಶ್ನೆ ಬಿಗಿದಿದ್ದರು. ಆಗ 'ನನ್ನ ಗಂಡ ಜೆಡಿಎಸ್ ತೊರೆದು ಬೇರೊಂದು ಪಕ್ಷಕ್ಕೆ ಸೇರಿದರೆ ಅವರಿಗೆ ಡೈವೋರ್ಸ್ ನೀಡುತ್ತೇನೆ'


ರಘುಮೂರ್ತಿ


ಸುಧಾಕರ್


ಗೋವಿಂದಪ್ಪ


ಅಂತ ಘರ್ಜಿಸಿದ್ದ ಸೌಭಾಗ್ಯಮ್ಮ ಡೈವೋರ್ಸ್ ಮಾತೇ ಎತ್ತದೆ ಗಂಡನ ಜೊತೆ ನಿರಾಶ್ರಿತ ಶಿಬಿರ ಸೇರಿಕೊಳ್ಳುವಂತೆ ಕಾಂಗ್ರೆಸ್‌ಗೆ ಬಂದು ಠಿಕಾಣಿ ಹೂಡಿದ್ದು ದುರ್ಗದ ಮಟ್ಟಿಗೆ ಮಿಲೇನಿಯಂ ಜೋಕಾಗೇ ಉಳಿದುಕೊಂಡಿದೆ.

ಈ ವಲಸಿಗ ದಂಪತಿಯಿಂದ ಕಾಂಗ್ರೆಸ್‌ಗೆ ಆದ ಲಾಭವಾದರೂ ಅಷ್ಟಕ್ಕಷ್ಟೆ. ಅವರು ಕಾಂಗ್ರೆಸ್‌ಗೆ ಬಂದದ್ದೇ ಪಾರ್ಲಿಮೆಂಟ್ ಚುನಾವಣೆ ಇನ್ನು ಒಂದು ವಾರವಿದೆ ಅನ್ನೋವಾಗ. ಹಾಗಾಗಿ ಅವರು ಪಕ್ಷಕ್ಕೆ ನಯಾಪೈಸೆ ದುಡಿಯುವ ಸಂದರ್ಭವೇ ಇರಲಿಲ್ಲ. ಕಾಂಗ್ರೆಸ್‌ನ ಸುಕೃತವೋ, ಏನೊ, ದೇಶದ ತುಂಬೆಲ್ಲ ಮಾಧ್ಯಮ ಪೋಷಿತ ಮೋದಿಯ ಮಿಥ್ಯೆ ಅಲೆ ಇದ್ದಾಗ್ಯೂ ಸಾಫ್ಟ್‌ವೇರ್ ರಾಜಕಾರಣಿ ಜನಾರ್ದನ ಸ್ವಾಮಿಯ ಹೈಫೈ 'ಸೇವೆ'ಗೆ ಸುಸ್ತಾಗಿ ಹೋಗಿದ್ದ ದುರ್ಗದ ಜನ ಬಿಜೆಪಿಯ ಆತನನ್ನು ಮನೆಗಟ್ಟಿ ಕಾಂಗ್ರೆಸ್‌ನ ಬಿ.ಎನ್. ಚಂದ್ರಪ್ಪನನ್ನು ಗೆಲ್ಲಿಸಿಕೊಂಡಿದ್ದರು. ತಾವು ಕಾಂಗ್ರೆಸ್‌ಗೆ ಮರಳಿದ್ದರಿಂದಲೇ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವಂತಾದದ್ದು, ನಮ್ಮ ಹಿಂದಿರುವ ಜನಬೆಂಬಲವೇ ಈ ಪವಾಡಕ್ಕೆ ಕಾರಣ ಅನ್ನೋ ಪುಕಾರೆಬ್ಬಿಸಿದ ಪಾಕಡಾ ದಂಪತಿ ಕೈ ಅಭ್ಯರ್ಥಿಯ ಸಮಸ್ತ ಗೆಲುವನ್ನು ತಮ್ಮ ಜೋಳಿಗೆಗೆ ಇಳಿಸಿಕೊಂಡುಬಿಟ್ಟರು. ದುರಂತವೆಂದರೆ, ಹಲವು ನಾಯಕರ ವಿರೋಧದ ನಡುವೆಯೂ ಅವರಿಬ್ಬರನ್ನು ಜೆಡಿಎಸ್‌ನಿಂದ ಕಾಂಗ್ರೆಸ್ ಮನೆತುಂಬಿಸಿಕೊಳ್ಳುವಲ್ಲಿ ಮುತುವರ್ಜಿ ವಹಿಸಿದ್ದ ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯ ಸಾಹೇಬರು ಕೂಡಾ ಅದನ್ನು ಇಡಿಯಾಗಿ ನಂಬಿಬಿಟ್ಟರು. ನೀವಿಬ್ಬರು ಕಾಂಗ್ರೆಸ್‌ಗೆ ವಾಪಾಸಾದರೆ ಮುಂಬರುವ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಸೌಭಾಗ್ಯಳಿಗೆ ಟಿಕೆಟು ನೀಡುವುದಲ್ಲದೆ, ಗೆದ್ದು ಬಂದರೆ ಆಕೆಯನ್ನೇ ಅಧ್ಯಕ್ಷೆಯನ್ನಾಗಿಸುವ ಆಫರನ್ನು ಕೊಟ್ಟೇ ಆಂಜನೇಯರು ಅವರಿಬ್ಬರನ್ನು ಪಕ್ಷಕ್ಕೆ ಕರೆತಂದಿದ್ದರು ಅನ್ನೋ ಗಾಸಿಪ್ ಕೂಡಾ ಇಷ್ಟು ದಿನ ಹರಿದಾಡುತ್ತಿತ್ತು. ಅದು ಎಷ್ಟರಮಟ್ಟಿಗೆ ನಿಜವೋ, ಸುಳ್ಳೋ ಗೊತ್ತಿಲ್ಲ; ಆದರೆ, ವಿಪರೀತ ವಿರೋಧದ ನಡುವೆಯೂ ಆಕೆಯನ್ನು ಅಧ್ಯಕ್ಷೆಯಾಗಿಸುವಲ್ಲಿ ಆಂಜನೇಯ ಸಾಹೇಬರು ತೆಗೆದುಕೊಂಡಿರುವ ರಿಸ್ಕು ನೋಡಿದರೆ ಅಂತಹ ಗಾಸಿಪ್ಪು ಸುಖಾಸುಮ್ಮನೆ ಹರಿದಾಡಿದ್ದಲ್ಲ ಅನ್ನಿಸುತ್ತೆ. ಇದಕ್ಕಿಂತಲೂ ಭಯಾನಕ ವಿಷಯವೊಂದಿದೆ, ಇಷ್ಟು ದಿನ ಹರಿದಾಡುತ್ತಿದ್ದ ಈ ಗಾಸಿಪ್ ಪ್ರಕಾರ ಕೇವಲ ಇವೆರಡು ಆಶ್ವಾಸನೆಯಲ್ಲದೆ ಮುಂಬರುವ 2018ರ ವಿಧಾನಸಭಾ ಚುನಾವಣೆಯಲ್ಲಿ ಸೌಭಾಗ್ಯಳಿಗೆ ಕಾಂಗ್ರೆಸ್ ಟಿಕೆಟು ನೀಡುವ ಪ್ರಾಮಿಸ್ಸನ್ನೂ ಮಂತ್ರಿ ಸಾಹೇಬರು ಮಾಡಿದ್ದಾರಂತೆ. ಇವೆರಡನ್ನು ನಿಜ ಮಾಡಿಸಿದವರು, ಅದನ್ನು ನಿಜ ಮಾಡಲಾರರೆ? ಕಾಂಗ್ರೆಸ್ ಹೊಡೆದು ಹೋಳಾಗಲು ಇನ್ನೇನು ಬೇಕು!

ಇದೇನು ತಳ್ಳಿಹಾಕುವ ಗಾಸಿಪ್ ಅಲ್ಲ. ಖುದ್ದು ಸೌಭಾಗ್ಯಳೇ ಈ ಕುರಿತು ಹೇಳಿಕೊಂಡಿರೋದು ಅಚ್ಚರಿಯ ಸಂಗತಿ. ಮೊನ್ನೆ ನಡೆದ ಅಧ್ಯಕ್ಷಗಾದಿಯ ಚುನಾವಣೆಯ ಒಳಒಪ್ಪಂದದ ಪ್ರಕಾರ ಅಧ್ಯಕ್ಷ ಸ್ಥಾನವನ್ನು ನಾಲ್ಕು ಜನರಿಗೆ ತಲಾ 12 ತಿಂಗಳ ಅವಧಿಗೆ ಹಂಚಲಾಗಿದೆ. ಆದರೆ ಹೊಸ ಗ್ರಾಮ ಸ್ವರಾಜ್ ಮಸೂದೆಯ ಪ್ರಕಾರ ಒಮ್ಮೆ ಆಯ್ಕೆಯಾದ ಅಧ್ಯಕ್ಷರಿಗೆ ಭರ್ತಿ ಐದು ವರ್ಷಗಳ ನಿರಾತಂಕ ಅಧಿಕಾರವಿರುತ್ತೆ. ಈ ಬಗ್ಗೆ ಮಾಧ್ಯಮದವರು ಪ್ರಶ್ನೆ ಮಾಡಿದಾಗ ಸೌಭಾಗ್ಯಮ್ಮನ ಬಾಯಿಂದ ಉದುರಿದ ಉತ್ತರ ಹೀಗಿತ್ತು: "ಹೌದು ಹೊಸ ಕಾಯ್ದೆ ಹಾಗೆ ಹೇಳುತ್ತೆ. ಜೊತೆಗೆ, ಅಧ್ಯಕ್ಷರೇ ಬೇಕಾದರೆ ಗಂಭೀರ ಕಾರಣವೊಂದನ್ನು ಕೊಟ್ಟು ರಾಜೀನಾಮೆ ನೀಡುವುದಾದರೆ ಅಡ್ಡಿ ಇಲ್ಲ ಎನ್ನುವ ಅಂಶವನ್ನೂ ಅದೇ ಕಾಯ್ದೆ ಹೇಳುತ್ತೆ. 2018ರಲ್ಲಿ ಎದುರಾಗುವ ವಿಧಾನಸಭಾ ಚುನಾವಣೆಗೆ ಚಿತ್ರದುರ್ಗ ಕ್ಷೇತ್ರದಿಂದ ಟಿಕೆಟು ಕೊಡುವ ಭರವಸೆಯನ್ನು ಮಂತ್ರಿಗಳು ನೀಡಿದ್ದಾರೆ. ಆಗ ನಾನು ಎಂಎಲ್‌ಎ ಆಗ್ತೀನಿ. ರಾಜೀನಾಮೆ ಕೊಡಲು ಅದಕ್ಕಿಂತ ಗಂಭೀರ ಕಾರಣ ಬೇಕೆ? ಆಗ ಜಿ.ಪಂ.ಗೆ ಬೇರೊಬ್ಬರು ಅಧ್ಯಕ್ಷರಾಗುತ್ತಾರೆ." ಈಗ ಹೇಳಿ, ಆ ಗಾಸಿಪ್ಪನ್ನು ತಳ್ಳಿ ಹಾಕಲು ಸಾಧ್ಯವೇ? ಈ ಆದರ್ಶ ದಂಪತಿಗಳಲ್ಲಿ ಅದ್ಯಾವ ನಾಯಕತ್ವ, ಜನಬೆಂಬಲ ಕಂಡರೋ ಗೊತ್ತಿಲ್ಲ, ಒಟ್ಟಿನಲ್ಲಿ ಆಂಜನೇಯ ಸಾಹೇಬರು ಇವರಿಬ್ಬರಿಗೂ ಭರ್ಜರಿ 'ಔತಣ' ಕೊಡುತ್ತಿರುವುದು ಮಾತ್ರ ಅಪಾಯಕಾರಿಯೇ ಸರಿ.

ಮಳ್ಳಿ ಮಳ್ಳಿ ಕುರ್ಚಿಗೆಷ್ಟು ಕಾಲು?


ಸ್ಥಳೀಯ ಆಡಳಿತವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ರಚಿಸಲಾಗಿದ್ದ ರಮೇಶ ಕುಮಾರ್ ಸದನ ಸಮಿತಿಯು ತನ್ನ ವರದಿಯಲ್ಲಿ ಜಿ.ಪಂ. ಅಧ್ಯಕ್ಷರಾದವರಿಗೆ ಕೆಲಸ ಮಾಡಲು ಐದು ವರ್ಷ ಅವಧಿ ಬೇಕೇಬೇಕು, ಜೊತೆಗೆ ಅವರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನಮಾನ ಕೊಡಬೇಕೆನ್ನುವ ಒಂದಿಷ್ಟು ಶಿಫಾರಸ್ಸುಗಳಿದ್ದವು. 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಮಸೂದೆ ತಿದ್ದುಪಡಿ -2015' ಅನ್ನೋ ಹೆಸರಿನಲ್ಲಿ ಅದನ್ನು ಕಾಯ್ದೆಯಾಗಿ ರಾಜ್ಯ ಸರ್ಕಾರ ಯಥಾವತ್ತಾಗಿ ಜಾರಿಗೆ ತಂದಿದೆ. ಅದರ ಪ್ರಕಾರ ಅಧ್ಯಕ್ಷರ ಐದು ವರ್ಷದ ಅವಧಿಯನ್ನು ಯಾರೂ ಪ್ರಶ್ನಿಸುವಂತಿಲ್ಲ ಅಥವಾ ರಾಜೀನಾಮೆ ನೀಡಿ ಮತ್ತೊಬ್ಬರಿಗೆ ಅವಕಾಶ ಮಾಡಿಕೊಡಿ ಎನ್ನುವ ಪ್ರಶ್ನೆ ಬರುವುದಿಲ್ಲ. ಈ ಪರಿ ಬಿಗಿಯಾಗಿ ಹೆಣೆದುಕೊಂಡ ಕಾಯ್ದೆಯಲ್ಲೂ ಒಂದು


ಆಂಜನೇಯ

ಸಣ್ಣ ರಂಧ್ರ ಹುಡುಕಿರೋ ರಾಜಕೀಯ ಪಕ್ಷಗಳು ಅಬಾಧಿತ ಐದು ವರ್ಷದ ಅವಧಿಯನ್ನೇ ಯಥಾಪ್ರಕಾರದ ಸ್ಟೈಲಿನಲ್ಲಿ ಹಲವರಿಗೆ ಹಂಚಿಕೆ ವ[...] ಕಸರತ್ತು ನಡೆಸಿವೆ. ಒಂದುವೇಳೆ ಅಧ್ಯಕ್ಷ, ಉಪಾಧ್ಯಕ್ಷ[...] ಐದು ವರ್ಷದ ಅವಧಿಗೂ ಮೊದಲೇ ರಾ[...] ನೀಡಬೇಕೆಂದರೆ ಅದಕ್ಕೊಂದು ಬಲವಾದ [...] ನೀಡಲೇಬೇಕು ಎನ್ನುವ ಅಂಶವೇ ಇವತ್ತು ಪೋ[...] ಪಾರ್ಟಿಗಳಿಗೆ ತುಂಬಾ ಪ್ರಿಯವಾಗಿರೋದು.

ಚಿತ್ರದುರ್ಗದ ಅಧ್ಯಕ್ಷರ ಆ[...] ಕಸರತ್ತಿನಲ್ಲೂ ಇದೇ ನಡೆದಿದೆ. ಈ ಸಲದ [...] ಗಾದಿ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. [...] ಕೇವಲ ಸಾಮಾನ್ಯ ವರ್ಗದವರಲ್ಲದೇ [...] ಸಮುದಾಯ ಮತ್ತು ಹಿಂದುಳಿದ [...] ಮಹಿಳೆಯರೂ ಕಣಕ್ಕಿಳಿಯಬಹುದಾಗಿತ್ತು[...] ಸೌಭಾಗ್ಯ ಬಸವರಾಜನ್ ಹೆಸರಲ್ಲದೆ [...] ಸಮುದಾಯದ ಶಶಿಕಲಾ ಸುರೇಶ್, [...] ಜನಾಂಗದ ವಿಶಾಲಾಕ್ಷಿ ನಟರಾಜ್ ಮತ್ತು [...] ಜನಾಂಗದ ಚಳ್ಳಕೆರೆ ಶಾಸಕ ರಘುಮೂ[...] ಸೊಸೆ ಸವಿತಾರ ಹೆಸರೂ ಸೇರಿದಂತೆ ಒಟ್ಟು [...] ಹೆಸರುಗಳು ಕೇಳಿಬಂದಿದ್ದವು. ಅಲ್ಲಿಗೆ [...] ಕುರ್ಚಿಗೆ ನಾಲ್ಕು ಕಾಲುಗಳು ಕಾದಾಟಕ್ಕಿ[...]


ಇಂಥಾ ಬಿಕ್ಕಟ್ಟಿನ ಪ್ರಸಂಗವನ್ನು ನಿಭಾಯಿ[...] ಬಂದ ವೀಕ್ಷಕ, ಮಂತ್ರಿ ಮತ್ತು ಶಾಸಕರಿಗೆಲ್ಲಾ ಕಣ್[...] ಹಾಗಾಗಿಯೇ ನಾಲ್ಕೂ ಜನರಿಗೂ ತಲಾ 12[...] ಅವಧಿಯಂತೆ ಅಧ್ಯಕ್ಷರ ಗಾದಿಯನ್ನು ಹರಿದು ಹಂ[...] ಹೇಗೂ ಸಚಿವ ಆಂಜನೇಯರ ಅಭಯವೇ ಇದ್[...] ಮೊದಲ ಅವಧಿಯೇ 'ಸೌಭಾಗ್ಯಗೆ' ಒಲಿದು




ಇನ್ನುಳಿದವರು ಮುಂದೆ ತಮಗೆ ಸರದಿ ಬರು[...] ಕಾಯುತ್ತಾ ತತ್ಕಾಲಕ್ಕೆ ಸಮಾಧಾನಪಟ್ಟುಕೊಂಡಿದ್ದಾ[...] ಇದು ಅಂದುಕೊಂಡಷ್ಟು ಸುಲಭವಲ್ಲ. 2018[...] ಜಿಲ್ಲೆಯಲ್ಲಿ ಆಂಜನೇಯರ ಸಮೀಕರಣವೇ ಉಳಿದು[...] ಸೌಭಾಗ್ಯ ಅಥವಾ ಬಸವರಾಜನ್ ಪಕ್ಷದೊಳಗೆ [...] ಕಟ್ಟಿಕೊಳ್ಳದಿದ್ದರೆ ಆಕೆಗೆ ಚಿತ್ರದುರ್ಗದಿಂದ [...] ಎಂಎಲ್‌ಎ ಟಿಕೆಟು ಸಿಗಬಹುದು. ಆಗಲೂ [...] ಗೆದ್ದು ಶಾಸಕಿಯಾದರೆ ಮಾತ್ರ ಜಿಪಂ ಸೀಟು[...] ಕೆಳಗಿಳಿಯುತ್ತಾಳೆ. ಇದ್ಯಾವುದೂ ಘಟಿಸದಿದ್ದರೆ ಅ[...] ರುಚಿ ಕಂಡ ಆಕೆ ಅಧ್ಯಕ್ಷ ಕುರ್ಚಿ ಬಿಟ್ಟುಕೊಡಲು [...] ಒಪ್ಪುವುದಿಲ್ಲ. ಆಕೆಯ ನೆರವಿಗೆ ಗ್ರಾಮ [...] ಮಸೂದೆಯೂ ನಿಲ್ಲುವುದರಿಂದ ಉಳಿದ [...] ನಿರೀಕ್ಷೆಗಳು ಕನ್ನಡಿಯ ಗಂಟಾಗುವ ಸಾಧ್ಯತೆಯೇ[...]

ಎನ್‌ವೈ ಫ್ಯಾಮಿಲಿಯ ಹೈಡ್ರಾ[...]

ಅಧ್ಯಕ್ಷ ಸ್ಥಾನಕ್ಕಂತೂ ಸೌಭಾಗ್ಯಳೇ ನಿಕ್ಕಿ ಅ[...] ಮೀಸಲಾತಿ ಪ್ರಕಟವಾದ ದಿನವೇ ಮುಕ್ಕಾಲು[...] ನಿಶ್ಚಯವಾಗಿಹೋಗಿತ್ತು. ಆದರೆ ಉಪಾಧ್ಯಕ್ಷರ ಆ[...] ಬಳ್ಳಾರಿ ಗ್ರಾಮಾಂತರ ಶಾಸಕ ಎನ್.ವೈ. ಗೋ[...] ಆಡಿದ ಖಿಲಾಟವಿದೆಯಲ್ಲ ಅದು ನಿಜಕ್ಕೂ [...] ತರಿಸುವಂತದ್ದು. ಉಪಾಧ್ಯಕ್ಷರಾಗಿ ಮೊಳಕಾಲ್ಮೂರು[...] ಯೋಗೀಶ್ ಬಾಬು ಎನ್ನುವ ಸಭ್ಯಸ್ಥನನ್ನು ಆಯ್ಕೆ [...] ಮಂತ್ರಿ ಆಂಜನೇಯ, ಚಳ್ಳಕೆರೆ ಶಾಸಕ ರಘು[...] ಹಿರಿಯೂರಿನ ಸುಧಾಕರ, ಹೊಸದುರ್ಗದ ಗೋ[...] ತೀರ್ಮಾನ ಮಾಡಿ ಇನ್ನೇನು ಪ್ರಕಟಿಸಬೇಕು ಅನ್[...] ದಿಢೀರ್ ಎಂಟ್ರಿಕೊಟ್ಟ ಗೋಪಾಲಕೃಷ್ಣ ತಮ್ಮ[...] ಸುಶೀಲಮ್ಮನನ್ನೇ ಉಪಾಧ್ಯಕ್ಷೆ ಮಾಡಬೇಕೆಂದು ಚಕ್ಕ[...]


ಬಸವರಾಜನ್

ಆಚಾರಿ ಮಿಸ್ಸಿಂಗು, ಕರಪತ್ರ ಪ್ರಿಂಟಿಂಗು!




ಅದ್ಯಾವ ಘಳಿಗೆಯಲ್ಲಿ ಗೂಳಿಹಟ್ಟಿ ಶೇಖರ ಸಿಲಿಕಾನ್ ಸಿಟಿಯ ಸೈಟು ವ್ಯಾಪಾರಿ ರಘು ಆಚಾರಿಯನ್ನು ಹುಡುಕಿ ತಂದು ಚಿತ್ರದುರ್ಗದಲ್ಲಿ ಬಿತ್ತಿದನೋ ಗೊತ್ತಿಲ್ಲ. ಅವತ್ತಿಂದ ದುರ್ಗದ ರಾಜಕಾರಣಕ್ಕೆ 'ಗರಿಗರಿ' ಕಳೆ ಬಂದುಬಿಟ್ಟಿದೆ. ಅಷ್ಟುದಿನ ಓಟುಗಳನ್ನು ಒಲಿಸಿಕೊಳ್ಳುವುದಷ್ಟೇ ಗೊತ್ತಿದ್ದ ದುರ್ಗದ ಮಂದಿಗೆ ಓಟುಗಳನ್ನು ಖರೀದಿಸುವ ಕಸುಬು ಹೇಳಿಕೊಟ್ಟವನೇ ಈ ರಘು ಆಚಾರಿ. ರಿಯಲ್ ಎಸ್ಟೇಟ್‌ನಲ್ಲಿ ದುಡಿದ ಬೇಕಾಬಿಟ್ಟಿ ಹಡಬಿಟ್ಟಿ ದುಡ್ಡನ್ನು ನೋಡೇ ಅವನನ್ನು ಈ ಸಾರಿ ಕಾಂಗ್ರೆಸ್ ಟಿಕೆಟು ಕೊಟ್ಟು ಚಿತ್ರದುರ್ಗ-ದಾವಣಗೆರೆ ಸ್ಥಳೀಯ ಚುನಾಯಿತ ಸದಸ್ಯರ ಕ್ಷೇತ್ರದಿಂದ ಕಣಕ್ಕಿಳಿಸಿದ್ದು. ಅವತ್ತು ಗೆದ್ದು ನಾಪತ್ತೆಯಾದ ಆಚಾರಿ ಇವತ್ತಿನವರೆಗೆ ಇತ್ತ ಮುಖ ತೋರಿಸಿಲ್ಲ. ಗೆದ್ದನಂತರ ತನಗೆ ಮತ ಹಾಕಿದ ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿ ಸದಸ್ಯರುಗಳಿಗೆ ಮುಖಾಮುಖಿಯಾಗಿ ಧನ್ಯವಾದ ಹೇಳುವ ಸೌಜನ್ಯವೂ ಆತನಿಗಿಲ್ಲ. ಕಡೇಪಕ್ಷ ಚಿತ್ರದುರ್ಗ, ದಾವಣಗೆರೆ ಜಿ.ಪಂ. ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಗಾದರೂ ಬಂದು ಕೈ ಪಾರ್ಟಿಯ ಮಾನ ಉಳಿಸಬಹುದೇನೊ ಅನ್ನೋ ನಿರೀಕ್ಷೆ ಇಟ್ಟುಕೊಂಡವರಿಗೂ ನಿರಾಸೆಯೇ ಗತಿಯಾಗಿದೆ. ಆತ ಎಲ್ಲೂ ಕಾಣಿಸಿಕೊಳ್ಳಲಿಲ್ಲ.

ಇವನನ್ನು ಗೆಲ್ಲಿಸಿದ ತಪ್ಪಿಗೆ ಎರಡೂ ಜಿಲ್ಲೆಯ ಸುಮಾರು ಐದು ಸಾವಿರ ಮತದಾರರು ಪಶ್ಚಾತ್ತಾಪ ಪಡುವಂತಾಗಿದೆ. ನಮ್ಮ ಎಂಎಲ್ಸಿ ರಘು ಆಚಾರಿ ಕಾಣೆಯಾಗಿದ್ದಾನೆ ಹುಡುಕಿ ಕೊಡಿ ಅಂತ ದೂರು ಕೊಡುವುದೊಂದು ಬಾಕಿ. ಅಂತಹದ್ದೊಂದು ತಯಾರಿಯೂ ನಡೆದಿರುವ ವರ್ತಮಾನವಿದೆ. ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಸದಸ್ಯರು ಪಕ್ಷಾತೀತವಾಗಿ ಪರಿಷತ್ ಸದಸ್ಯ ರಘು ಆಚಾರಿ ಕಾಣೆಯಾಗಿದ್ದಾರೆ ಹುಡುಕಿ ಕೊಡಿ ಅಂತಾ ಕಲರ್‌ಫುಲ್ ಕರಪತ್ರ ಪ್ರಿಂಟ್ ಮಾಡಿಸಿ ಹಂಚಲು ತಯಾರಿ ನಡೆಸಿದ್ದಾರಂತೆ. ಪಾರ್ಟಿ ಫಂಡಿಗಾಗಿ ಇಂತಹ ವ್ಯಾಪಾರಿ ರೊಕ್ಕಸ್ಥರಿಗೆ ಮಣೆ ಹಾಕುವ ರಾಜಕೀಯ ಪಕ್ಷಗಳಿಗೆ ಮೊದಲು ಚಾಡಿಸಬೇಕಿದೆ. ಒಳ್ಳೆಯದೊ, ಕೆಟ್ಟದ್ದೋ ಕಡೇಪಕ್ಷ ತನ್ನ ಮತಕ್ಷೇತ್ರಕ್ಕೆ ಬಂದು ಇಣುಕಿ ನೋಡದ ಇಂತವರಿಗೆ ಜನರೇ ಸರಿಯಾದ ಪಾಠ ಕಲಿಸಬೇಕಿದೆ. ಆದರೆ, ತಮ್ಮ ಮತವನ್ನು ಮಾರಿಕೊಳ್ಳುವ 'ಮತಪ್ರಭು' ಇರುವವರೆಗೆ ಅದೂ ದುಸ್ಸಾಧ್ಯದ ಮಾತೇ ಸರಿ.

ಹಠ ಹಿಡಿದು ಕೂತುಬಿಟ್ಟರು. ಈ ಸುಶೀಲಮ್ಮ, ಗೋಪಾಲಕೃಷ್ಣನ ಖಾಸಾ ಅಣ್ಣ ಪೆನ್ನೋಬಳ ಸ್ವಾಮಿಯ ಕೆಂಡತಿ.

ಅಸಲಿಗೆ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಲ್ಲಿ ಎನ್.ವೈ. ಕುಟುಂಬ ರಾಜಕಾರಣದ್ದೇ ಪಾರುಪತ್ಯ. ಗೋಪಾಲಕೃಷ್ಣ ಇಲ್ಲಿಂದ ಐದು ಬಾರಿ ಶಾಸಕನಾಗಿದ್ದರೆ ಅವರಣ್ಣ ಮಾಜಿ ನ್ಯಾಯಾಧೀಶ ಎನ್.ವೈ. ಹನುಮಂತಪ್ಪ ಒಮ್ಮೆ ಚಿತ್ರದುರ್ಗದ ಎಂ.ಪಿ.ಯಾಗಿದ್ದರು. ಇನ್ನವರ ಒಬ್ಬ ತಂಗಿ ರಾಂಪುರ ಗ್ರಾಮ ಪಂಚಾಯ್ತಿಯ ಹಾಲಿ ಅಧ್ಯಕ್ಷೆ. ಬೆಂಗಳೂರಿನ ಪರ್ಮನೆಂಟ್ ನಿವಾಸಿಯಾಗಿರುವ ಈಯಮ್ಮನ ಸಹಿ ಬೇಕೆಂದರೆ ಕಾಗದಪತ್ರಗಳನ್ನಿಡಿದ ಪಿಡಿಓ ಬೆಂಗಳೂರಿಗೆ ಓಡಿಹೋಗಬೇಕು. ಅಷ್ಟರಮಟ್ಟಿಗೆ ಅವರ ಪೊಲಿಟಿಕಲ್ ಪಾಳೇಗಾರಿಕೆ ಚಾಲ್ತಿಯಲ್ಲಿದೆ. 2013ರ ವಿಧಾನಸಭಾ ಚುನಾವಣೆಯಲ್ಲಿ 6ನೇ ಬಾರಿಗೆ ಮೊಳಕಾಲ್ಮೂರಿನಿಂದ ಗೆದ್ದು ಬರುವ ಹುಮ್ಮಸ್ಸಿನಲ್ಲಿದ್ದ ಗೋಪಾಲಕೃಷ್ಣರನ್ನು ಜನ ಸೋಲಿಸಿ ಮನೆಗಟ್ಟಿದ್ದರು. ಅಲ್ಲಿಂದ ಕಂಪ್ಲೀಟಾಗಿ ಮನೆ ಸೇರಿಕೊಂಡಿದ್ದ ಗೋಪಾಲಕೃಷ್ಣರ ಸುದೈವ ಹೇಗಿತ್ತೆಂದರೆ ಬಳ್ಳಾರಿಯ ಗ್ರಾಮಾಂತರ ಕ್ಷೇತ್ರದಿಂದ ಶಾಸಕನಾಗಿದ್ದ ಶ್ರೀರಾಮುಲು 2014ರ ಎಂ.ಪಿ. ಚುನಾವಣೆಗೆ ನಿಂತು ಗೆದ್ದು ತನ್ನ ಎಂಎಲ್‌ಎ ಸ್ಥಾನಕ್ಕೆ ರಾಜೀನಾಮೆ ಕೊಟ್ಟುಬಿಟ್ಟ. ತೆರವಾದ ಸ್ಥಾನಕ್ಕೆ ಉಪಚುನಾವಣೆ ಎದುರಾಯ್ತು. ನಾಯಿ ಹಸಿದಿತ್ತು, ಅನ್ನ ಹಳಸಿತ್ತು ಎನ್ನುವಂತೆ ಅಲ್ಲಿ ಸರಿಯಾದ




ಗೋಪಾಲಕೃಷ್ಣ


ಕ್ಯಾಂಡಿಡೇಟೆ ಇಲ್ಲದ ಕಾಂಗ್ರೆಸ್ಸು ಮೊಳಕಾಲ್ಮೂರಿನ ಗೋಪಾಲಕೃಷ್ಣರನ್ನೇ ಅಲ್ಲಿಗೆ ಆಮದು ಮಾಡಿ ತಂದು ನಿಲ್ಲಿಸಿದ್ದಲ್ಲದೇ, ರಾಜ್ಯ ಸರ್ಕಾರದ ವರ್ಚಸ್ಸನ್ನು ಬಳಸಿಕೊಂಡು ಗೆಲ್ಲಿಸಿಕೊಂಡಿತು. ಇವರ ಕುಟುಂಬ ಕೈ ಪಾರ್ಟಿಯಿಂದ ಸಿಗಬಹುದಾದ ಅಧಿಕಾರವನ್ನೆಲ್ಲ ಅನುಭವಿಸುತ್ತಲೇ ಬಂದಿದೆ. ಅದರ ಕಿಂಚಿತ್ತೂ ಪರಿವೆಯಿಲ್ಲದೆ, ಹಿಂದೊಮ್ಮೆ ಉಪಸಭಾಪತಿಯಾಗಿದ್ದ ಘನತೆಯನ್ನೂ ಮರೆತು ಯಕಶ್ಚಿತ್ ಜಿಪಂ ಉಪಾಧ್ಯಕ್ಷ ಸ್ಥಾನವನ್ನು ತನ್ನ ಅತ್ತಿಗೆಗೇ ಕೊಡಬೇಕು, ಇಲ್ಲವಾದರೆ ಶಾಸಕ ಸ್ಥಾನಕ್ಕೇ ರಾಜೀನಾಮೆ ಕೊಟ್ಟುಬಿಡ್ತೀನಿ ಅಂತ ಹಠ ಹಿಡಿದು ಕೂತುಬಿಟ್ಟರು.

ಹಾಗೆನೋಡಿದರೆ ಯಾವ ಯೋಗೀಶ್ ಬಾಬುವನ್ನು ಉಪಾಧ್ಯಕ್ಷನನ್ನಾಗಿಸಬೇಕೆಂದು ಕೈ ನಾಯಕರು ನಿಶ್ಚಯಿಸಿಕೊಂಡಿದ್ದರೋ ಆತ ಖುದ್ದು ಗೋಪಾಲಕೃಷ್ಣನ ಪರಮ ಶಿಷ್ಯ. ಪರಿಶಿಷ್ಟ ನಾಯಕ ಸಮುದಾಯದ ಯೋಗೀಶ ಪ್ರತಿಭಾವಂತ ಸ್ವಾಮಿನಿಷ್ಠೆಯ ಹುಡುಗ. ಸಂಸ್ಕೃತದಲ್ಲಿ ಪಿಹೆಚ್.ಡಿ. ಪಡೆದಿರುವ ಈತನಿಗೆ ಉಪಾಧ್ಯಕ್ಷನಾಗುವ ಎಲ್ಲಾ ಅರ್ಹತೆಗಳಿದ್ದವು. ಹಾಗಾಗಿಯೇ, 'ನೀನು ಚುನಾವಣೆಯಲ್ಲಿ ಗೆದ್ದು ಬಂದರೆ ನಾನೇ ಮುಂದೆ ನಿಂತು ನಿನ್ನನ್ನು ಜಿಪಂ ಉಪಾಧ್ಯಕ್ಷ ಮಾಡ್ತೀನಿ' ಅಂತ ಎಲೆಕ್ಷನ್‌ಗೂ ಮೊದಲೆ ಇದೇ ಗೋಪಾಲಕೃಷ್ಣ, ಯೋಗೀಶ್‌ಗೆ ವಾಗ್ದಾನ ನೀಡಿದ್ದರು. ಆದರೆ ಕುಟುಂಬ ವಿಷಯ ಬರುತ್ತಿದ್ದಂತೆಯೇ ತಮ್ಮ ಶಿಷ್ಯನ ಬೆನ್ನಿಗೇ ಚೂರಿ ಹಾಕುವ ಕೆಲಸಕ್ಕೆ ಕೈ ಹಾಕಿದ್ದು ಅವರ ಸುದೀರ್ಘ ರಾಜಕೀಯ ಬದುಕಿನ ಘನತೆಗೆ ಕಿಂಚಿತ್ತೂ ತಕ್ಕುನಾದುದಲ್ಲ. ರಾಜ್ಯ ಯುವ ಕಾಂಗ್ರೆ ಘಟಕದ ಅಧ್ಯಕ್ಷ ರಿಜ್ವಾನ್ ಸೇರಿದಂತೆ ಹಲವರು ಯೋಗೀಶ್‌ನನ್ನೇ ಉಪಾಧ್ಯಕ್ಷನ್ನಾಗಿಸಿ ಅಂತ ಚುನಾವಣಾ ವೀಕ್ಷಕರಾಗಿ ಬಂದಿದ್ದ ಲಕ್ಷ್ಮೀನಾರಾಯಣಸ್ವಾಮಿ ಮೊಬೈಲಿಗೆ ಮೆಸೇಜು ಕಳಿಸಿದ್ದರು. ಆದರೆ ಅನಿವಾರ್ಯ ಪ್ರಸಂಗ, ಅಷ್ಟೇ ಅನಿರೀಕ್ಷಿತ ರಾಜೀನಾಮೆ ಬ್ಲಾಕ್‌ಮೇಲ್ ತಂತ್ರಕ್ಕೆ ನಾಯಕರೆಲ್ಲ ರೋಸಿಹೋಗಿ ಯೋಗೀಶ್ ಪಾಲಿನ ಅಧಿಕಾರ ಕಿತ್ತು ಎನ್‌ವೈ ಕುಟುಂಬಕ್ಕೆ 'ಭಿಕ್ಷೆ' ಹಾಕಿದರು.

ಸದ್ಯಕ್ಕೆ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯ ಕಾವು ತಣ್ಣಗಾದಂತೆಯೇ ಕಾಣುತ್ತಿದೆ. ಆದರೆ ಪರಿಣಾಮದ ಸುನಾಮಿ ಎತ್ತಕಡೆಯಿಂದ ಕಾಂಗ್ರೆಸ್ಸನ್ನು ಸುತ್ತಿಕೊಳ್ಳುತ್ತದೋ ಹೇಳಲಿಕ್ಕೆ ಬಾರದು. ಒಂದು ಕಡೆ ಪ್ರಭಾವಿ ಮಠವನ್ನೇ ಎದುರಾಕಿಕೊಂಡಿರುವ ಆಂಜನೇಯ ಸಾಹೇಬರು ಮತ್ತೊಂದು ಕಡೆ ಸೌಭಾಗ್ಯ ದಂಪತಿಯ ವಿಪರೀತ ಮರ್ಜಿಗೆ ಸಿಕ್ಕ ಪಕ್ಷದ ನಾಯಕರು, ಕಾರ್ಯಕರ್ತರನ್ನೂ ನೋಯಿಸಿದ್ದಾರೆ. ಜೊತೆಗೆ ಎನ್‌ವೈ ಕುಟುಂಬ ರಾಜಕಾರಣದ ಹೇಸಿಗೆಯೂ ಹಲವರಲ್ಲಿ ಬೇಸರ ಮೂಡಿಸಿದೆ. ಇದೆಲ್ಲ ಹೇಗೆ ಸಮೀಕರಣಗೊಳ್ಳುತ್ತೋ ಕಾದು ನೋಡಬೇಕು.

■ಟಿ.ಎನ್. ಷಣ್ಮುಖಿ



ಹುಬ್ಬಳ್ಳಿ: ಮಲಹೊರುವ ಮಕ್ಕಳ ಮೇಲೆ ಕ'ಮಲ' ಪ್ರೀತಿ


ಮನುಷ್ಯನನ್ನು ಮನುಷ್ಯನನ್ನಾಗಿ ಗೌರವಿಸದ, ಅಭಿಮಾನಿಸದ 'ಮನುಸ್ಮೃತಿ'ಯನ್ನು ತಮ್ಮ ಸಂವಿಧಾನ ಮಾಡಿಕೊಂಡಿರೊ ಭಂಡ ಬಿಜೆಪಿಗಳು ಮೊನ್ನೆ ಮೇ 1ರಂದು ಹುಬ್ಬಳ್ಳಿಯಲ್ಲಿ ಹೊಸ ನಾಟಕವೊಂದನ್ನು ಆಡಿದವು. ಕಾರ್ಮಿಕ ದಿನಾಚರಣೆಯ ನೆಪವಿಟ್ಟುಕೊಂಡ ಕೇಸರಿವಾಲಾಗಳು ಅವತ್ತು ಹುಬ್ಬಳ್ಳಿ-ಧಾರವಾಡಗಳಲ್ಲಿ ಮಲಹೊರುವ, ಬಾಚುವ ಕಾಯಕಜೀವಿಗಳಾದ ಪೌರಕಾರ್ಮಿಕರನ್ನು ಸನ್ಮಾನಿಸುವ ಬೂಟಾಟಿಕೆಯೇ ಅವತ್ತಿನ ಬಿಜೆಪಿ ನಾಟಕದ ಹೈಲೈಟು.


ಮುಂಬರುವ ಚುನಾವಣೆಗೆ ಈಗಾಗಲೇ ತಯಾರಿ ನಡೆಸಿರುವ ಇವರು ದಲಿತ ಮತಗಳ ಮೇಲೆ ಕಣ್ಣಿಟ್ಟು ಈ ರೀತಿ ಡ್ರಾಮಾ ಶುರುವಿಟ್ಟುಕೊಳ್ಳುತ್ತಿದ್ದಾರೆ. ತಮ್ಮದೇ ಆಡಳಿತವಿರುವ ಹು-ಧಾ ಮಹಾನಗರ ಪಾಲಿಕೆಯಲ್ಲಿ ಕಳೆದ ಹಲವಾರು ವರ್ಷಗಳಿಂದ ಗುತ್ತಿಗೆ ಪದ್ಧತಿಯಲ್ಲಿ ದುಡಿಯುತ್ತಿರುವ 1800 ಪೌರಕಾರ್ಮಿಕರನ್ನು ಕಾಯಂಗೊಳಿಸಿ ಎನ್ನುವ ಒಂದೇ ಒಂದು ನಿರ್ಣಯ ಕೈಗೊಳ್ಳಲಾಗದ ಬಿಜೆಪಿಗಳಿಗೆ ದಿಢೀರ್ ಅಂತ ಪೌರಕಾರ್ಮಿಕರ ಮೇಲೆ ಪ್ರೀತಿ ಉಕ್ಕಿ ಹರಿದದ್ದು ಹಾಸ್ಯಾಸ್ಪದವೇ ಸರಿ.

ಅಂತಹದ್ದೊಂದು ಹೇತ್ಲಾಂಡಿ ಕಾರ್ಯಕ್ರಮಕ್ಕೆ ಮಾಮು (ಅಪಾರ್ಥ ಬೇಡ, ಮಾಮು ಅಂದ್ರೆ ಮಾಜಿ ಮುಖ್ಯಮಂತ್ರಿ) ಜಗದೀಶ ಶೆಟ್ಟರ್‌ನದು ಅಧ್ಯಕ್ಷತೆ, ಪ್ರಹ್ಲಾದ ಜೋಶಿಯದು ಸಾರಥ್ಯ ಮತ್ತು ಮುಂದಿನ ಚುನಾವಣೆಗೆ ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿರುವ ಮಾಜಿ ಶಾಸಕ ದಲಿತ ವೀರಭದ್ರಪ್ಪ ಹಾಲಹರವಿಯದ್ದು ಉಸ್ತುವಾರಿ. ಹಿಂದೊಮ್ಮೆ ಶಾಸಕನಾಗಿದ್ದ ಇದೇ ಹಾಲಹರವಿ ಪೌರಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ಪಡೆದ ಗುತ್ತಿಗೆದಾರರಿಂದ ಪ್ರತಿ ತಿಂಗಳು ವಸೂಲಿ ಮಾಡಿದ ಹಫ್ತಾದಿಂದಲೇ ನವನಗರದ ಹತ್ತಿರ ತೋಟ, ಹುಬ್ಬಳ್ಳಿಯಲ್ಲಿ ಸ್ವಂತ ಮನೆ ಕೊಂಡುಕೊಂಡದ್ದು ಜನರಿಗೆ ಮರೆತೇ ಹೋಗಿದೆ ಅಂದುಕೊಂಡಿದ್ದಾನೆ.

ನವನಗರದಲ್ಲಿ ಪೌರಕಾರ್ಮಿಕರಿಗೆ ಮನೆ ನಿರ್ಮಿಸಿಕೊಡಲೆಂದೇ ಮೀಸಲಿಟ್ಟ ಜಾಗೆಯಲ್ಲಿ ಮನೆ ನಿರ್ಮಿಸಿ ಕೊಡುವ ಬಗ್ಗೆ ಕಿಂಚಿತ್ತಾದರೂ ಕಾಳಜಿ ವಹಿಸಿದ ಇವರಿಗೆಲ್ಲ ಪೌರಕಾರ್ಮಿಕರ ಮುಖದಲ್ಲಿ ಕಂಡದ್ದು ಓಟುಗಳ ಚಿತ್ರ ಮಾತ್ರ. ಹಳೇ ಹುಬ್ಬಳ್ಳಿಯಲ್ಲಿ ಡಾ. ಬಾಬು ಜಗಜೀವರಾಮ್ ಭವನ ಹಾಗೂ ಅಧ್ಯಯನ ಕೇಂದ್ರಕ್ಕೆ ಹಾಕಿದ ಅಡಿಗಲ್ಲು ಕೆಳಕ್ಕೆ ಬಿದ್ದರೂ ಸಣ್ಣದೊಂದು ತಳಪಾಯವನ್ನೂ ಹಾಕಿಸದ ಶೆಟ್ಟರ್, ಜೋಶಿ, ಹಾಲಹರವಿಯಂತಹವರದ್ದು ಬೂಟಾಟಿಕೆಯ ಕಾಳಜಿ ಅಲ್ಲದೆ ಮತ್ತಿನ್ನೇನು?

ಇವರ ಆ ಬೋಗಸ್ ಕಾರ್ಯಕ್ರಮಕ್ಕೆ ಪರ್ಯಾಯವಾಗಿ ಪೌರಕಾರ್ಮಿಕರು ತಮ್ಮದೇ ದಿನವನ್ನು ಸ್ವಾಭಿಮಾನಿ ದಿನ ಆಚರಿಸುವ ಮೂಲಕ ಭರ್ಜರಿ ಉತ್ತರವನ್ನೇ ಕೊಟ್ಟಿದ್ದು ಮತ್ತೊಂದು ವಿಶೇಷ. ಅಲ್ಲಿ ನೆರೆದಿದ್ದ ಪೌರ ಕಾರ್ಮಿಕರ





ಬಳಿ ಸಾವಿರ ಪ್ರಶ್ನೆಗಳಿದ್ದವು. ಇಷ್ಟೂ ದಿನ ಇಲ್ಲದ ಪ್ರೀತಿ ಈಗೇಕೆ? ಒಂದೇಒಂದು ದಿನ ನಾವು ಮಲ ಹೊರದಂತೆ, ಬಾಚದಂತೆ, ರಸ್ತೆಯನ್ನು ಸ್ವಚ್ಛಗೊಳಿಸದಂತೆ ನೀವು ಎಂದಾದರೂ ಮಾಡಿದ್ದೀರಾ? ಸ್ವಚ್ಛ ಭಾರತ ಅಭಿಯಾನದ ಹೆಸರಲ್ಲಿ ನಾವು ಕಸಗುಡಿಸುವ ರಸ್ತೆಯಲ್ಲಿ ನಿಂತು ಪೊರಕೆ ಹಿಡಿದು ಪೋಜು ಕೊಡುವ ನೀವು ನಮಗೆ ನೀಡಿದ್ದೇನು? ನಾವು ನಮ್ಮ ಕುಟುಂಬ, ಮಕ್ಕಳು, ಮರಿಮಕ್ಕಳು ನಮ್ಮ ಸಂತಾನವೇ ಮಲ ಹೊರುವ, ಬಾಚುವ, ಕಸಗುಡಿಸಲು ಜನ್ಮ ತಾಳಿದೆ ಎಂದು ಭಾವಿಸಿರುವ ನಿಮ್ಮಿಂದ ನಮಗ್ಯಾಕೆ ಸನ್ಮಾನ? ಹೀಗೆ ಪ್ರಶ್ನೆಗಳ ಸರತಿ ದೊಡ್ಡದೇ ಇತ್ತು, ಆದರೆ ಉತ್ತರ ಮಾತ್ರ ಯಾವೊಬ್ಬ ಕಮಲ ಪುತ್ರನ ಮುಖದಲ್ಲೂ ಕಾಣಲಿಲ್ಲ.

ಮಾರ್ಚ್ ತಿಂಗಳಲ್ಲಿ ರಾಜ್ಯದ ತುಂಬೆಲ್ಲ ಒಂದು ಜಾಗೃತ ಜಾಥಾವನ್ನು ನಡೆಸಲಾಯಿತು. ಇದರ ಉದ್ದೇಶ ಮಲಬಾಚುವ ಪದ್ಧತಿ ಕೊನೆಗಾಣಿಸುವುದು, ಗುತ್ತಿಗೆ ಪದ್ಧತಿ ರದ್ದುಪಡಿಸುವುದು, ಮಲಬಾಚುವ ಪೌರಕಾರ್ಮಿಕ ಕುಟುಂಬಗಳಿಗೆ ಪುನರ್‌ವಸತಿ ಕಲ್ಪಿಸುವುದು ಆಗಿತ್ತು. ಇದನ್ನು ಸಫಾಯಿ ಕರ್ಮಚಾರಿ ಕಾವಲು ಸಮಿತಿ ಆಯೋಜಿಸಿತ್ತು. ಮಾರ್ಚ್ 22 ರಿಂದ 31ರವರೆಗೆ ಕೆಜಿಎಫ್‌ನಿಂದ ಪ್ರಾರಂಭವಾಗಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಂಚರಿಸಿ, ಮಾರ್ಚ್ 31ರಂದು ಬೆಂಗಳೂರು ತಲುಪಿದ ಈ ಜಾಥಾ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆಯಿಂದ ಮುಖ್ಯಮಂತ್ರಿ ಮನೆವರೆಗೆ ಮೆರವಣಿಗೆ ನಡೆಸಿತು. ರಾಜ್ಯದ ಎಲ್ಲೆಡೆಯಿಂದ ಪೌರಕಾರ್ಮಿಕರು ಅಂದು ಆಗಮಿಸಿದ್ದರು. ಇವರಿಗೆ ನಿಜವಾಗಲೂ ಪೌರಕಾರ್ಮಿಕರ ಮೇಲೆ ಕಾಳಜಿ ಇದ್ದಿದ್ದರೆ ಅವತ್ತೇ ಅವರ ಪರವಾಗಿ ಧ್ವನಿ ಬಿಚ್ಚಬಹುದಿತ್ತು. ಆ ಜಾಥಾದ ಬೇಡಿಕೆಯನ್ನು ಈಡೇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬಹುದಿತ್ತು. ಆದರೆ ಅವತ್ತು ಎಲ್ಲೂ ಅಂತಹ ಧ್ವನಿ ಕೇಳಿಸಲೇ ಇಲ್ಲ.




1974 ರಲ್ಲಿ ಪೌರಾಡಳಿತ ಸಚಿವರಾಗಿದ್ದ ಬಿ. ಬಸವಲಿಂಗಪ್ಪನವರು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಮಲಬಾಚುವ ಹಾಗೂ ಹೊರುವುದನ್ನು ನಿಷೇಧಿಸಿ ಆದೇಶ ಹೊರಡಿಸಿದರು. ಈ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿ ಹಾಗೂ ಕುಟುಂಬಗಳ ಪುನರ್‌ವಸತಿ ಕುರಿತು ಸಾಲಪ್ಪನವರ ವರದಿ ಇನ್ನೂ ಜಾರಿಗೆ ಬಂದಿಲ್ಲ. ಇದು ಸರ್ಕಾರಗಳ ಹೊಣೆಗೇಡಿತನವನ್ನು ಮತ್ತು ಅವರನ್ನು ಓಟ್‌ಬ್ಯಾಂಕ್‌ಗಷ್ಟೇ ಸೀಮಿತವಾಗಿಸಿಕೊಂಡ ರಾಜಕೀಯ ಪಕ್ಷಗಳ ನಯವಂಚಕತನವನ್ನು ಎತ್ತಿ ತೋರಿಸುತ್ತದೆ. 2013ರಲ್ಲಿ ಮತ್ತೊಮ್ಮೆ ರಾಜ್ಯ ಸರ್ಕಾರ ಮಲಬಾಚುವ ಪದ್ಧತಿ ನಿಷೇಧಿಸಿ ಕಾನೂನು ಜಾರಿಗೊಳಿಸಿದೆಯಾದರೂ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಹುಮ್ಮಸ್ಸು ಸರ್ಕಾರಕ್ಕೇ ಇದ್ದಂತಿಲ್ಲ.

ಯಾಕೆಂದರೆ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 36 ಜನರು ಮಲ ಸ್ವಚ್ಛಗೊಳಿಸಲು ಮ್ಯಾನ್‌ಹೋಲ್‌ಗಳಲ್ಲಿ ಇಳಿದಾಗ ಸಾವನಪ್ಪಿದ್ದಾರೆ. 1993 ರಿಂದ 2015ರವರೆಗೆ ಧಾರವಾಡ ಜಿಲ್ಲೆಯಲ್ಲಿ 13 ಜನ ಪೌರ ಕಾರ್ಮಿಕರು ಸತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮ್ಯಾನ್‌ಹೋಲ್ ಸ್ವಚ್ಛತೆ ಹಾಗೂ ಇನ್ನಿತರ ಕೆಲಸಗಳನ್ನು ಪೂನಾ ಮೂಲದ ಇಗಲ್ ಇನ್ಫ್ರಾ ಇಂಡಿಯಾ ಲಿಮಿಟೆಡ್ ಕಂಪನಿಗೆ ವಹಿಸಲಾಗಿದೆ. ದುಬಾರಿ ಯಂತ್ರಗಳನ್ನು ಬಳಸದೆ ಅಗ್ಗದ ದಲಿತ ಜೀವಗಳ ಜೊತೆ ಈ ಕಂಪನಿ ಚೆಲ್ಲಾಟವಾಡಿದ ಪರಿಣಾಮವೇ 13 ಜನ ಪೌರಕಾರ್ಮಿಕರು ಬಲಿ. ಆಗೆಲ್ಲ ಈ ಶೆಟ್ಟರ್, ಜೋಷಿಗಳು ಎಲ್ಲಿ ಹೋಗಿದ್ದವು. ತಮ್ಮ ತವರು ಕ್ಷೇತ್ರವಾಗಿದ್ದರೂ, ಪಾಲಿಕೆಯಲ್ಲಿ ತಮ್ಮದೇ ಪಾರ್ಟಿಯ ಆಡಳಿತವಿದ್ದಾಗಲೂ ಪೌರಕಾರ್ಮಿಕರ ಈ ನೈಜ ಸಮಸ್ಯೆಯತ್ತ ಶೆಟ್ಟರ್‌ರ ಮನಸ್ಸು ಹರಿಯಲೇ ಇಲ್ಲ. ಆದರೆ ಈಗ ಶಾಲು, ಹಾರ, ತುರಾಯಿ ಹಿಡಿದು ಓಟಿಗಾಗಿ ನಿರ್ಲಜ್ಜ ರಾಜಕಾರಣ ನಡೆಸುತ್ತಿದ್ದಾರೆ.

ಜೋಶಿ ಹಾಗೂ ಬಿಜೆಪಿ ನಗರ ಅಧ್ಯಕ್ಷ ಲಿಂಗರಾಜ ಪಾಟೀಲ ಪೌರ ಕಾರ್ಮಿಕರ ಮನೆಮನೆಗೆ ತೆರಳಿ ನಿಮಗೆ ಸನ್ಮಾನ ಮಾಡುತ್ತೇವೆ ಎಂದು ಆಮಂತ್ರಣ ಪತ್ರಿಕೆ ನೀಡಿದರೂ ಹುಬ್ಬಳ್ಳಿ-ಧಾರವಾಡಗಳಲ್ಲಿ ಇವರ ಸನ್ಮಾನಕ್ಕೆ ಪೌರ ಕಾರ್ಮಿಕರೇ ಸಿಗದಿರುವುದು ಅವರ ಸನ್ಮಾನದ ಹಿಂದಿರುವ ಬೂಟಾಟಿಕೆ ಎಂತಹದ್ದು ಎಂಬುದನ್ನು ಸಾಬೀತು ಮಾಡಿದೆ.

■ಹುಬ್ಬಳ್ಳಿಯಾಂವ

ಮಂಡ್ಯ: ತಮ್ಮಣ್ಣನ ಬಾಲಕ್ಕೆ ಚೆಲುವಣ್ಣನ ಬೆಂಕಿ



ತಮ್ಮಣ್ಣ

ಜೆಡಿಎಸ್ ಈಗ ಮೊದಲಿನಂತಿಲ್ಲ, ಹಳೇ ಮೈಸೂರು ಪ್ರಾಂತ್ಯದ ಮಾತು ಒತ್ತಟ್ಟಿಗಿರಲಿ, ಗೌಡರ ಭದ್ರಕೋಟೆ ಎನ್ನಲಾದ ಹಾಸನದಲ್ಲೇ ಅದರ ಬೇರು ಅಲ್ಲಾಡಲು ಶುರುವಾಗಿವೆ. ಮೊನ್ನೆ ನಡೆದ ಎಂಎಲ್ಸಿ ಎಲೆಕ್ಷನ್‌ನಲ್ಲಿ ಹಾಸನದಲ್ಲಿ ಜೆಡಿಎಸ್ ಕ್ಯಾಂಡಿಡೇಟ್ ಸೋತದ್ದು, ದಿನೇದಿನೇ ಪ್ರಬಲವಾಗುತ್ತಿರುವ ಕಾಂಗ್ರೆಸ್‌ನ ಎ.ಮಂಜಣ್ಣ ದಾಳಕ್ಕೆ ಬಹುಮತವಿದ್ದು ಜಿಪಂ ಗದ್ದುಗೆ ಕಳೆದುಕೊಂಡದ್ದು ಇವೆಲ್ಲ ಜೆಡಿಎಸ್‌ಗೆ ಕಾದಿರುವ ಭಯಾನಕ ಭವಿಷ್ಯವೊಂದರ ಕೋಲ್ಮಿಂಚುಗಳಷ್ಟೆ. ಜೆಡಿಎಸ್‌ನ ಮತ್ತೊಂದು ಭದ್ರಕೋಟೆ ಎನ್ನಲಾದ ಮಂಡ್ಯದಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಿಲ್ಲ.

ಅಸಲಿಗೆ ಮಂಡ್ಯದಲ್ಲಿ ಜೆಡಿಎಸ್ ಗಟ್ಟಿಗೊಳ್ಳಲು ಚೆಲುವರಾಯಸ್ವಾಮಿಯ ಪಾತ್ರ ದೊಡ್ಡದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಗೌಡರ ಖಾಸಾ ಹೈಕಳಿಗೂ ಚೆಲುವರಾಯಸ್ವಾಮಿಗೂ ಸೇರಿಕೆಯೇ ಬರುತ್ತಿಲ್ಲ. ಪಕ್ಷದ ಬಹಿರಂಗದ ವೇದಿಕೆಯಲ್ಲೇ ಕುಮಾರಣ್ಣ ಪರೋಕ್ಷವಾಗಿ ಚೆಲುವರಾಯಸ್ವಾಮಿಯ ಟೀಮನ್ನು ಕಾಂಗ್ರೆಸ್ ಏಜೆಂಟರೆಂದು ಟೀಕಿಸಿದ್ದು, ಅದಕ್ಕೆ ಪ್ರತಿಯಾಗಿ ಚೆಲುವಣ್ಣನ ಪಟಾಲಮ್ಮು ದೊಡ್ಡ ಗೌಡರ ಎದುರೇ ಕುಮ್ಮಿಯನ್ನು ತರಾಟೆಗೆ ತೆಗೆದುಕೊಂಡದ್ದು, ಆಮೇಲೆ ಯಥಾಪ್ರಕಾರ ಪುತ್ರ ವ್ಯಾಮೋಹಕ್ಕೆ ಒಳಗಾಗಿ ಪಕ್ಷ ವಿರೋಧಿಗಳಿಗೆ ತಕ್ಕ ಶಾಸ್ತಿ ಕಾದಿದೆ ಅಂತ ದೇವೇಗೌಡರು ಗುಟುರು ಹಾಕಿದ್ದು, ಇತ್ತಿತ್ತಲಾಗಿ ಚೆಲುವಣ್ಣ ಗೌಡರಿಗಿಂತ ಹೆಚ್ಚಾಗಿ ಸಿದ್ದರಾಮಯ್ಯನ ಜೊತೆ ಕಾಣಿಸಿಕೊಳ್ಳುತ್ತಿರೋದು, ಎಂಎಲ್ಸಿ ಎಲೆಕ್ಷನ್‌ಗೆ ಟಿಕೆಟು ನೀಡುವಾಗ ಚೆಲುವಣ್ಣನ ಕ್ಯಾಂಡಿಡೇಟ್ ಬಿ.ರಾಮಕೃಷ್ಣ ಬದಲಿಗೆ ಬೆಂಗಳೂರಿನ ಕುಳ ಎನ್.ಅಪ್ಪಾಜಿಗೌಡನಿಗೆ ಕೊಟ್ಟದ್ದು ಇವೆಲ್ಲ ಹಳಸುತ್ತಿರುವ ಗೌಡರು ಮತ್ತು ಚೆಲುವಣ್ಣನ ಸಂಬಂಧದ ಸ್ಯಾಂಪಲ್ಲುಗಳಷ್ಟೆ.



ನಾಗರತ್ನ


ಚೆಲುವರಾಯಸ್ವಾಮಿಯೇನು ಎಳಸು ರಾಜಕಾರಣಿಯಲ್ಲ. ದೇವೇಗೌಡರ ಅಖಾಡದಲ್ಲೇ ಪೊಲಿಟಿಕಲ್ ಪಟ್ಟುಗಳನ್ನು ಕಲಿತಿರುವ ಅನುಭವಿ ಪಟು. ಯಾವಾಗ 'ಅಪ್ಪಾಜಿ' ತನ್ನ ವಿರುದ್ಧ ಮಂಡ್ಯದಲ್ಲೇ ಹೊಸ ಪಟಾಲಮ್ಮು ಕಟ್ಟುತ್ತಿರೋದು ಗಮನಕ್ಕೆ ಬಂತೋ ಆಗಿನಿಂದಲೇ ಬಲು ಎಚ್ಚರಿಕೆಯಿಂದ ವ್ಯವಹಾರ ನಡೆಸುತ್ತಿದ್ದಾರೆ. ಇಲ್ಲದೇ ಹೋಗಿದ್ದಲ್ಲಿ, ತನ್ನ ಕ್ಯಾಂಡಿಡೇಟಗೆ ಟಿಕೆಟ್ ತಪ್ಪಿಸಿದಿರಿ ಅಂತ ಮುನಿಸಿಕೊಂಡು ಎಂಎಲ್ಸಿ ಚುನಾವಣೆಯಲ್ಲಿ ಜೆಡಿಎಸ್ ಕ್ಯಾಂಡಿಡೇಟನ್ನು ಸೋಲಿಸುವುದು ಸ್ವಾಮಿಗೆ ಕಷ್ಟದ ಕೆಲಸವೇನೂ ಆಗಿರಲಿಲ್ಲ, ಆದರೆ ತಪ್ಪನ್ನು ಏಕಾಏಕಿ ತನ್ನ ಕಡೆ ಎಳೆದುಕೊಳ್ಳದೆ ಜಾಣ್ಮೆಯಿಂದ ಗೌಡರ ದಾಳಗಳಿಗೆ ಪ್ರತಿದಾಳ ಉರುಳಿಸುತ್ತಾ ಗೇಮ್ ಮುಂದುವರೆಸಿಕೊಂಡು ಬರುತ್ತಿದ್ದಾರೆ.

ಅಂದಹಾಗೆ, ಚೆಲುವರಾಯಸ್ವಾಮಿಯ ವಿರುದ್ಧ ಮಂಡ್ಯದಲ್ಲಿ ಗೌಡರು ಬೆಳೆಸುತ್ತಿರೋದು ಅವರ ಖಾಸಾ ಸಂಬಂಧಿ ಮತ್ತು ಇತ್ತೀಚೆಗಷ್ಟೆ ಕಾಂಗ್ರೆಸ್ ಮೂಲಕ ಬಿಜೆಪಿಯನ್ನು ಹಾದುಕೊಂಡು ಜೆಡಿಎಸ್ ಸೇರಿಕೊಂಡಿರುವ ಮದ್ದೂರು ಎಂಎಲ್ಎ ಡಿ.ಸಿ.ತಮ್ಮಣ್ಣನನ್ನು. ಇದು ಚೆಲುವಣ್ಣನಿಗೆ ಸ್ಪಷ್ಟವಾಗಿ ಗೊತ್ತು. ಅಸಲಿಗೆ, ಗೌಡರ ನೆಂಟಸ್ತಿಕೆಯನ್ನೇ ನೆಪಮಾಡಿಕೊಂಡು ಹಳಬರನ್ನು ಸೈಡಿಗೆ ಸರಿಸುತ್ತಾ ಸರ್ವಾಧಿಕಾರಿಯಂತೆ ಬೆಳೆಯುತ್ತಿರುವ ತಮ್ಮಣ್ಣನ ಬಗ್ಗೆ ಮಂಡ್ಯದ ಹಲವು ಜೆಡಿಎಸ್ ನಾಯಕರಿಗೇ ಅಸಮಾಧಾನವಿದೆ. ಮಂಡ್ಯದ ಸಂಸದ ಸಿ.ಎಸ್.ಪುಟ್ಟರಾಜು ಕೂಡಾ ಇದಕ್ಕೆ ಹೊರತಾದವರಲ್ಲ. ಇಂತವರನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡಿರುವ ಚೆಲುವರಾಯಸ್ವಾಮಿ ಜೆಡಿಎಸ್ ಪಕ್ಷದೊಳಗೇ ಒಂದು ಕೌಂಟರ್ ಟೀಮನ್ನು ರೆಡಿಮಾಡಿಕೊಂಡಿದ್ದಾರೆ. ಚೆಲುವಣ್ಣ ಮತ್ತು ಪುಟ್ಟಣ್ಣನ ನಡುವೆ ಹೇಳಿಕೊಳ್ಳುವಂತಹ ದೋಸ್ತಿ ಇಲ್ಲದಿದ್ದರೂ ಬದ್ಧ ವೈರಿಗಳೇನಲ್ಲ, ಕಡೇಪಕ್ಷ ಒಬ್ಬರನ್ನೊಬ್ಬರು ಪ್ರತಿಸ್ಪರ್ಧಿಗಳೆಂದೂ ಪರಿಗಣಿಸಿದವರಲ್ಲ, ವಲಸಿಗ ತಮ್ಮಣ್ಣ ಆರ್ಭಟ ಹೆಚ್ಚಾದಾಗ ಈ ಅಂಶಗಳೇ ಅವರನ್ನು ಬೆಸೆದದ್ದು ಮತ್ತು ಒಂದು ಆಂತರಿಕ ಟೀಮ್ ಕಟ್ಟಿಕೊಳ್ಳಲು ಪ್ರೋತ್ಸಾಹಿಸಿದ್ದು. ಆ ಟೀಮೇ ಮೊನ್ನೆ ನಡೆದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಆಯ್ಕೆಯಲ್ಲಿ ಶಾಸಕ ತಮ್ಮಣ್ಣನಿಗೆ ಭರ್ಜರಿ ಮುಖಭಂಗ ಮಾಡಿದ್ದು.


ಜಿ.ಪಂ. ಅಧ್ಯಕ್ಷ ಸ್ಥಾನದಲ್ಲಿ ತನ್ನ ಬೆಂಬಲಿಗ ಕೋಟಿ ಕುಳ ಮದ್ದೂರು ಸ್ವಾಮಿಯ ಪತ್ನಿ ನಾಗರತ್ನರನ್ನು ಕೂರಿಸಬೇಕೆಂಬುದು ತಮ್ಮಣ್ಣನ ಲೆಕ್ಕಾಚಾರವಾಗಿತ್ತು. ಅದಕ್ಕಾಗಿ ದೊಡ್ಡ ಗೌಡರಿಂದ ಪರವಾನಗಿಯೂ ಸಿಕ್ಕಿತ್ತು. ಸಾಕಷ್ಟು ಪ್ರಯತ್ನಗಳೂ ನಡೆದಿದ್ದವು. ಈ ಪ್ರಯತ್ನ ಯಶಸ್ವಿಯಾಗಲು ಬಿಟ್ಟರೆ ತಮ್ಮಣ್ಣ ಮತ್ತಷ್ಟು ಬಲಾಢ್ಯನಾಗುವುದು ಮಾತ್ರವಲ್ಲ ಜೆಡಿಎಸ್‌ನೊಳಗೆ ತಮ್ಮನ್ನು ದಮನಿಸಲು ನಡೆಸುತ್ತಿರುವ ತಂತ್ರಗಳು ಇನ್ನಷ್ಟು ಬಿರುಸಾಗುತ್ತವೆ ಅನ್ನೋದನ್ನು ಅರ್ಥ ಮಾಡಿಕೊಂಡ ಚೆಲುವಣ್ಣ ಮತ್ತು ಪುಟ್ಟಣ್ಣನ ಬಣ ಮದ್ದೂರು ಶಾಸಕನಿಗೆ ಮುಟ್ಟಿನೋಡಿಕೊಳ್ಳುವಂತಹ ಏಟು ನೀಡಿದೆ. ತನ್ನ ಅಪ್ಪಟ ಬೆಂಬಲಿಗರಾದ ಕೆ.ಆರ್.ಪೇಟೆಯ ಸಂತೆಬಾಚಹಳ್ಳಿ ಕ್ಷೇತ್ರದ ಪ್ರೇಮಕುಮಾರಿಯನ್ನು ಅಧ್ಯಕ್ಷೆಯನ್ನಾಗಿಯೂ ಅದೇ ಕೆ.ಆರ್.ಪೇಟೆಯ ಬೂಕನಕೆರೆ ಕ್ಷೇತ್ರದ ಗಾಯಿತ್ರಿ ರೇವಣ್ಣರನ್ನು ಉಪಾಧ್ಯಕ್ಷೆಯನ್ನಾಗಿಯೂ ಆಯ್ಕೆ ಮಾಡುವ ಮೂಲಕ ತಮ್ಮಣ್ಣನ ಗರ್ವಭಂಗ ಮಾಡಿ, ಬೀಗರಾದ ದೇವೇಗೌಡರಿಗೂ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ರೊಕ್ಕಸ್ತ ಸ್ವಾಮಿಯ ಅಹಂಕಾರ

41 ಸದಸ್ಯ ಬಲದ ಮಂಡ್ಯ ಜಿ.ಪಂ.ನಲ್ಲಿ ಜೆಡಿಎಸ್ 27 ಸ್ಥಾನ ಪಡೆಯುವ ಮೂಲಕ ಸ್ಪಷ್ಟ ಬಹುಮತ ಸಾಧಿಸಿದೆ. ಕಾಂಗ್ರೆಸ್‌ನ 13 ಸದಸ್ಯರು ಹಾಗೂ ಓರ್ವ ಪಕ್ಷೇತರ ಸದಸ್ಯರಿದ್ದಾರೆ. ಅದರಂತೆ ಈ ಬಾರಿಯ ಜಿ.ಪಂ. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗ (ಮಹಿಳೆ), ಉಪಾಧ್ಯಕ್ಷ ಸ್ಥಾನ ಪರಿಶಿಷ್ಟವರ್ಗಕ್ಕೆ ಮೀಸಲಾಗಿತ್ತು. ಇವೆರಡೂ ಸ್ಥಾನಕ್ಕೆ ಮೇ 2ರಂದು ಚುನಾವಣೆ ನಿಗದಿಯಾಗಿತ್ತು, ಉಪಾಧ್ಯಕ್ಷ ಸ್ಥಾನಕ್ಕೆ ಪರಿಶಿಷ್ಟ ವರ್ಗದ ಗಾಯಿತ್ರಿ ರೇವಣ್ಣ ಬಿಟ್ಟರೆ ಬೇರೆ ಸದಸ್ಯರ್‍ಯಾರೂ ಇಲ್ಲದ ಕಾರಣ ಅವರು ಉಪಾಧ್ಯಕ್ಷರಾಗುವುದು ಖಚಿತವಾಗಿತ್ತು. ಆದರೆ ಜಿ.ಪಂ. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗ (ಮಹಿಳೆ) ಆಗಿದ್ದರಿಂದ ಮದ್ದೂರು ಚಾಮನಹಳ್ಳಿ ಕ್ಷೇತ್ರದ ನಾಗರತ್ನ ಸ್ವಾಮಿ, ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ಲಕ್ಷ್ಮೀಸಾಗರದ ಶಾಂತಲಾ ರಾಮಕೃಷ್ಣ, ದುದ್ದ ಕ್ಷೇತ್ರದ ಸುಧಾ ಜಯಶಂಕರ್, ಹೊಳಲು ಕ್ಷೇತ್ರದ ಅನುಪಮಾ ಕುಮಾರಿ, ನಾಗಮಂಗಲ ತಾಲೂಕಿನ ದೇವಲಾಪುರ ಕ್ಷೇತ್ರದ ರುಕ್ಮಿಣಿ ಶಂಕರ್, ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಕ್ಷೇತ್ರದ ಪ್ರೇಮಾಕುಮಾರಿ ಹೆಸರುಗಳು ಸ್ಪರ್ಧೆಯಲ್ಲಿದ್ದವು. ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಕ್ಷೇತ್ರದ ಗಾಯಿತ್ರಿ ರೇವಣ್ಣರಿಗೆ ಅನಿವಾರ್ಯವಾಗಿ ಉಪಾಧ್ಯಕ್ಷ ಸ್ಥಾನ ಹೋಗುವುದರಿಂದ ಅದೇ ತಾಲೂಕಿನ ಹಿರಿಯ ಸದಸ್ಯೆ ಪ್ರೇಮಾಕುಮಾರಿಗೆ ಅಧ್ಯಕ್ಷ ಸ್ಥಾನ ಒಲಿಯುವ ಛಾನ್ಸೇ ಇಲ್ಲ ಎನ್ನುವ ವಾತಾವರಣವಿತ್ತು.




ಪುಟ್ಟರಾಜು



ಚಲುವರಾಯಸ್ವಾಮಿ

ಈ ಮಧ್ಯೆ ತಮ್ಮ ತಾಲೂಕಿನವರನ್ನೇ ಅಧ್ಯಕ್ಷ ಸ್ಥಾನದಲ್ಲಿ ಪ್ರತಿಷ್ಠಾಪಿಸಬೇಕೆಂದು ಸಂಸದ ಪುಟ್ಟರಾಜು, ಶಾಸಕರಾದ ತಮ್ಮಣ್ಣ ಚಲುವರಾಯಸ್ವಾಮಿ ಕಣಕ್ಕಿಳಿದಿದ್ದರು. ಅದರಲ್ಲೂ ಮದ್ದೂರು ಶಾಸಕ ತಮ್ಮಣ್ಣ ಬೀಗತನದ ನಂಟನ್ನೇ ಮುಂದಿಟ್ಟುಕೊಂಡು ರೊಕ್ಕಸ್ತ ಮದ್ದೂರು ಸ್ವಾಮಿಯ ಪತ್ನಿ ನಾಗರತ್ನರನ್ನು ಅಧ್ಯಕ್ಷೆಯನ್ನಾಗಿಸಲು ಶತಾಯಗತಾಯ ಪ್ರಯತ್ನ ನಡೆಸಿದ್ದ. ಜಿ.ಪಂ. ಅಧ್ಯಕ್ಷರಿಗೆ ಸಚಿವಸಂಪುಟ ಸ್ಥಾನಮಾನ ನೀಡಿರುವ ಹಿನ್ನೆಲೆಯಲ್ಲಿ ತನ್ನ ಪತ್ನಿ ನಾಗರತ್ನರನ್ನು ಜಿ.ಪಂ. ಅಧ್ಯಕ್ಷೆಯಾಗಿಸಿ ತೆರೆಮರೆಯಲ್ಲಿ ತಾನೇ ದರ್ಬಾರ್ ನಡೆಸಲು ಸ್ವಾಮಿ ಥೈಲಿ ಹಿಡಿದುಕೊಂಡು ಸಿದ್ಧನಾಗಿದ್ದ. ಅಲ್ಲದೆ ಹೆಂಡತಿಯನ್ನು ಅಧ್ಯಕ್ಷೆ ಮಾಡುವುದಕ್ಕಾಗೇ ನಾನೇ ಮುಂದೆ ನಿಂತು ಸಾಮಾನ್ಯ ವರ್ಗ (ಮಹಿಳೆ) ಮೀ... ಮಾಡಿಸಿಕೊಂಡು ಬಂದಿದ್ದೇನೆ ಎಂದು ... ಮಾತನಾಡಿಕೊಂಡು ತಿರುಗುತ್ತಿದ್ದ. ಅವನಿಗೆ ಬೆನ್ನೆಲು... ನಿಂತದ್ದು ತಮ್ಮಣ್ಣ.



ಪ್ರೇಮಕುಮಾರಿ

ಸ್ವಾಮಿಯ ಈ ದುರಹಂಕಾರದ ಮಾತ... ಚಲುವರಾಯಸ್ವಾಮಿ ಹಾಗೂ ಪುಟ್ಟರಾಜುರನ್ನು ಕೆರ... ಅಲ್ಲದೇ ತನ್ನ ಪತ್ನಿ ನಾಗರತ್ನ ಗೆದ್ದ... ಎಚ್.ಡಿ.ಕುಮಾರಸ್ವಾಮಿ ಮನೆಗೆ ತೆರಳಿದ್ದ ಸ್ವಾಮಿ, ... ಹೂವಿನ ಹಾರ ಹಾಕಿ ಅಭಿನಂದಿಸಿ ಬಂದ... ಫೋಟೊಗಳು ಇತರರ ಕಣ್ಣು ಕುಕ್ಕುವಂತೆ ರಾರಾ... ತಮ್ಮಣ್ಣ ಕೂಡ ತನ್ನ ಅಳಿಮಯ್ಯ ರಮೇಶ್‌ರನ್ನು ಅ... ಎಳೆತಂದು ದೊಡ್ಡ ಗೌಡರ ಮುಂದೆ ಬ್ಯಾ... ಮಾಡಿಸಿದ್ದರು. ಹೀಗಾಗಿ ನಾ... ಅಧ್ಯಕ್ಷೆಯಾಗುವುದು ಖಚಿತ ... ಸುದ್ದಿ ಜಿಲ್ಲೆಯಾದ್ಯಂತ ಕೇಳಿಬರ...

ಚೆಲುವಣ್ಣನ ಮಾಸ್ಟರ್‌ಪ್ಲಾನ್

ಆಗ ರಂಗ ಪ್ರವೇ... ಚಲುವರಾಯಸ್ವಾಮಿ ತನ್ನ ... ದೇವಲಾಪುರ ಜಿ.ಪಂ. ಸದಸ್ಯೆ ... ಶಂಕರ್ ಹೆಸರನ್ನು ತೇಲಿಬಿ... ಸಂಸದ ಪುಟ್ಟರಾಜು ತನ್ನ ... ಲಕ್ಷ್ಮೀಸಾಗರ ಜಿ.ಪಂ. ಸದಸ್ಯ ಶಾ... ರಾಮಕೃಷ್ಣರ ಪರ ಕಣಕ್ಕಿಳ... ಯಾವಾಗ ಚಲುವರಾಯಸ್ವಾಮಿ, ಪುಟ್ಟರಾಜು ಪ್ರವೇಶಿಸಿದರೋ ಅದುವರೆಗೂ ಮೀಸಲಾತಿಗೆ ... ಕೋಟಿ ಖರ್ಚು ಮಾಡಿದ್ದೇನೆ, ಅಧ್ಯಕ್ಷ ಸ್ಥಾನಕ್ಕೂ ... ಕೋಟಿ ಖರ್ಚು ಮಾಡುತ್ತೇನೆ ಎಂದು ಹೇಳಿಕೊ... ತಿರುಗುತ್ತಿದ್ದ ದುಡ್ಡಿನಕುಳ ಮದ್ದೂರು ಸ್ವಾಮಿಗೆ ... ಶಾಕ್ ಹೊಡೆದಂತಾಗಿತ್ತು.

ಅಧ್ಯಕ್ಷ ಸ್ಥಾನಕ್ಕೆ ರುಕ್ಮಿಣಿ ಶಂಕರ್, ಶಾಂತಲಾ ರಾಮ... ಜೊತೆ ನಾವೂ ಕೂಡ ರೇಸಿನಲ್ಲಿದ್ದೇವೆ ... ಅನುಪಮಕುಮಾರಿ, ಸುಧಾ ಜಯಶಂಕರ್ ಬೆಂಬ... ಮೂಲಕ ಜೆಡಿಎಸ್ ನಾಯಕರ ಮುಂದೆ ಒತ್ತಡ ಹಾ... ಶುರು ಮಾಡಿದರು. ಅದುವರೆಗೂ ನಾಗರತ್ನ... ಅಧ್ಯಕ್ಷೆಯಾಗುವುದು ಖಚಿತ ಎಂಬ ವಿಶ್ವಾಸದಲ್ಲಿ ಬೀ... ತಮ್ಮಣ್ಣನಿಗೆ ಯಾಕೋ ಪರಿಸ್ಥಿತಿ ಸರಿಯಿಲ್ಲ ರಾಂಗ್ ... ಎಂದು ಗೊತ್ತಾಗಿಹೋಯಿತು. ಚಲುವರಾಯಸ್ವಾಮಿ... ಪುಟ್ಟರಾಜು ತನ್ನನ್ನು ಹಣಿಯಲೆಂದೇ ತಮ್ಮ ... ಸದಸ್ಯರಿಂದ ಒತ್ತಡ ಹಾಕಿಸುತ್ತಿದ್ದಾರೆಂಬ ... ಅರ್ಥವಾಯಿತು. ಮೇ 2ರಂದು ಅಧ್ಯಕ್ಷ-ಉ... ಚುನಾವಣೆಯ ದಿನ ಮಂಡ್ಯದ ಪ್ರವಾಸಿಮಂದಿ... ಪುಟ್ಟರಾಜು, ಚಲುವರಾಯಸ್ವಾಮಿ, ರಮೇಶ್... ನಾರಾಯಣಗೌಡ, ತಮ್ಮಣ್ಣ, ವಿಧಾನಪರಿಷತ್ ... ಅಪ್ಪಾಜಿಗೌಡ, ಮಾಜಿ ಶಾಸಕ ಅನ್ನದಾನಿ, ಜಿ... ಜಿಲ್ಲಾಧ್ಯಕ್ಷ ಡಿ.ರಮೇಶ್ ಸಮ್ಮುಖದಲ್ಲಿ ನಡೆದ ಸಭ... 27 ಮಂದಿ ಜೆಡಿಎಸ್ ಸದಸ್ಯರಿದ್ದರು. ಅಲ್ಲಿ ತ... ಅಧ್ಯಕ್ಷ ಸ್ಥಾನಕ್ಕೆ ನಾಗರತ್ನ ಸ್ವಾಮಿ ಹೆಸರನ್ನು ... ತರುತ್ತಿದ್ದಂತೆ, ಇತ್ತ ಚಲುವರಾಯಸ್ವಾಮಿ, ಪುಟ್ಟ... ತಮ್ಮ ಕ್ಷೇತ್ರದ ಸದಸ್ಯರ ಹೆಸರನ್ನು ಸೂಚಿಸಿ ಅ... ಅಧ್ಯಕ್ಷರನ್ನಾಗಿ ಮಾಡಬೇಕೆಂದು ಬ್ಯಾಟಿಂಗ್ ಆರಂಭಿ... ಕೊನೆಗೂ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾ... ಜೆಡಿಎಸ್ ನಾಯಕರು ವಿಫಲರಾದರು.

ಸಭೆಯಲ್ಲಾಗುತ್ತಿದ್ದ ಪ್ರತಿಯೊಂದು ಬೆಳವಣಿಗೆ... ಜಿಲ್ಲಾಧ್ಯಕ್ಷ ಡಿ.ರಮೇಶ್, ಕುಮಾರಸ್ವಾಮಿಗೆ ಫೋ...

ಗೌಡರ ಹಿತ್ತಾಳೆ ಕಿವಿಯೂ, ತಮ್ಮಣ್ಣ ಮಗನ ಸೋಲೂ

ದೇವೇಗೌಡರು ಎಷ್ಟು ಚಾಣಾಕ್ಷ ರಾಜಕಾರಣಿಯೋ ಅಷ್ಟೇ ಬೇಗ ಹೇಳಿಕೆ ಮಾತುಗಳಿಗೂ ಜೋತುಬೀಳುತ್ತಾರೆ. ಚಾಡಿ ಮಾತುಗಳಿಗೆ ತೆರೆದುಕೊಳ್ಳುವ ಅವರ ಹಿತ್ತಾಳೆ ಕಿವಿಗಳನ್ನು ಬಂಡವಾಳ ಮಾಡಿಕೊಂಡೇ ಬೆಳೆದು ಬಲಾಢ್ಯಗೊಂಡ ನಾಯಕರಿದ್ದಾರೆ. ನಿಜ ಹೇಳಬೇಕೆಂದರೆ ಜೆಡಿಎಸ್‌ನ ಇವತ್ತಿನ ದುಸ್ಥಿತಿಗೂ ಅದೇ ಕಾರಣವೆಂದರೂ ತಪ್ಪಾಗಲಿಕ್ಕಿಲ್ಲ. ಡಿ.ಸಿ.ತಮ್ಮಣ್ಣ ಕೂಡ ಗೌಡರ ಈ ವೀಕ್ನೆಸ್ ಲಾಭ ಮಾಡಿಕೊಂಡವರಲ್ಲಿ ಒಬ್ಬ. 2004ರಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ಡಿ.ಸಿ.ತಮ್ಮಣ್ಣ ಕಾಂಗ್ರೆಸ್‌ನಿಂದ ಗೆಲ್ಲಲು ದೇವೇಗೌಡರೇ ಕಾರಣ. ವಿವೇಕಾನಂದ ಮತ್ತು ಎಂ.ಎಸ್.ಸಿದ್ದರಾಜು ಇಬ್ಬರನ್ನು ಬಳಸಿಕೊಂಡ ದೇವೇಗೌಡ ಇಬ್ಬರಿಗೂ ಜೆಡಿಎಸ್ 'ಬಿ' ಫಾರಂ ಕೊಟ್ಟು ಇವರಿಬ್ಬರ ನಡುವಿನ ಹಣಾಹಣಿಯಲ್ಲಿ ಬೀಗರಾದ ತಮ್ಮಣ್ಣ ಆಯ್ಕೆಯಾಗುವಂತೆ ನೋಡಿಕೊಂಡರು. 2008ರ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದ ತಮ್ಮಣ್ಣ ಕಲ್ಪನಾ ಸಿದ್ದರಾಜು ವಿರುದ್ಧ ಸೋತು ಸುಣ್ಣವಾಗಿ ಮನೆ ಸೇರಿದ್ದರು. ಜಿಲ್ಲೆಯಲ್ಲಿ ಬಿಜೆಪಿ ಪಕ್ಷದ ಬಗೆಗಿರುವ ನಿರಾಸಕ್ತಿಯಿಂದ 2013ರ ಚುನಾವಣೆ ವೇಳೆಗೆ ಮತ್ತೆ ಕಾಂಗ್ರೆಸ್ ಸೇರಲು ಮುಂದಾದ ತಮ್ಮಣ್ಣನಿಗೆ ಎಸ್.ಎಂ.ಕೃಷ್ಣ, ಮಾದೇಗೌಡ ಅವಕಾಶ ನೀಡಲಿಲ್ಲ; ಜೊತೆಗೆ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕೂಡ ವಿರೋಧ ಹೊರಹಾಕಿದ್ದರು. ಆಗ ಅಳಿಯ ರಮೇಶ್ ಮೂಲಕ ಜೆಡಿಎಸ್ ಕದ ತಟ್ಟಿದ ತಮ್ಮಣ್ಣ, ದೇವೇಗೌಡರ ಕಿವಿ ಕಚ್ಚಿ ಪಕ್ಷನಿಷ್ಠೆ ಕಲ್ಪನಾ ಸಿದ್ದರಾಜುರನ್ನೇ ನೇಪಥ್ಯಕ್ಕೆ ಸರಿಸಿ 2013ರ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಪಡೆದಿದ್ದರು.

2004ರಲ್ಲಿ ಬೀಗ ತಮ್ಮಣ್ಣರನ್ನು ಗೆಲ್ಲಿಸಲು ಬಿ.ವಿವೇಕಾನಂದ ಮತ್ತು ಸಿದ್ದರಾಜುನನ್ನು ಬೀಗರ ಔತಣದ ಕುರಿಯಾಗಿಸಿದ ದೇವೇಗೌಡರು, 2013ರಲ್ಲಿ ಮತ್ತೆ ಬೀಗರ ಔತಣಕ್ಕೆ ಕಲ್ಪನಾ ಸಿದ್ದರಾಜುರನ್ನು ಬಲಿಕೊಟ್ಟಿದ್ದರು. ಆಗಿನ್ನೂ ಪಕ್ಷದೊಳಗೆ ಚೆಲುವರಾಯಸ್ವಾಮಿ ಈ ಮಟ್ಟದ ಬಂಡಾಯವೆದ್ದಿರಲಿಲ್ಲ, ಹಾಗಾಗಿ ತಮ್ಮಣ್ಣ ಪಕ್ಷದ ಮೇಲೆ ಹಿಡಿತ ಸಾಧಿಸಿಯೇ ಬಿಟ್ಟರು. ಗೆದ್ದ ತಕ್ಷಣವೇ ಕಲ್ಪನಾ ಸಿದ್ದರಾಜು ಪರವಾಗಿದ್ದ ಮದ್ದೂರಿನ ಮೂಲ ಜೆಡಿಎಸ್ ನಾಯಕರನ್ನು ತುಳಿಯಲು ಹೊರಟರು. ಸಿದ್ದರಾಜು ನೆರಳಿನಲ್ಲೇ ಬೆಳೆದುಕೊಂಡಿದ್ದ ಪುರಸಭೆ ಮಾಜಿ ಅಧ್ಯಕ್ಷ ಎಂ.ಸಿ.ಬಸವರಾಜು ತಮ್ಮಣ್ಣ ಬಲೆಗೆ ಬಿದ್ದು ಮನೆ ಸೇರಿದ್ದೂ ಆಯಿತು.

ಮದ್ದೂರಿನಲ್ಲೇ ಎರಡೆರಡು ಶಕ್ತಿಕೇಂದ್ರ ಉದಯಿಸುವುದು ತಮ್ಮಣ್ಣನಿಗೆ ಇಷ್ಟವಿರಲಿಲ್ಲ, ಹಾಗಾಗಿ ಚೆಲುವರಾಯಸ್ವಾಮಿ ಬಣದಲ್ಲಿದ್ದ ಬಿ.ರಾಮಕೃಷ್ಣರಿಗೆ ವಿಧಾನಪರಿಷತ್ ಟಿಕೆಟ್ ದಕ್ಕದಂತೆ ನೋಡಿಕೊಂಡಿದ್ದ. ಚೆಲುವರಾಯ ಸ್ವಾಮಿಯನ್ನು ಹಣಿಯುವ ಹವಣಿಕೆಯಲ್ಲಿದ್ದ ಗೌಡರಿಗೂ ಅದು ಬೇಕಾಗಿತ್ತು. ಹೇಗೆ ದಿನೇದಿನೇ ತಮ್ಮಣ್ಣ ಜೆಡಿಎಸ್ ಮೇಲೆ ತನ್ನ ಕಪಿಮುಷ್ಠಿ ಹಿಡಿತವನ್ನು ಬಿಗಿ ಮಾಡಿಕೊಳ್ಳುತ್ತಾ ಹೋದನೋ ಹಾಗೆಯೇ ತಮ್ಮಣ್ಣನ ವಿರೋಧಿಗಳ ಸಂಖ್ಯೆಯೂ ಬೆಳೆಯುತ್ತಾಹೋಯಿತು. ಆ ಸಿಟ್ಟೇ ಮೊನ್ನೆ ತಮ್ಮಣ್ಣನ ಮಗ ಡಿ.ಟಿ.ಸಂತೋಷ್‌ನ ಸೋಲಿಗೆ ಮುನ್ನುಡಿ ಬರೆಯಿತೆಂದರೆ ತಪ್ಪಾಗಲಾರದು. ಕಳೆದ ಜಿ.ಪಂ. ಚುನಾವಣೆಯಲ್ಲಿ ಭಾರತೀನಗರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಡಿ.ಟಿ.ಸಂತೋಷ ಸೋತು ಸುಣ್ಣವಾದ. ಹಾಗೆ ನೋಡಿದರೆ, ಸಂತೋಷ್ ಎದುರು ಸ್ಪರ್ಧಿಸಿದ್ದ ಕಾಂಗ್ರೆಸ್‌ನ ರಾಜೀವ್ ಆರ್ಥಿಕವಾಗಿ ಪ್ರಬಲನಲ್ಲ, ಆದರೂ ಸಂತೋಷ್‌ಗೆ ಸರಿಸಮಾನವಾಗಿಯೇ ಆತ ಖರ್ಚು ಮಾಡಿದ್ದ. ಸಂತೋಷನನ್ನು ಸೋಲಿಸುವ ಮೂಲಕ ತಮ್ಮಣ್ಣನ ಮುಖಭಂಗ ಮಾಡಲೆಂದೇ ಬರೋಬ್ಬರಿ 2 ಕೋಟಿಯಷ್ಟು ಹಣ ಭಾರತಿನಗರಕ್ಕೆ ಹರಿದುಬಂದಿತ್ತು. ಆ ಹಣದ ಮೂಲ ಚೆಲುವರಾಯಸ್ವಾಮಿಯತ್ತಲೇ ಬೊಟ್ಟು ಮಾಡಿ ತೋರಿಸುತ್ತಿರುವುದು ಈಗ ರಹಸ್ಯವೇನಲ್ಲ.

...ಪಿಸುತ್ತಲೇ ಇದ್ದರು. ಯಾವಾಗ ತಮ್ಮಣ್ಣನ ವಕಾಲತ್ತಿಗೆ ...ಯಾಗಿ ಮೂರ್ನಾಲ್ಕು ಹೆಸರುಗಳು ಅನಾಯಾಸವಾಗಿ ಬರುತ್ತಿರುವುದು ತಿಳಿಯಿತೋ ಆಗಲೇ ...ರಸ್ವಾಮಿಗೂ ಇದರ ಹಿಂದೆ ಚೆಲುವರಾಯಸ್ವಾಮಿಯ ...ಡವಿರುವುದು ಖಾತ್ರಿಯಾಗಿದೆ. ಆಗ ಈ ಮೂವರ ...ರ್ಥಿಗಳನ್ನೂ ಬಿಟ್ಟು ಬೇರಾವುದಾದರು ಅಭ್ಯರ್ಥಿ ಇದ್ದರೆ ...ರ ಹೆಸರನ್ನು ಪ್ರಸ್ತಾಪಿಸುವಂತೆ ಕುಮಾರಸ್ವಾಮಿಯಿಂದ ...ನೆ ಬಂದಿದ್ದೇ ತಡ ರಮೇಶ್ ರೇಸಿನಲ್ಲಿ ತೀರಾ ...ಗೆ ಕದಲಾಡುತ್ತಿದ್ದ ಸಂತೆಬಾಚಹಳ್ಳಿಯ ಪ್ರೇಮಾಕುಮಾರಿ ...ರನ್ನೇ ಪ್ರಸ್ತಾಪಿಸಿಬಿಟ್ಟರು. ಚೆಲುವಣ್ಣ-ಪುಟ್ಟಣ್ಣನಿಗೆ ...ಾದದ್ದೂ ಅದೇ ಆಗಿತ್ತು. ತಮ್ಮ ಅಭ್ಯರ್ಥಿಯೇ ...ನ್ಯಯಾಗಬೇಕೆನ್ನುವ ಹಂಬಲಕ್ಕಿಂತ ತಮ್ಮಣ್ಣನ ...ಡಿದೇಟಿಗೆ ಅವಕಾಶ ತಪ್ಪಿಸಬೇಕೆನ್ನುವುದು ಅವರ ...ದೆಯಾಗಿತ್ತು. ಬೇರೆ ಯಾರೇ ಆದರೂ ಅವರಿಗೆ ...ಂತರವಿರಲಿಲ್ಲ. ಯಾವಾಗ ತಮ್ಮ ಆಪ್ತ ವಲಯದ ...ಮಾಕುಮಾರಿ ಹೆಸರು ಮುಂಚೂಣಿಗೆ ಬಂತೋ ಆಗ ...ರಿಬ್ಬರೂ ಥಟ್ಟನೇ ಒಪ್ಪಿಕೊಂಡುಬಿಟ್ಟರು. ಖುದ್ದು ...ಮಾರಸ್ವಾಮಿಯೇ ಈ ಸೂಚನೆ ರವಾನಿಸಿದ್ದರಿಂದ ...ಮ್ಮಣ್ಣನಿಗೆ ತಲೆ ಆಡಿಸದೆ ಬೇರೆ ವಿಧಿಯೇ ಇರಲಿಲ್ಲ. ...ಗಾಗಿ ಜೆಡಿಎಸ್ ನಾಯಕರ ಅಪ್ಪಣೆಯಂತೆ ...ಮಾಕುಮಾರಿ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು.

ತಮ್ಮಣ್ಣನಾಗಲಿ, ಮದ್ದೂರು ಸ್ವಾಮಿಯಾಗಲಿ ಅಷ್ಟಕ್ಕೇ ...ಮ್ಮನಾಗುವ ಗಿರಾಕಿಗಳಾಗಿರಲಿಲ್ಲ. ಯಾವಾಗ ಅಧಿಕೃತ ...ಕಾಶ ಸಿಗಲಿಲ್ಲವೋ ಆಗ ಸ್ವಾಮಿ ತನ್ನ ಹೆಂಡತಿ ...ರತ್ನಳಿಂದಲೂ ಅಧ್ಯಕ್ಷ ಆಯ್ಕೆಗೆ ನಾಮಪತ್ರ ಸಲ್ಲಿಸಿಬಿಟ್ಟ. ...ತ್ತಿ ಬಿಕ್ಕಟ್ಟು ಎದುರಾದ್ದರಿಂದ ಜೆಡಿಎಸ್ ನಾಯಕರು ...ತ್ತಿ ಸಭೆ ಸೇರಿದರು. ಆಗ ಚೆಲುವರಾಯಸ್ವಾಮಿ, ...ಟ್ಟರಾಜು, ಅಪ್ಪಾಜಿಗೌಡರ ವಿರುದ್ಧ ತಮ್ಮಣ್ಣ ತಮ್ಮ ...ಬಲಿಗರ ಮೂಲಕ ಘೋಷಣೆ ಕೂಗಿಸಿದರು. ...ಸಿ.ತಮ್ಮಣ್ಣರನ್ನು ತುಳಿಯಲೆಂದೇ ನಾಗರತ್ನಸ್ವಾಮಿಗೆ ...ಕಾಶ ನೀಡದೆ ಪ್ರೇಮಾಕುಮಾರಿಯನ್ನು ಆಯ್ಕೆ ...ಡಲಾಗಿದೆ. ಒಂದೇ ತಾಲೂಕಿಗೆ ಅಧ್ಯಕ್ಷ-ಉಪಾಧ್ಯಕ್ಷ ...ನಗಳೆರಡನ್ನೂ ಕೊಡುವ ಅಗತ್ಯ ಏನಿತ್ತು. ...ತಮ್ಮಣ್ಣನವರ ಮೇಲಿನ ಸಿಟ್ಟಿಗೆ ನಾಗರತ್ನಸ್ವಾಮಿಯನ್ನು ...ಕೊಡಲಾಗಿದೆ' ಅಂತೆಲ್ಲ ಗೆಜ್ಜಲಗೆರೆ ಹರೀಶ, ಹೂತಗೆರೆ ...ೇಪ್, ಮರಿಸ್ವಾಮಿ, ಬಸವರಾಜು ಮೊದಲಾದ ತಮ್ಮಣ್ಣ ...ರು ಕೂಗಾಡಲಾರಂಭಿಸಿದರು. ಅಷ್ಟರಲ್ಲಿ, ಮೇಲಿಂದ ...ಂತಹ ಸೂಚನೆ ರವಾನೆಯಾಯ್ತೊ ಏನೊ, ಖುದ್ದು ...ಮ್ಮಣ್ಣನೇ ಮುಂದೆ ನಿಂತು ನಾಗರತ್ನ ಸ್ವಾಮಿಯ ನಾಮಪತ್ರ ...ಪಸ್ ತೆಗೆಸಿದರು. ಪ್ರೇಮಾಕುಮಾರಿ ನಿರಾತಂಕವಾಗಿ ...ಪಂ. ಅಧ್ಯಕ್ಷೆಯಾದರು. ಅಲ್ಲಿಗೆ, ಕಳಪೆ ರಸಗೊಬ್ಬರ ...ರಿಯೇ ಕೋಟ್ಯಾಧಿಪತಿಯಾದ ಸ್ವಾಮಿ ದುಡ್ಡಿನ ...ಂಕಾರದಿಂದ ಜಿ.ಪಂ. ಅಧ್ಯಕ್ಷ ಚುನಾವಣೆಯಲ್ಲಿ ತಮ್ಮಣ್ಣ ...ನ್ನ ನಂಬಿ ಕೋಟ್ಯಾಂತರ ಹಣ ಕಳೆದುಕೊಂಡಂತಾಗಿದೆ.

...ಕೆ.ಆರ್.ಪೇಟೆ ಶಾಸಕ ಕೆ.ಸಿ.ನಾರಾಯಣಗೌಡರಿಗೆ ತನ್ನದೇ ...ತ್ರದ ಇಬ್ಬರು ಅಧ್ಯಕ್ಷ-ಉಪಾಧ್ಯಕ್ಷರಾಗುವುದು ...ಷ್ಟವಿರಲಿಲ್ಲ. ಸಚಿವ ಸ್ಥಾನಮಾನ ಹೊಂದಿರುವ ಜಿ.ಪಂ. ...ಧ್ಯಕ್ಷೆ ಪ್ರೇಮಾಕುಮಾರಿ ಗೂಟದ ಕಾರಿನಲ್ಲಿ ...ಡಾಡುವುದಂತೂ ಸುತರಾಂ ಇಷ್ಟವಿರಲಿಲ್ಲ. ಆದರೂ ...ಬಯಸದೇ ಬಂದ ಭಾಗ್ಯ ಪ್ರೇಮಾಕುಮಾರಿಗೆ ಒಲಿದಾಗ ...ಡ ಎನ್ನಲಾಗದೆ ಸುಮ್ಮನಾದರು. ತಮ್ಮ ಬಣದಲ್ಲಿ ...ಗುರುತಿಸಿಕೊಂಡಿರುವ ಪ್ರೇಮಾಕುಮಾರಿಯನ್ನು ಅಧ್ಯಕ್ಷೆ ...ಮಾಡುವ ಮೂಲಕ ಚಲುವರಾಯಸ್ವಾಮಿ ಜಿಲ್ಲೆಯ ...ರಾಜಕಾರಣದಲ್ಲಿ ತಾವೇ ಸ್ಟ್ರಾಂಗ್ ಎಂಬ ಸಂದೇಶವನ್ನು ...ಸಿ.ತಮ್ಮಣ್ಣ, ದೇವೇಗೌಡ ಇಬ್ಬರಿಗೂ ರವಾನಿಸಿದ್ದಾರೆ.

ಮುಂದಿನ ವಿಧಾನಸಭೆ ಚುನಾವಣೆ ವೇಳೆಗೆ ಏನೂ ...ಕಾದರೂ ಆಗಬಹುದು. ಆದರೆ ಜೆಡಿಎಸ್‌ನಲ್ಲಿ ...ಈವರೆಗೂ ನಾವೇ ಜೆಡಿಎಸ್ ನಾಯಕರು ಎಂಬುದನ್ನು ...ಲುವರಾಯಸ್ವಾಮಿ, ಪುಟ್ಟರಾಜು ನಿರೂಪಿಸಿದ್ದಾರೆ. ಇಲ್ಲಿ ...ಪ್ರೇಮಾಕುಮಾರಿ ಅನಿರೀಕ್ಷಿತ, ಅಚಾನಕ್, ಅನಿವಾರ್ಯ ...ಕ್ಷ! ಚಲುವರಾಯಸ್ವಾಮಿ, ಪುಟ್ಟರಾಜು, ಬೆನ್ನಿಗೆ ...ರೇಶ್‌ಬಾಬು, ನಾರಾಯಣಗೌಡ, ಅನ್ನದಾನಿ, ಡಿ.ರಮೇಶ ...ರಿದಂತೆ ಬಹುತೇಕರು ನಿಂತಿರೋದು ಈ ...ಚುನಾವಣೆಯಿಂದ ಸಾಬೀತಾಗಿದೆ. ಒಂದುವೇಳೆ ತಮ್ಮಣ್ಣ ...ಿ ಸಾಧಿಸಲು ನಿಂತಿದ್ದರೆ ಕಾಂಗ್ರೆಸ್ ನಾಯಕರ ಜೊತೆ ...ಜೋಡಿಸುವ ಮಟ್ಟಕ್ಕೆ ಆಗಲೇ ಈ ಬಣದಿಂದ ...ಮಾತುಕತೆಗಳು ನಡೆದಿದ್ದವು. ಸಿಎಂ ಸಿದ್ದರಾಮಯ್ಯನ ಜೊತೆ ...ದ್ದು ಚಲುವರಾಯಸ್ವಾಮಿಯೇ ಈ ಸಂಬಂಧ ಚರ್ಚೆ ...ಸಿದ್ದರು ಎಂಬ ಮಾಹಿತಿಯೂ ಇದೆ. ಬಹುಶಃ ಹೀಗೆಲ್ಲಾ ...ಗುತ್ತದೆ ಎಂಬ ಸುಳಿವು ದೇವೇಗೌಡರ ಸೂಕ್ಷ್ಮಬುದ್ಧಿಗೆ ...ಸಿರಬೇಕು. ಹಾಗಾಗಿಯೇ ತಮ್ಮಣ್ಣನ ಅಭ್ಯರ್ಥಿ ನಾಗರತ್ನ ...ಮಿ ಹಿಂದೆ ಸರಿಯುವಂತೆ ಸೂಚನೆ ರವಾನಿಸಿರಬಹುದು. ...ೀ ಆಗಲಿ ಮಂಡ್ಯದಲ್ಲಿ ಜೆಡಿಎಸ್‌ನ ಆಂತರಿಕ ಜಿದ್ದಾಜಿದ್ದಿ ...ತೊಂದು ಮಜಲನ್ನು ಪ್ರವೇಶಿಸಿರೋದು ಮಾತ್ರ ಸತ್ಯ. ...ಕೆಂದರೆ, ದೇವೇಗೌಡರು ಅಷ್ಟು ಸುಲಭಕ್ಕೆ ಸೋಲನ್ನು ...ಕೈಕಟ್ಟಿ ಕೂರುವ ಆಸಾಮಿಯಲ್ಲ.

■ ವರದಿಗಾರ

ಈಚೆಗೆ ನಡೆದ ಸೋಮಯಾಗವನ್ನು ಯಾರು ನಡೆಸಿದರು ಎಂಬುದಿನ್ನೂ ನಿಗೂಢವಾಗಿದೆ. ಮತ್ತೂರಿನ ಬ್ರಾಹ್ಮಣರೇನೊ ಇದು ಲೋಕಕಲ್ಯಾಣಕ್ಕಾಗಿ ನಡೆದ ಯಾಗವೆಂದು ಬುರುಡೆ ಬಿಡತೊಡಗಿದ್ದಾರೆ. ಈ ಬುರುಡೆಗಳನ್ನು ಹಿಡಿದು ಲೋಕಕಲ್ಯಾಣ ಅಂದರೆ ಏನು ಎಂದು ಕೇಳಿದರೆ ಅವು ಸಿಟ್ಟಿನಿಂದ ಶಿಕೆ ಹಾರಿಸಿಹೋಗುವುದು ಗ್ಯಾರಂಟಿ. ಸಂಕೇತಿಗಳಲ್ಲೇ ಇರುವ ಯಾಗದ ವಿರೋಧಿಗಳು ಮತ್ತು ಪ್ರಾಣಿಬಲಿ ವಿರೋಧಿಗಳಿಂದ ಸ್ಫೋಟಗೊಂಡ ಈ ಸಂಗತಿಯ ಪ್ರಕಾರ, ಯಾಗದಲ್ಲಿ ಭಾಗವಹಿಸಿದ ಸಂಕೇತಿ ಬ್ರಾಹ್ಮಣರೆಲ್ಲಾ ಯಾಗದ ಬೆಂಕಿಗೆ ಮೇಕೆ ಮಾಂಸ ಹಾಕಿ ಅದು ಬೆಂದನಂತರ ಭಂಜಿಸುತ್ತ ಸೋಮರಸ ಹೀರಿದ್ದಾರೆ.

ಮತ್ತೂರು ಬ್ರಾಗಳು ಮೇಕೆ ಬಾಡು ತಿಂದದ್ದು!

ಶಿವಮೊಗ್ಗೆಯ ತುಂಗಾ ತೀರದಲ್ಲಿರುವ ಮತ್ತೂರಿನ ಬ್ರಾಹ್ಮಣರು, ಸೋಮಯಾಗ ಮಾಡುತ್ತ ಮೇಕೆಯ ಸುಟ್ಟು ಬಾಡು ತಿಂದು ದೇಶದಲ್ಲಿ ಸಂಚಲನವುಂಟುಮಾಡಿದ್ದಾರೆ. ಇದು ಖಂಡಿತ ಖಂಡನೆಗೆ ಯೋಗ್ಯವಲ್ಲ, ಮೆಚ್ಚತಕ್ಕ ಅಂಶವೆ. ಖಂಡನೆಗೆ ಯೋಗ್ಯ ಯಾವುದೆಂದರೆ ಮೇಕೆ ತಿಂದು ಬಾಯಿ ಒರೆಸಿಕೊಂಡು, ಹಲ್ಲಿಗೆ ಕಡ್ಡಿ ಚುಚ್ಚಿಕೊಳ್ಳುತ್ತ, ಇದು ಲೋಕಕಲ್ಯಾಣಕ್ಕಾಗಿ ನಡೆದ ಸುಟ್ಟು ಬಾಡಿನ ಸಮಾರಾಧನೆ ಎನ್ನುತ್ತಿರುವುದು.



ಮತ್ತೂರು ಈ ಹಿಂದೆ ಸಂಸ್ಕೃತ ಭಾಷೆಯನ್ನೇ ಆಡುಭಾಷೆಯಾಗಿ ಮಾತನಾಡುತ್ತೆ ಎಂಬ ಸುಳ್ಳು ಸುದ್ದಿಯಿಂದ ಹೆಸರು ಮಾಡಿತ್ತು, ಹಾಗೆ ನೋಡಿದರೆ ಅದೊಂದು ಸಂಕೇತಿ ಭಾಷೆ. ಅದರಲ್ಲಿ ಕೆಲವು ಸಂಸ್ಕೃತ ಪದಗಳಿವೆ ಅಷ್ಟೆ. ಆ ಭಾಷೆಯನ್ನು ಇಂಗ್ಲಿಷ್ ಭಾಷೆಯಂತೆ ಕಲಿತು ಮಾತನಾಡಬಹುದೇ ಹೊರತು ಅದೇ ಇಲ್ಲಿನ ಭಾಷೆಯಲ್ಲ, ಇಲ್ಲಿಂದ ಬಂದ ಹಲವಾರು ಜನ ಸಂಸ್ಕೃತ ಪಂಡಿತರು ದೇಶವಿದೇಶದಲ್ಲಿ ಖ್ಯಾತಿ ಗಳಿಸಿದ್ದಾರೆ. ಮತ್ತೂರು ಕೃಷ್ಣಮೂರ್ತಿ, ಮಾರ್ಕಂಡೇಯ ಅವಧಾನಿ, ಕೇಶವಮೂರ್ತಿ, ರಂಗನಾಥ ಶರ್ಮ.... ಇವರೆಲ್ಲಾ ದೊಡ್ಡ ಸ್ಕಾಲರ್‌ಗಳು. ಗದುಗಿನ ನಾರಾಣಪ್ಪ ಮತ್ತೂರಿನ ಬ್ರಾಹ್ಮಣರ ಗಂಟಲಲ್ಲಿ ಮರುಜನ್ಮ ಪಡೆದದ್ದು ಹೇಗೆ ಎಂಬುದು ಅಧ್ಯಯನ ಮಾಡುವಂತಹ ವಿಷಯ.

ಈ ಊರಿನ ಒಂದು ತುದಿ ಅಮೆರಿಕದಲ್ಲಿ ವಿಹರಿಸುತ್ತಿದ್ದರೆ ಮತ್ತೊಂದು ತುದಿ ಮನುಧರ್ಮ ಕಾಲದಲ್ಲೇ ಉಳಿದು ರೋಗಗ್ರಸ್ತವಾಗಿ ವರ್ತಿಸುತ್ತಿರುವುದು ವಿಪರ್ಯಾಸ. ಇಲ್ಲಿನ ಅಸ್ಪೃಶ್ಯತೆ ಆಚರಣೆಗೆ ಒಂದು ಉದಾಹರಣೆ ಕೊಡುವುದಾದರೆ, ಇಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬರುವ ವೈದ್ಯ ಯಾವ ಜಾತಿಯವನೊ ಏನೋ ಎಂದುಕೊಂಡು ಶಿವಮೊಗ್ಗದ ಪರಿಚಿತ ಶಾಪ್‌ಗೆ ಬಂದು ಟ್ರೀಟ್‌ಮೆಂಟ್ ತೆಗೆದುಕೊಂಡವರೂ ಇದ್ದಾರೆ ಅಂದರೆ ಈ ಊರಿನವರ ಮನಸ್ಥಿತಿ ಗೊತ್ತಾಗಬಹುದು. ಈ ಸಂಕೇತಿಗಳಲ್ಲೇ ವಿಚಿತ್ರ ಪಂಗಡಗಳೆಲ್ಲಾ ಇದ್ದು ಪರಸ್ಪರ ಕಂಡರಾಗದ ನಡವಳಿಕೆಯೂ ಇವೆ. ಇಂತವರಿಂದಲೇ ಸೋಮಯಾಗ ಜಗಜ್ಜಾಹೀರಾಗಿ ಮತ್ತೂರಿನ ಮಾನಹೋಯ್ತೆಂದು ಹೊಸಹೊಸ ಸುಳ್ಳುಗಳನ್ನೇ ಹೊಸೆಯತೊಡಗಿದ್ದಾರೆ.

ಈ ಊರಿಗೂ, ಯಜ್ಞಯಾಗಕ್ಕೂ ಅವಿನಾಭಾವ ಸಂಬಂಧವಿದೆ. ನಮ್ಮ ದೇಶದ ರಾಜಕಾರಣಿಗಳೂ ಇಲ್ಲಿಗೆ ಬಂದು ತಮ್ಮ ಅಭ್ಯುದಯಕ್ಕೆ ಪೂರಕವಾಗುವಂತಹ ಯಾಗ ಮಾಡಿಸುವುದು ನಡೆದುಬಂದಿದೆ.

ಆದರೆ ಈಚೆಗೆ ನಡೆದ ಸೋಮಯಾಗವನ್ನು ಯಾರು ನಡೆಸಿದರು ಎಂಬುದಿನ್ನೂ ನಿಗೂಢವಾಗಿದೆ. ಮತ್ತೂರಿನ ಬ್ರಾಹ್ಮಣರೇನೊ ಇದು ಲೋಕಕಲ್ಯಾಣಕ್ಕಾಗಿ ನಡೆದ ಯಾಗವೆಂದು ಬುರುಡೆ ಬಿಡತೊಡಗಿದ್ದಾರೆ. ಈ ಬುರುಡೆಗಳನ್ನು ಹಿಡಿದು ಲೋಕಕಲ್ಯಾಣ ಅಂದರೆ ಏನು ಎಂದು ಕೇಳಿದರೆ ಅವು ಸಿಟ್ಟಿನಿಂದ ಶಿಕೆ ಹಾರಿಸಿಹೋಗುವುದು ಗ್ಯಾರಂಟಿ. ಸಂಕೇತಿಗಳಲ್ಲೇ ಇರುವ ಯಾಗದ ವಿರೋಧಿಗಳು ಮತ್ತು ಪ್ರಾಣಿಬಲಿ ವಿರೋಧಿಗಳಿಂದ ಸ್ಫೋಟಗೊಂಡ ಈ ಸಂಗತಿಯ ಪ್ರಕಾರ, ಯಾಗದಲ್ಲಿ ಭಾಗವಹಿಸಿದ ಸಂಕೇತಿ ಬ್ರಾಹ್ಮಣರೆಲ್ಲಾ ಯಾಗದ ಬೆಂಕಿಗೆ ಮೇಕೆ ಮಾಂಸ ಹಾಕಿ ಅದು ಬೆಂದನಂತರ ಭಂಜಿಸುತ್ತ ಸೋಮರಸ ಹೀರಿದ್ದಾರೆ.

ಈ ಸುದ್ದಿ ನಾಡಿನಾದ್ಯಂತ ಬಿತ್ತರಗೊಂಡ ನಂತರ ಮತ್ತೂರು ವಿದ್ವಾಂಸ ಮತ್ತು ಯಾಗ ಆಯೋಜಕ "ಇದು ಲೋಕಕಲ್ಯಾಣಕ್ಕೆ ನಡೆಸಿದ ಯಾಗ. ಇಂತಹ ಯಾಗವನ್ನು ನಿಷೇಧಿಸಬೇಕೆಂಬ ನಿಯಮ ಸಂವಿಧಾನದಲ್ಲಿ ಇದೆಯೇ?" ಎಂದು ಕೇಳಿದ್ದಾರೆ. "ಯಾಗದಲ್ಲಿ ಹಿಂದೆ ಪ್ರಾಣಿಬಲಿ ನಡೆಯುತ್ತಿದ್ದುದು ನಿಜ. ಆದರೆ ನಾವು ಮಾತ್ರ ಮೇಕೆ ತಂದು ಅದರ ಪೂಜೆ ಮಾಡಿ ಕಳಿಸಿಕೊಟ್ಟು ನಂತರ ಸೋಮರಸ ಸೇವಿಸಲಾಗಿದೆಯೇ ಹೊರತು ಹೆಂಡ ಕುಡಿದಿಲ್ಲ" ಎಂದು ಯಾಗವನ್ನು ಆಡಿಕೊಂಡವರಿಗೆ ಸಮಜಾಯಿಸಿ ನೀಡಿದ್ದಾರೆ.

ಜತೆಗೆ ಅನಾದಿಕಾಲದಿಂದಲೂ ನಡೆದುಕೊಂಡು ಬರುತ್ತಿರುವ ಯಾಗಗಳು ಕಠಿಣ ವ್ರತ ಮತ್ತು ನಿಷ್ಠೆಯಿಂದ ಆಚರಿಸಲ್ಪಡುತ್ತವೆ. ಅಂತಹ ಸಂಪ್ರದಾಯಕ್ಕೆ ಬದ್ಧವಾಗಿ ನಡೆದಿರುವ ಯಾಗಕ್ಕೆ ಅಪಸ್ವರವೆತ್ತಬಾರದು. ದೇಶದಾದ್ಯಂತ ಸಾವಿರಾರು ಪ್ರಾಣಿಬಲಿ ನಡೆಯುತ್ತಿರುವಾಗ ಅದನ್ನು ವಿರೋಧಿಸುವುದು ಬಿಟ್ಟು ಯಾಗವೇ ಗೊತ್ತಿರದವರೆಲ್ಲಾ ಅನವಶ್ಯಕವಾಗಿ ಚರ್ಚಿಸುವುದು ಸರಿಯಲ್ಲ ಎಂದು ಈ ಮನು ಕಾಲದ ವಟು ಯಾಗವನ್ನು ಇಡಿಯಾಗಿ ಸಮರ್ಥಿಸಿಕೊಂಡಿದೆ.

ಯಾವಾಗ ಶಿವಮೊಗ್ಗ ಜಿಲ್ಲಾಡಳಿತ ಯಾಗದಲ್ಲಿ ಪ್ರಾಣಿಬಲಿ ಕೊಡಲಾಗಿದೆ ಎಂಬ ವಿಷಯದಲ್ಲಿ ತನಿಖೆ ಆರಂಭಿಸಿತೊ ಆ ಕೂಡಲೇ ಯಾಗದ ಮಾಂಸ ಭಕ್ಷಗಳು "ಪ್ರಾಣಿ ಬಲಿಯೂ ಇಲ್ಲ, ಹೆಂಡದ ಸೇವನೆಯೂ ನಡೆದಿಲ್ಲ" ಎಂದು ಉಲ್ಟಾ ಹೊಡೆದು ಕುಳಿತಿವೆ. ಒಬ್ಬನಂತೂ ಸೂಕ್ತ ಸಮಯದಲ್ಲಿ ಮೌನ ವ್ರತವನ್ನೇ ಆಚರಿಸಿಬಿಟ್ಟ.



ಯಾಗದ ಆಯೋಜಕ ಡಾ. ಸನತ್‌ಕುಮಾರನ ಪ್ರಕಾರ ಯಾಗ ವ್ರತ ನಿಷ್ಠರಿಂದ ಸಾಂಗವಾಗಿ ನಡೆದಿದೆ. ಅಂದರೆ ಮೇಕೆ ಬಾಯಿಕಟ್ಟಿ, ಸಾಯಿಸಿ, ಯಾಗ ಕುಂಡದ ಕೆಂಡದಲ್ಲಿ ಸುಟ್ಟುಕೊಂಡು, ತಿನ್ನುತ್ತ ಸೋಮರಸ ಕುಡಿಯಲಾಗಿದೆ. ಸದರಿ ಸೋಮರಸಕ್ಕೆ 32 ಕಾಯಿಲೆಗಳನ್ನು ಗುಣಪಡಿಸುವ ಶಕ್ತಿಯಿದೆ ಎನ್ನುವುದಾದರೆ ಮತ್ತೂರು ಬ್ರಾಹ್ಮಣರಿಗೆ ಇನ್ನೆಷ್ಟು ಕಾಯಿಲೆಗಳು ಅಮರಿಕೊಂಡಿರಬಹುದು ಎಂದು ವೈದ್ಯಕೀಯ ಲೋಕ ತಪಾಸಣೆ ಮಾಡಿ ಹೇಳಬೇಕಾಗುತ್ತದೆ.

ಇನ್ನು ಜಿಲ್ಲಾಡಳಿತದ ಹುಕುಂ ನಂತರ ತನಿಖೆಗೆಂದು ಹೋದ ತಂಡಕ್ಕೆ ಬ್ರಾಹ್ಮಣರು ಮೇಕೆ ತಿಂದ ಬಗ್ಗೆ ಯಾವ ಕುರುಹೂ ಸಿಕ್ಕಿಲ್ಲ, ಹಾಗೆ ಸಿಗಬೇಕಾದರೆ ತಿಂದ ಬ್ರಾಹ್ಮಣರು ಬಹಿರ್ದೆಸೆಗೆ ಹೋದ ಜಾಗದಲ್ಲಿ ಕಡ್ಡಿಯಿಂದ ಕೆದಕಿ ಮೇಕೆ ಮಾಂಸದ ಕುರುಹುಗಳನ್ನು ಪತ್ತೆ ಹಚ್ಚಬೇಕಾಗುತ್ತದೆ. ಎಲ್ಲರ ಮನೆಗಳಲ್ಲೂ ಕಕ್ಕಸ್ ರೂಮುಗಳಿರುವುದರಿಂದ ಅದೂ ಸಾಧ್ಯವಿಲ್ಲ, ಇನ್ನು ಸೋಮರಸ ಎಂಬ ಹೆಂಡದ ಅಮಲಿಳಿದು ಒಂದು ವಾರವಾಗಿದೆ. ಆದ್ದರಿಂದ ಅದೂ ಕೂಡ ಸಾಧ್ಯವಿಲ್ಲ. ಈ ನಡುವೆ ಇಡೀ ಕೃತ್ಯ ನಡೆದೇ ಇಲ್ಲವೆಂದು ವಾದಿಸುತ್ತಿರುವ ಆಯೋಜಕರೂ ತಾವು ಪೂಜೆ ಮಾಡಿ ಬಿಟ್ಟು ಬಿಟ್ಟ ಮೇಕೆ ತಂದು ನಿಲ್ಲಿಸಲು ತಯಾರಿಲ್ಲ. ಒಟ್ಟು ರೆಡ್‌ಹಾಂಡಿನಲ್ಲೇ ಸಿಕ್ಕಿಬಿದ್ದಿರುವ ಮೇಕೆ ಭಕ್ಷ ಬ್ರಾಹ್ಮಣರು ಕ್ಷಮೆಗೆ ಮತ್ತು ಕನಿಕರಕ್ಕೆ ಯೋಗ್ಯರಾಗಿ ಕಾಣುತ್ತಿದ್ದಾರೆ. ಏಕೆಂದರೆ ಈಚೆಗೆ **Barbecue** ಕಾರ್ಯಕ್ರಮ ಹೆಚ್ಚು ಜನಪ್ರಿಯವಾಗುತ್ತಿದೆ. ಹೊಸ ತಲೆಮಾರಿನ ಹುಡುಗರು ಯಜ್ಞಕುಂಡದಂತಹ ಪೆಟ್ಟಿಗೆಗೆ ಮರಳು ತುಂಬಿ, ಅದರ ಮೇಲೆ ಇದ್ದಿಲು ಹರಡಿ, ಅದರ ಮೇಲೊಂದು ಜಾಲರಿ ಇಟ್ಟು, ಕೆಂಡ ನಿಗಿಯಾದಾಗ ಅದರ ಮೇಲೆ ಖಂಡ ಹಾಕಿ ಸುಟ್ಟುಕೊಂಡು ತಿನ್ನುತ್ತ ರಮ್ಮು, ವಿಸ್ಕಿ ಅಥವಾ ಬೀರು ಕುಡಿಯುತ್ತಿವೆ. ಇಂತದೇ ಘನ ಕಾರ್ಯವೊಂದು ಮತ್ತೂರಿನಲ್ಲಿ ನಡೆದಿದೆಯೇ ಹೊರತು ಅದರಿಂದ ಯಾವ ಲೋಕಕಲ್ಯಾಣವೂ ಜರುಗಲಾರದು.


ಸದರಿ ಘಟನೆಯನ್ನು ಸಮರ್ಥಿಸಿಕೊಂಡು ಮಾತನಾಡಿರುವ ಕೆ.ಆರ್. ಮಂಜುನಾಥ್ ಎಂಬಾತ "ದೇಶದಲ್ಲಿ ಹೆಚ್ಚುತ್ತಿರುವ ಅತ್ಯಾಚಾರ, ಭಯೋತ್ಪಾದನೆ, ಬರಗಾಲದಿಂದ ಮುಕ್ತಿ ಸಿಗಲೆಂದು ಯಾಗ ನಡೆಸಲಾಗಿದೆ. ಮೇಕೆ ಬಲಿ ನಡೆಯದೇ ಇದ್ದರೂ ಕೂಡ ದೇಶದಾದ್ಯಂತ ನಡೆಯುವ ಪ್ರಾಣಿ ಹತ್ಯೆ, ಗೋವುಗಳ ಹತ್ಯೆ ಬಗ್ಗೆ ಮಾನವೀಯತೆ ತೋರದವರ ಇಬ್ಬಗೆ ನೀತಿ ಇದು" ಎಂದಿದ್ದಾನೆ. ಆತನ ಪ್ರಕಾರ ಯಜ್ಞಕುಂಡದಲ್ಲಿ ಬಳಸಿದ ಸೌಟುಗಳೇ ಮಾಧ್ಯಮದವರಿಗೆ ಆಡಿನ ಕಾಲಿನಂತೆ ಕಾಣಿಸಿವೆಯಂತೆ. ಇವನ ಅಭಿಪ್ರಾಯ ಓದಿದ ದೇವನೂರು ಮಹಾದೇವ ಮಂಡ್ಯದಲ್ಲಿ ಜರುಗಿದ ಅಂತರ್ಜಾತಿ ವಿವಾಹಿತರ ಮೇಳದಲ್ಲಿ "ಇವನ ಹುಟ್ಟೇ ಅಸಹ್ಯಕರವಾದ ಘಟನೆ" ಎಂದರು. ಜನ ಚಪ್ಪಾಳೆ ಹೊಡೆದರು. **Barbecue** ಕೂಟವನ್ನು ದೇಶಕಲ್ಯಾಣಕ್ಕಾಗಿ ನಡೆದ ಯಾಗ ಅನ್ನುವವರಿಗೆಲ್ಲಾ ದೇವನೂರು ಅಭಿಪ್ರಾಯವೇ ಸೂಕ್ತ ಅನ್ನಿಸುತ್ತೆ.

ಈ ಯಾಗದ ವಿಷಯವಾಗಿ ನಡೆಯುತ್ತಿರುವ ತನಿಖೆಯ ಬಗ್ಗೆ ಸಿಟ್ಟುಗೊಂಡಿರುವ ಸಂತೋಷ್ ಗುರೂಜಿ ಎಂಬ ಸ್ವಯಂಘೋಷಿತ ಸ್ವಾಮಿಗೆ ಸದರಿ ಘಟನೆಯ ಖಂಡನೆಯಲ್ಲಿ ಬ್ರಾಹ್ಮಣ ದ್ವೇಷ ಕಾಣುತ್ತಿದೆ. ಬ್ರಾಹ್ಮಣನಲ್ಲದ ಈತ ಬ್ರಾಹ್ಮಣರ ಬಗ್ಗೆ ತೋರುವ ಕಾಳಜಿಯೇ ವಿಚಿತ್ರವೆನಿಸಿದೆ. ಸದಾ ತಲೆಗೂದಲು ಬೆಳೆಯುವ ಎಣ್ಣೆ ಮಾರುವ ಈತ ಕೂದಲು ಉದುರದ ಬಗ್ಗೆ ಯೋಚಿಸಬೇಕೆ ಹೊರತು, ಬ್ರಾಹ್ಮಣರ ಬಗ್ಗೆ ಯೋಚಿಸುವ ಅಗತ್ಯವಿಲ್ಲ, ಏಕೆಂದರೆ ಬ್ರಾಹ್ಮಣರಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಗುಣ ಅನಾದಿಕಾಲದಿಂದಲೂ ರಕ್ತಗತವಾಗಿ ಬಂದಿದೆ.

■ ವರದಿಗಾರ

ನಕಲಿ ಮೋದಿ ಫೇಕ್ ಡಿಗ್ರಿ





ಅಕಾಡೆಮಿಕ್ಕಾಗಿ ನಾನು ಹೆಚ್ಚಿಗೆ ಓದಿದವನಲ್ಲ. ಶಿಸ್ತಾಗಿ ನಾನು ಕ್ಲಾಸಿಗೆ ಅಂತ ಹೋಗಿದ್ದು ಹೈಸ್ಕೂಲುತನಕ ಮಾತ್ರ. ಆ ನಂತರ ರಾಷ್ಟ್ರ ಸೇವೆಯಲ್ಲಿ ದೇಶದ ಬೇರೆ ಬೇರೆ ಭಾಗಗಳನ್ನು ಸುತ್ತುತ್ತಲೇ ವಿಶ್ವವಿದ್ಯಾಲಯಗಳ ಕರೆಸ್ಪಾಂಡೆನ್ಸ್ ಕೋರ್ಸುಗಳನ್ನು ಮಾಡಲಾರಂಭಿಸಿದೆ. ದೆಹಲಿ ವಿವಿಯಲ್ಲಿ ಬಿಎ ಪದವಿ ಪಡೆದೆ. ಆನಂತರ ಮಾಸ್ಟರ್ ಡಿಗ್ರಿ ಪಾಸು ಮಾಡಿದೆ. ನಾನು ಕ್ಲಾಸಿಗೆ ಅಂತ ಅಟೆಂಡಾಗಿದ್ದು ಹೈಸ್ಕೂಲು ತನಕ ಮಾತ್ರವೇ...!

ಇದು ಹತ್ತು ವರ್ಷಗಳ ಹಿಂದೆ ಹಿಂದಿಯ ಯಾವುದೋ ನ್ಯೂಸ್ ಚಾನಲ್ಲೊಂದಕ್ಕೆ ಪ್ರಧಾನಿ ಮೋದಿ ಕೊಟ್ಟಿದ್ದ ಸಂದರ್ಶನದ ನಡುವೆ **Passing reference** ಎಂಬಂತೆ ಹಾದುಹೋಗುವ ಮಾತಿನ ಸಾಲುಗಳು. ಇವತ್ತಿಗೂ ಗೂಗಲ್‌ನ ಯೂಟ್ಯೂಬ್‌ಗೆ ಹೋಗಿ **Modis interview on his educational qualifications** ಅಥವಾ **Indian Prime Minister Narendra Modi's interview on his education** ಅಂಥ ಟೈಪಿಸಿದರೆ ಹತ್ತು ವರ್ಷದ ಹಿಂದಿನ ಸಂದರ್ಶನದ ಈ ತುಣುಕು ಪರದೆಯನ್ನಾವರಿಸುತ್ತದೆ. ಇಲ್ಲಿ ಮೋದಿಯವರ ಸಂದರ್ಶನ ಮಾಡುತ್ತಿರುವವರೊಬ್ಬ ಹಿರಿಯ ಪತ್ರಕರ್ತ. ಬಹುಶಃ ಅದು ಗುಜರಾತ್‌ಗೆ ಮೋದಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದ ಸಂದರ್ಭವಿರಬೇಕು. ಆದರೆ ಇಲ್ಲೊಂದು ಸೂಕ್ಷ್ಮವನ್ನು ಗಮನಿಸಬೇಕು. ಪ್ರಶ್ನೆ ಕೇಳಿದ ಸಂದರ್ಶನಕಾರ ಹಿಂದಿಯಲ್ಲಿ ಕೇಳಿದ್ದು ನೀವು ಎಷ್ಟು ಓದಿದ್ದೀರಾ ಅಥವಾ ನಿಮ್ಮ ಶೈಕ್ಷಣಿಕ ಮಟ್ಟವೇನು ಎಂಬ ಸಾಧಾರಣ ಪ್ರಶ್ನೆಯನ್ನು. ಇಂಥದೊಂದು ಸಹಜವಾದ ಪ್ರಶ್ನೆಗೆ ಬೇರೆ ಯಾರೇ ಆದರೂ ಸಹಜವಾಗೇ 'ತಾನು ಇಂಥಾದ್ದರಲ್ಲಿ ಮಾಸ್ಟರ್ ಡಿಗ್ರಿ ಮುಗಿಸಿದ್ದೇನೆ...' ಎಂದಷ್ಟೇ ಹೇಳಿ ಮಾತು ಮುಗಿಸುತ್ತಾರಲ್ಲವೇ?

ಹೆಚ್ಚೆಂದರೆ 'ನಾನು ಎಂಎ ತನಕ ಮಾತ್ರವೇ ಓದಿದ್ದು' ಅಥವಾ 'ಇಂಥಾ ಯೂನಿವರ್ಸಿಟಿಯಲ್ಲಿ ಮಾಸ್ಟರ್ ಡಿಗ್ರಿ ಮುಗಿಸಿಕೊಂಡೆ' ಎಂದು ಒಂದೇ ವಾಕ್ಯದಲ್ಲಿ ಹೇಳಿ ಮುಗಿಸಬೇಕಲ್ಲವೇ? ಆದರೆ ಮೋದಿ ಕೇಳದ ವಿವರಗಳನ್ನು ಅನವಶ್ಯಕವಾಗಿ ಹಿಗ್ಗಿಸಿ ಜಗ್ಗಾಡುತ್ತಾರೆ. ತಾನು ಕ್ಲಾಸಿಗೆ ಅಂತ ಹೋಗಿದ್ದು ಹೈಸ್ಕೂಲುವರೆಗೆ ಮಾತ್ರ ಎಂದು ಒತ್ತಿಒತ್ತಿ ಹೇಳಿ ಆನಂತರದ್ದೆಲ್ಲ ಕರೆಸ್ಪಾಂಡೆನ್ಸ್ ಅಂದರೆ ಕಾಲೇಜಿಗೆ ಹೋಗದೆಯೇ ಕ್ಲಾಸಿಗೆ ಅಟೆಂಡಾಗದೆಯೇ ಅಂಚೆ ತೆರಪಿನ ಕೋರ್ಸ್ ಎಂದು ತಮಗರಿವಿಲ್ಲದೆಯೇ ಕೇಳದ ಪ್ರಶ್ನೆಗೆ ಬೇಡದ ವಿವರಣೆ ಯತ್ನ ಮಾತು ಎಳೆದಾಡುತ್ತಾರೆ. ಸಾಮಾನ್ಯವಾಗಿ ಯಾರೂ ಶೈಕ್ಷಣಿಕ ಹಿನ್ನೆಲೆಯನ್ನು ಕೇಳುವಾಗ ಕ್ಲಾಸಿಗೆ ಹೋಗಿದ್ದು, ಹೋಗದೇ ಇದ್ದದ್ದು, ಎಷ್ಟು ಬಾರಿ ಫೇಲು, ಕರೆಸ್ಪಾಂಡೆನ್ಸಾ ರೆಗ್ಯೂಲರಾ ಇತ್ಯಾದಿ ಏನೊಂದು ವಿವರಗಳನ್ನೂ ಕೇಳುವುದಿಲ್ಲ ಅಥವಾ ಬೇಕಾಗಿಯೂ ಇರುವುದಿಲ್ಲ. ಆದರೆ ಮೋದಿ ತಾನು ಮಾಸ್ಟರ್ ಡಿಗ್ರಿ ಇನ್ ಪೊಲಿಟಿಕಲ್ ಸೈನ್ಸ್ ಎಂದು ಒಂದೇ ಮಾತಲ್ಲಿ ಹೇಳುವ ಬದಲು ಓದಿದ್ದು ಹೈಸ್ಕೂಲುವರೆಗೆ ಮಾತ್ರ ಆನಂತರ ಇಂತಿಂಥಲ್ಲಿ ಇಂತಿಂಥದ್ದೇ ರೀತಿಯಲ್ಲಿ ಏನೆಲ್ಲಾ ಡಿಗ್ರಿ ಪಡಕೊಂಡೆ ಎಂದು ಕೇಳದೇಹೋದರೂ ಮೇಲೆ ಬಿದ್ದು ಬೇಡದ ವಿವರಣೆಯನ್ನು ಒತ್ತಿಒತ್ತಿ ಹೇಳುತ್ತಾರೆ.


ಇದು 'ಕಳ್ಳನ ಮನಸ್ಸು ಹುಳ್ಳಗೆ' ಎಂಬಂತೆ ಅಪರಾಧಿ ಪ್ರಜ್ಞೆಯಿಂದ ಹುಟ್ಟುವ ಫಜೀತಿ.


ಸದ್ಯ ಪ್ರಧಾನಿ ಸಾಹೇಬರ ಶೈಕ್ಷಣಿಕ ಪಾಂಡಿ
ದೇಶದುದ್ದಗಲಕ್ಕೂ ಹುಸಿಬಿಸಿ ಚರ್ಚೆಯ ವಸ್ತು. ಕೇಂದ್ರೀಯ
ಮಾಹಿತಿ ಆಯುಕ್ತ ಎಂ. ಶ್ರೀಧರ್ ಆಚಾರ್ಯಲು ಏಪ್ರಿ
ಕೊನೇವಾರದಲ್ಲಿ ನೇರವಾಗಿ ಪ್ರಧಾನಿ ಸಚಿವಾಲಯಕ್ಕಷ್ಟೇ
ಅಲ್ಲ; ಗುಜರಾತ್ ವಿಶ್ವವಿದ್ಯಾಲಯ ಮತ್ತು ದೆಹ
ವಿಶ್ವವಿದ್ಯಾಲಯಗಳಿಗೆ ಖುದ್ದಾಗಿ ಪತ್ರ ಬರೆಯುತ್ತಾ
ಪ್ರಧಾನಿ ಮೋದಿಯ ಡಿಗ್ರಿ ಮಾರ್ಕ್ಸ್‌ಕಾರ್ಡುಗಳನ್ನು 'ಅದ
ಪದವಿ ಪ್ರಮಾಣಪತ್ರಗಳನ್ನೂ ಮುಚ್ಚಿಡದೇ ಸಾರ್ವಜನಿಕವಾ
ಲಭ್ಯವಾಗಿಸುವಂತೆ ಆದೇಶಿಸಿದ್ದು ದೆಹಲಿ ಮುಖ್ಯಮಂ
ಅರವಿಂದ್ ಕೇಜ್ರಿವಾಲ್ ಕೊಟ್ಟ ದೂರಿನ ಮೇರೆಗೆ.


ಗುಜರಾತ್ ಯೂನಿವರ್ಸಿಟಿಯ ಉಪಕುಲಪ
ಎಂ.ಎನ್. ಪಟೇಲ್ ಮೊನ್ನೆ ಮೇ ಐದರಂದ
ಅಹ್ಮದಾಬಾದ್‌ನ ತಮ್ಮ ನಿವಾಸದಲ್ಲೇ ಆತುರಾತುರವಾ
ಪತ್ರಿಕಾಗೋಷ್ಠಿ ನಡೆಸಿ 1983 ರಲ್ಲಿ ನರೇಂದ್ರ ಮೋ
ತಮ್ಮ ವಿವಿಯಿಂದ ಪಡೆದ ಎಂಎ ಪದವಿಯ
ಅಂಕಪಟ್ಟಿಯನ್ನು ಬಿಡುಗಡೆ ಮಾಡುತ್ತಾರೆ. ಪೊಲಿಟಿಕಲ
ಸೈನ್ಸ್‌ನ 800 ಅಂಕದಲ್ಲಿ ಮೋದಿಗೆ ಬಂದದ್ದು 40
ಅಂದರೆ ಶೇ. 50 ರಷ್ಟು. ಯೂರೋಪ್‌ನ ರಾಜಕಾರಣ
ಸಮಾಜೋ ರಾಜಕೀಯ ಚಿಂತನೆಗಳನ್ನ, ರಾಜಕೀಯ
ಮನೋಶಾಸ್ತ್ರ ಆಧುನಿಕ ಭಾರತ ಮತ್ತು ರಾಜಕೀಯ
ಚಿಂತನೆಗಳು ಇತ್ಯಾದಿ ವಿಷಯಗಳಲ್ಲಿ ಮಾಸ್ಟರ್ ಡಿ
ಪಡೆದ ಮೋದಿಯ ಮಾರ್ಕ್ಸ್‌ಕಾರ್ಡ್ ಏನೋ ಸರಿಯಾಗ
ಇತ್ತು, ಆದರೆ ಗುಜರಾತ್ ವಿವಿಯ ಎಂಎ ಕೋರ್ಸಿ
ಪ್ರವೇಶ ಕೋರಿ ಅರ್ಜಿ ಹಾಕುವಾಗ ದೆಹ
ಯೂನಿವರ್ಸಿಟಿಯಿಂದ ಲಗತ್ತಿಸಬೇಕಾದ **migratio**
certificate ಮತ್ತು ದೆಹಲಿ ವಿವಿಯ ಬಿಎ ಪದವಿ
ಅಂಕಪಟ್ಟಿಗಳು ಮಾತ್ರ ನಾಪತ್ತೆಯಾಗಿದ್ದವು.


ಮೋದಿ ಎಂಎ ಕೋರ್ಸಿಗೆ ಪ್ರವೇಶ ಬಯಸಿ ಹಾಕಿ
ಅರ್ಜಿಯಲ್ಲಿ ಆದಕ್ಕೂ ಮುನ್ನ ಅವರು ದೆಹಲಿ ವಿವಿಯ
ಪಡೆದ ಬಿಎ ಪದವಿಯ ಅಂಕಪಟ್ಟಿ ಮತ್ತು **migratio**
certificate ಅನ್ನು ಲಗತ್ತಿಸಿದ್ದೇ ಆಗಿದ್ದರೆ ಅಹ್ಮದಾಬಾದ್
ಗುಜರಾತ್ ವಿವಿಯವರ ಬಳಿ ಅದು ಇರಬೇಕಿತ್ತಲ್ಲವೆ
ಆದಕ್ಕೆ ಗುಜರಾತ್ ವಿವಿಯ ಉಪಕುಲಪತಿ ಎಂ.ಎನ
ಪಟೇಲ್ ವಿಚಿತ್ರ ಕತೆಯೊಂದನ್ನು ಹೆಣೆದಿಟ್ಟಿದ್ದರು.


ಮಾಸ್ಟರ್ ಡಿಗ್ರಿ ಕೋರ್ಸುಗಳಿಗೆ ಪ್ರವೇಶ ಪಡೆಯು
ಹಂತದಲ್ಲಿ ವಿದ್ಯಾರ್ಥಿಗಳು ಸಲ್ಲಿಸುವ ತಮ್ಮ ಬಿಎ ಡಿ
ಮತ್ತು **migration** ಸರ್ಟಿಫಿಕೇಟುಗಳನ್ನು ಪರಿಶೀಲಿಸಿ











ರ ಎಂಎ ಆಡಳಿತ ವರ್ಗವೇ ಅದನ್ನೆಲ್ಲ ನಾಶ ಪಡಿಸುತ್ತದೆಯಾದ್ದರಿಂದ 20 ವರ್ಷಗಳ ಹಿಂದೆ ಪ್ರಧಾನಿ ೋದಿಯವರು ಸಲ್ಲಿಸಿದ್ದ ಅವರ ಡಿಗ್ರಿ ಮತ್ತು ಮೈಗ್ರೇಷನ್ ೯ಫಿಕೇಟುಗಳ್ಯಾವವೂ ನಮ್ಮಲ್ಲಿ ಲಭ್ಯವಿಲ್ಲ!

ಗುಜರಾತ್ ವಿವಿಯ ಉಪಕುಲಪತಿ ಎಂ.ಎನ್. ೀಲ್ ಹೇಳಿಕೇಳಿ ಹಾಲಿ ಗುಜರಾತ್ ಮುಖ್ಯಮಂತ್ರಿ ತ್ತು ಮೋದಿ ಉತ್ತರಾಧಿಕಾರಿ ಆನಂದಿಬೆನ್ ಪಟೇಲರ ಲಾ. ಮೋದಿ ಮುಖ್ಯಮಂತ್ರಿಯಾಗಿದ್ದಾಗ ಕಂದಾಯ ವೆಯಾಗಿದ್ದ ಆನಂದಿಬೆನ್‌ಗೆ ಉಪಕುಲಪತಿ ಪಟೇಲ್ ಮಾಪ್ತ ಸಹಾಯಕನಾಗಿದ್ದ. ಕೇಂದ್ರೀಯ ಮಾಹಿತಿ ಮುಕ್ತರೇ ಆದೇಶ ನೀಡಿದಾಗಲೂ ಮೋದಿಯ ಎಂಎ ವಿಯನ್ನಷ್ಟೇ ಬಹಿರಂಗಪಡಿಸಿ, ದೆಹಲಿ ವಿವಿಯಿಂದ ತ್ತಿಸಿದ್ದ ದಾಖಲೆಗಳ್ಯಾವುದನ್ನೂ ಬಹಿರಂಗಪಡಿಸದೇ ದೇ ಕತೆ ಹೊಡೆದ ಗುಜರಾತ್ ವಿವಿಯ ಕುಲಪತಿ ೀಲ್‌ನ ಕಳ್ಳಾಟಕ್ಕೂ ಕಾರಣವಿತ್ತು.

ಅದು ದೆಹಲಿ ವಿವಿಯ ಮೋದಿಯ ಬಿಎ ಡಿಗ್ರಿ ಕಪಟ್ಟಿಯ ಪ್ರಮಾದ. ಗುಜರಾತ್ ಮುಖ್ಯಮಂತ್ರಿಯಾಗಿ ಗಲೇ ಅಲ್ಲೊಮ್ಮೆ ಇಲ್ಲೊಮ್ಮೆ ಮೋದಿಯ ಡಿಗ್ರಿ ೯ಫಿಕೇಟಿನ ವಿರೋಧಾಭಾಸಗಳ ಬಗ್ಗೆ ಕೇಳಿಬರುತ್ತಿತ್ತು. ಧಾನಿಯಾದ ಮೇಲೆ ಅದಕ್ಕೊಂದು ರಾಜಕೀಯ ಮಹತ್ವ ಬಂದಿಸಿತ್ತು. ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ ಆಪ್ ನಾಯಕ ರವಿಂದ್ ಕೇಜ್ರಿವಾಲ್ ಸಮಯ ಸಿಕ್ಕಾಗಲೆಲ್ಲ ಮೋದಿಯ ಕ್ಷಣಿಕ ದೌರ್ಬಲ್ಯವನ್ನೇ ಎತ್ತಾಡುತ್ತಲೇ ಬಂದರು. ಹಾಗೇ ೋದಿಯ ಡಿಗ್ರಿ ಮತ್ತದಕ್ಕೆ ಸಂಬಂಧಪಟ್ಟಂತೆ ದಾಖಲೆ ಗನ್ನೇ ಕೆದಕಲಾರಂಭಿಸಿದ ಕೇಜ್ರಿವಾಲ್ ಮುಂದೊಮ್ಮೆ ೋದಿಗೆ ದೇಶವ್ಯಾಪಿ ಮುಖಭಂಗವೊಂದಕ್ಕೆ ಕತ್ತಿ ಮಸೆಯುತ್ತಿದ್ದಾರೆಂಬುದು ದೇಶಾಧಿಕಾರಸ್ಥ ಬಿಜೆಪಿಗೆ ರ್ಥವಾಗಲು ಎಷ್ಟು ಹೊತ್ತು?

ಇದಕ್ಕೆ ಪ್ರತಿಯೇಟು ನೀಡಬೇಕಲ್ಲ ಮತ್ತು ಕೊಟ್ಟ ಟ್ಟು ಹೇಗಿರಬೇಕೆಂದರೆ ಆಪ್ ಮುಖ್ಯಮಂತ್ರಿ ಕೇಜ್ರಿವಾಲ್ ಎತ್ತೆಂದೂ ಮೋದಿಯ ಡಿಗ್ರಿ ನಕಲಿಯೆಂದು ಾಲ್ಲೆತ್ತಲೇಬಾರದು!

ಅದಕ್ಕೊಂದು ಜೆಎನ್‌ಯು ವಿದ್ಯಾರ್ಥಿ ನಾಯಕ ಕನ್ನಯ್ಯ ಕುಮಾರ್ ವಿರುದ್ಧ ದೇಶದ್ರೋಹದ ಷಡ್ಯಂತ್ರದ ಾದರಿಯಲ್ಲೇ ಟೀವಿ ಚಾನಲ್ಲೊಂದರ stinger ಗಳನ್ನೂ ಳಸಿಕೊಂಡಂತೆ ತಮ್ಮದೇ ನಿಯಂತ್ರಣದಲ್ಲಿದ್ದ ದೆಹಲಿ ಪೊಲೀಸರನ್ನೂ ಬಳಸಿಕೊಂಡು ಸದ್ದಿಲ್ಲದೆ ಾರ್ಯಾಚರಣೆಯೊಂದಕ್ಕೆ ಬಿಜೆಪಿ ಕೈಯಿಟ್ಟಿತು. ಅದೂ ಡ ನಕಲಿ ಡಿಗ್ರಿ ಜಾಲದ ವಿರುದ್ಧವೇ!

ಏಕೆಂದರೆ ಉತ್ತರ ಭಾರತದಲ್ಲಿ ನಕಲಿ ಡಿಗ್ರಿ ಜಾಲಗಳ ಾವಳಿ ಅಷ್ಟಿಷ್ಟಲ್ಲ. ಉತ್ತರ ಭಾರತದ ಅನೇಕ ಜಕಾರಣಿಗಳು, ಉದ್ದಿಮೆಪತಿಗಳು ಸಣ್ಣ ವಯಸ್ಸಲ್ಲೇ ದ್ದು ಸಂಪಾದನೆಗೆ ನಿಂತು ತಮ್ಮ ಶೈಕ್ಷಣಿಕ ಗುಣಮಟ್ಟದತ್ತ ರ್ಲಕ್ಷ್ಯದಿಂದಿರುತ್ತಾರೆ. ಮುಂದೊಮ್ಮೆ ಅಧಿಕಾರ ಅಥವಾ ಪಾರ ಸಂಪತ್ತು ಕೈಗೂಡಿದಾಗ ಸಾಮಾಜಿಕವಾಗಿ ಮಗೊಂದು ಮನ್ನಣೆಯ ಅಗತ್ಯ ಬಿದ್ದಾಗ ಡಿಗ್ರಿಗಳ ಮೊರೆ ಹೋಗುತ್ತಾರೆ. ತಮ್ಮ ಹೆಸರಿನ ಕೆಳಗೆ ಬಿಎ, ಎಂಎ, ಎಲ್‌ಎಲ್‌ಬಿ ಅಂತೆಲ್ಲ ಹಾಕಿಕೊಂಡು ಬ್ಯಾನರ್ ಬರೆಸುವುದು, ಜಾಹೀರಾತು ನೀಡುವುದು ಅಲ್ಲಿನ ಫ್ಯಾಷನ್. ಸುಬ್ರಮಣಿಯನ್ ಸ್ವಾಮಿ ಇವತ್ತಿಗೂ ಅವಕಾಶ ಸಿಕ್ಕಾಗಲೆಲ್ಲ ಸೋನಿಯಾ, ರಾಹುಲ್, ರಾಜೀವ್ ಗಾಂಧಿಯ ಡಿಗ್ರಿಗಳ ಕುರಿತಂತೆ ಗೇಲಿ ಮಾಡುತ್ತಲೇ ಇರುವುದು ಇದೇ ಕಾರಣಕ್ಕೇ!

ಪ್ರಧಾನಿಯ ಡಿಗ್ರಿ ಸರ್ಟಿಫಿಕೇಟುಗಳ ಬೆನ್ನುಹತ್ತಿದ ಕೇಜ್ರಿವಾಲ್ ಬಾಯಿ ಮುಚ್ಚಿಸಲೆಂದು ಮೋದಿಯ ಹಿಂಬಾಲಕರು ಹೆಣೆದ ಷಡ್ಯಂತ್ರಕ್ಕೆ ಬಲಿಯಾದದ್ದು ದೆಹಲಿಯ ಆಪ್ ಸರ್ಕಾರದ ಕಾನೂನು ಸಚಿವ ಜಿತೇಂದ್ರ ಸಿಂಗ್ ತೋಮರ್. ಟೀವಿ ಚಾನಲ್ಲೊಂದರ stingerಗಳನ್ನು ಬಳಸಿಕೊಂಡು ನಕಲಿ ಡಿಗ್ರಿಗಳನ್ನು ಹಂಚುತ್ತಿದ್ದವನೊಬ್ಬನ ಬಾಯಿಂದ ಬಿಡಿಸಿದಂತೆ ಸಚಿವ ತೋಮರ್ ಹೆಸರನ್ನು ಹೊರಗೆಡಹಲಾಯಿತು. ಸಚಿವ ಸ್ಥಾನದಲ್ಲಿದ್ದ ತೋಮರ್‌ರನ್ನು ನಕಲಿ ಅಂಕಪಟ್ಟಿ ಆರೋಪದ ಮೇಲೆ ದೆಹಲಿ ಪೊಲೀಸರನ್ನು ಛೂಬಿಟ್ಟು ಬಂಧಿಸಲಾಯಿತು. ಕೇಜ್ರಿವಾಲ್ ನೇತೃತ್ವದ ಆಪ್ ಸರ್ಕಾರಕ್ಕದು ದೊಡ್ಡ ಮುಖಭಂಗ. 2015 ರ ಜೂನ್‌ನಲ್ಲಿ ಕೇಜ್ರಿ ಸಂಪುಟಕ್ಕೆ ತೋಮರ್ ರಾಜೀನಾಮೆ ಕೊಟ್ಟರು.

ಅಲ್ಲಿಗೆ ಕೇಜ್ರಿವಾಲ್ ಮೋದಿಯ ಡಿಗ್ರಿಗಳ ಬೆನ್ನತ್ತಿದ್ದನ್ನು ನಿಲ್ಲಿಸುತ್ತಾರೆಂದೆ ಬಿಜೆಪಿ ಲೆಕ್ಕ ಹಾಕಿತ್ತು. ಹಾಗಾಗಲಿಲ್ಲ. ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಅಹ್ಮದಾಬಾದ್‌ನ ಮಾಹಿತಿ ಕಾರ್ಯಕರ್ತರೊಬ್ಬರು ದೆಹಲಿ ವಿವಿ ಸೇರಿದಂತೆ ಗುಜರಾತ್ ವಿವಿಯಲ್ಲಿ ಮೋದಿ ಪಡೆದಿದ್ದ ಡಿಗ್ರಿಗಳ ದಾಖಲೆ ನೀಡುವಂತೆ ಮಾಹಿತಿ ಕಾಯ್ದೆಯಡಿ ಅರ್ಜಿ ಹಾಕಿದ್ದಾರೆ. ಆದರೆ ದೆಹಲಿ ವಿವಿಯಾಗಲಿ ಗುಜರಾತ್ ವಿವಿಯಾಗಲಿ ಪ್ರಧಾನಿಯ ಡಿಗ್ರಿಗಳ ಕುರಿತಂತೆ ಯಾವುದೇ ದಾಖಲೆಗಳನ್ನೂ ನೀಡಲಿಲ್ಲ. ಹಾಗೊಮ್ಮೆ ಏನೂ ಮೋಸವಿಲ್ಲವೆಂದಿದ್ದರೆ ಅಸಲಿಯಾಗಿ ಪ್ರಧಾನಿ ಡಿಗ್ರಿ ಮುಗಿಸಿದ್ದೇ ಆಗಿದ್ದರೆ ಸಂಬಂಧಪಟ್ಟ ದಾಖಲೆಗಳನ್ನೊದಗಿಸಲು ಮುಚ್ಚು ಮರೆಯೇಕೆ?

ಅಲ್ಲಿಗೆ ಕೇಜ್ರಿವಾಲ್ ಅನುಮಾನ ಇನ್ನಷ್ಟು ದಟ್ಟವಾಗಿತ್ತು. ನೇರವಾಗಿ ಸಿಐಸಿ ಅಂದರೆ ಕೇಂದ್ರೀಯ ಮಾಹಿತಿ ಕಮೀಷನರ್‌ಗೇ ದೂರು ಕೊಟ್ಟರು. ಸಿಐಸಿ ಕಮೀಷನರ್ ಶ್ರೀಧರ್ ಆಚಾರ್ಯಲು ವಿಧಿಯಿಲ್ಲದೆ ದೆಹಲಿ ಮತ್ತು ಗುಜರಾತ್ ವಿವಿ ಸೇರಿದಂತೆ ಪ್ರಧಾನಿ ಸಚಿವಾಲಯವನ್ನೂ ಸೇರಿಸಿ ಸಂಬಂಧಪಟ್ಟ ದಾಖಲೆಗಳನ್ನೊದಗಿಸುವಂತೆ ಆದೇಶಿಸಿದ್ದಾರೆ. ಮೇ ಐದರ ಹೊತ್ತಿಗೆ ಗುಜರಾತ್ ವಿವಿಯ ಉಪಕುಲಪತಿಯೇ ಎಂಎ ಡಿಗ್ರಿಯ ದಾಖಲೆ ಕೊಟ್ಟರೆ ಇದಾಗಿ ಮೂರನೇ ದಿನಕ್ಕೆ ಅಂದರೆ ಮೇ 9ರ ಸೋಮವಾರ ಖುದ್ದು ರಾಷ್ಟ್ರೀಯ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಮತ್ತು ಹಣಕಾಸು ಸಚಿವ ಅರುಣ್ ಜೇಟ್ಲಿ ವಿಶೇಷ ಪತ್ರಿಕಾಗೋಷ್ಠಿ ಕರೆದು ಮೋದಿಯ ಡಿಗ್ರಿಯ ದಾಖಲೆಗಳನ್ನು ಬಿಡುಗಡೆ ಮಾಡಬೇಕಾಯಿತು.

ಅರುಣ್ ಜೇಟ್ಲಿಯ ಪ್ರಕಾರ ಮೋದಿ ತುರ್ತು ಪರಿಸ್ಥಿತಿ ಹೋರಾಟದ ತರುವಾಯ ದೆಹಲಿಗೆ ಬಂದರು. 1975ರ ಹೊತ್ತಿಗೆ ತಾನು ಎಬಿವಿಪಿ ಸಂಘಟನೆಯ ಮುಖ್ಯಸ್ಥನಾಗಿದ್ದಾಗ ಮೋದಿ ದೆಹಲಿಯ ಎಬಿವಿಪಿ ಕಚೇರಿಯಲ್ಲಿ ತಂಗಿದ್ದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದ್ದರು. ಅಲ್ಲಿಂದಲೇ ದೆಹಲಿ ವಿವಿಯ ಬಾಹ್ಯ ವಿದ್ಯಾರ್ಥಿಯಾಗಿ ಬಿಎ ಡಿಗ್ರಿ ಮುಗಿಸಿಕೊಂಡರು. ಇದೆಲ್ಲಕ್ಕೂ ದಾಖಲೆಗಳಿವೆ. ಕೇಜ್ರಿವಾಲ್ ಮತ್ತವರ ಹಿಂಬಾಲಕರು ದೇಶದ ಜನರ ಹಾದಿ ತಪ್ಪಿಸುತ್ತಿದ್ದಾರೆ. ಈ ದಾಖಲೆಗಳನ್ನು ನೋಡಿದ ನಂತರವಾದರೂ ಅವರು ದೇಶದ ಕ್ಷಮೆ ಯಾಚಿಸುತ್ತಾರಾ?


ಅರುಣ್ ಜೇಟ್ಲಿ ಮತ್ತು ಅಮಿತ್ ಷಾ ನಡೆಸಿದ ಪತ್ರಿಕಾಗೋಷ್ಠಿ ಮೇಲುನೋಟಕ್ಕೆ ಕೇಜ್ರಿವಾಲ್ ವಿರುದ್ಧದ ಬಿಜೆಪಿಯ ದಾಖಲಾತಿ ವಿಜಯದಂತಿತ್ತು. ಗುಜರಾತ್ ವಿವಿಯ ಮಾಸ್ಟರ್ ಡಿಗ್ರಿ ಪ್ರಮಾಣಪತ್ರ, 1975 ರಲ್ಲಿ ದೆಹಲಿ ವಿವಿಗೆ ಪ್ರವೇಶ ಕೋರಿ ಮೋದಿ ಸಲ್ಲಿಸಿದ್ದ ಅರ್ಜಿ ನಮೂನೆ, 1978 ರಲ್ಲಿ ದೆಹಲಿ ವಿವಿಯಿಂದ ಮಂಜೂರಾಗಿದ್ದ ಅಂಕಪಟ್ಟಿ, ತದನಂತರ 1979 ರ ದಿನಾಂಕದಲ್ಲಿ ನೀಡಿದ್ದ ಪದವಿ ಪ್ರಮಾಣಪತ್ರ!

ಇವಿಷ್ಟೂ ಜೇಟ್ಲಿ ಮತ್ತು ಷಾ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ದಾಖಲೆಗಳು. ಆದರೆ ನೀಡಿದ ದಾಖಲೆಗಳಲ್ಲೇ ಸತ್ಯ ಅಡಗಿತ್ತು. ಅಂಕಪಟ್ಟಿಯಲ್ಲಿ 1978 ನೇ ಇಸವಿಯಿದ್ದರೆ ಪದವಿ ಪ್ರಮಾಣಪತ್ರದಲ್ಲಿದ್ದ ಇಸವಿ 1979 ......! ದೆಹಲಿ ವಿವಿಯ ಪ್ರವೇಶದ ನಮೂನೆ ಸೇರಿದಂತೆ ಅಂಕಪಟ್ಟಿಯಲ್ಲಿದ್ದ ನರೇಂದ್ರ ಕುಮಾರ್ ಮೋದಿ ಎಂಬ ಹೆಸರಾದರೆ ಗುಜರಾತ್ ವಿವಿಯ ಎಂ.ಎ. ಪದವಿ ಪತ್ರದ ಹೊತ್ತಿಗದು ನರೇಂದ್ರ ದಾಮೋದರ್ ದಾಸ್ ಮೋದಿಯಾಗಿ ಬದಲಾಗಿತ್ತು!

ಇನ್ನೂ ವಿಚಿತ್ರವೆಂದರೆ ಮೋದಿಯ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲೂ ನರೇಂದ್ರ ದಾಮೋದರ್ ದಾಸ್ ಮೋದಿ ಎಂಬ ಹೆಸರಿದೆ. ಎಂ.ಎ. ಪದವಿ ಮತ್ತು ಹೈಸ್ಕೂಲುಗಳಲ್ಲಿ ನರೇಂದ್ರ ದಾಮೋದರ್ ದಾಸ್ ಮೋದಿ ಅಂತಲೇ ಇದ್ದದ್ದು ದೆಹಲಿ ವಿವಿಯ ಪಾಲಿಗೆ ಮಾತ್ರ ಅದ್ಹೇಗೆ ನರೇಂದ್ರ ಕುಮಾರ್ ಮೋದಿಯಾಯಿತು?

ಹಕೀಕತ್ತೇನೆಂದರೆ ಅಸಲಿಗೆ ಮೋದಿ ದೆಹಲಿ ವಿವಿಯಲ್ಲಿ ಡಿಗ್ರಿ ಪಡೆದದ್ದೇ ಸುಳ್ಳು. 1975 ರ ಹೊತ್ತಿಗೆ ದೆಹಲಿ ವಿವಿಯಲ್ಲಿ ಬಿಎ ಡಿಗ್ರಿ ಪಡೆದವರ ಮತ್ತು ದಾಖಲಾದವರ ಅಸಲೀ ಪಟ್ಟಿಯಲ್ಲಿ ನರೇಂದ್ರ ಕುಮಾರ್ ಮಹಾವೀರ್ ಪ್ರಸಾದ್ ಮೋದಿ ಎಂಬ ಹೆಸರಿದೆ. ಆದರದು ನರೇಂದ್ರ ಮೋದಿಯಲ್ಲ, ನರೇಂದ್ರ ಕುಮಾರ್ ಮಹಾವೀರ್ ಪ್ರಸಾದ್ ಮೋದಿ ಎಂಬ ಇನ್ನಾರೋ ಆಸಾಮಿಯನ್ನೇ ಪ್ರಧಾನಿ ಮೋದಿ ತನ್ನ ಹೆಸರೆಂದು ರೈಲು ಬಿಡುತ್ತಿದ್ದಾರೆ ಅಥವಾ ಇನ್ಯಾರದೋ ಹೆಸರಲ್ಲಿ ನಕಲಿ ಡಿಗ್ರಿ ಸರ್ಟಿಫಿಕೇಟು ಸೃಷ್ಟಿಸಿ ಗುಜರಾತ್ ವಿವಿಗೆ ಅರ್ಜಿ ಹಾಕಿದ್ದಾರೆ. ಬಿ.ಎ. ಡಿಗ್ರಿಯನ್ನೇ ಪಾಸು ಮಾಡಿಲ್ಲ ಅಂದಮೇಲೆ ಎಂ.ಎ. ಪದವಿ ತಾನೇ ಹೇಗೆ ನ್ಯಾಯಬದ್ಧ? ಗುಜರಾತ್ ವಿವಿಯ ದಾಖಲೆಗಳಾದರೂ ಅಸಲಿಯೆಂದು ನಂಬಲು ಬೇರಾ ಉಪಕುಲಪತಿಯ ಬಾಯಿಮಾತಿನ ಸಮರ್ಥನೆಯ ಹೊರತಾಗಿ ಬೇರೆ ಯಾವ ದಾಖಲೆಗಳ ಆಧಾರವಿದೆ?

■ ರಾ. ಸೋಮನಾಥ್



ಡಿಗ್ರಿ ಅಂಕಪಟ್ಟಿಯಲ್ಲಿ ಮಾಯಾಬಜಾರ್!


ಜೇಟ್ಲಿ ಮತ್ತು ಅಮಿತ್ ಷಾ ಬಿಡುಗಡೆ ಮಾಡಿದ ದಾಖಲೆಗಳ ಪ್ರಕಾರವೇ ಒಂದಲ್ಲ ಎರಡಲ್ಲ ಹಲವಾರು ವಿರೋಧಾಭಾಸಗಳಿವೆ. 1975 ರಲ್ಲಿ ದೆಹಲಿ ವಿವಿಗೆ ಡಿಗ್ರಿ ಕೋರ್ಸಿಗೆಂದು ದಾಖಲಾದ ಮೋದಿಯ ಪದವಿ ಪ್ರಮಾಣ ಪತ್ರದಲ್ಲಿ enrollment ನಂಬರ್ 5594/74 ಅಂದಿದ್ದರೆ ಆಯಾ ವರ್ಷದ ಮಾರ್ಕ್ಸ್‌ಕಾರ್ಡುಗಳಲ್ಲಿ ಅದು 2366/74 ಎಂದಾಗಿದೆ!

ಈ ಮಾರ್ಕ್ಸ್ ಶೀಟುಗಳದ್ದೂ ವರ್ಷದಿಂದ ವರ್ಷಕ್ಕೆ ಭಿನ್ನವಿಭಿನ್ನ ಹೆಸರುಗಳು! 1975 ರ ಅಂಕಪಟ್ಟಿಯಲ್ಲಿ ನರೇಂದ್ರ ಕುಮಾರ್ ದಾಮೋದರ್ ದಾಸ್‌ಮೋದಿ ಎಂದಾದರೆ 1976 ರ ಹೊತ್ತಿಗೆ ಕುಮಾರ್ ಮಾಯವಾಗಿ ಬರೀ ನರೇಂದ್ರ ಎಂದಾಗಿದೆ. 1975 ರಲ್ಲಿ Modi ಎಂಬ ಸ್ಪೆಲ್ಲಿಂಗ್ 1976 ರಲ್ಲಿ Mody ಆಗಿದೆ. 1977 ರಲ್ಲಿ ಮತ್ತೇ ನರೇಂದ್ರ ಹೆಸರಿನ ಮುಂದೆ 'ಕುಮಾರ್' ಶಬ್ದ ಪ್ರತ್ಯಕ್ಷವಾಗಿದೆ. ಈ ಬಾರಿ ತಂದೆಯ ಹೆಸರಲ್ಲಿ ದಾಮೋದರ್ ಪದವೇ ಬೇರೆ Das ಪದವೇ 'ಡಿ' ಕ್ಯಾಪಿಟಲ್ಲಾಗಿ ಪ್ರತ್ಯೇಕಗೊಂಡಿದೆ!

ವಿಚಿತ್ರವೆಂದರೆ 1978 ರ ಹೊತ್ತಿಗೆ ಮತ್ತೆ ನರೇಂದ್ರದ ಮುಂದಿದ್ದ 'ಕುಮಾರ್' ನಾಪತ್ತೆಯಾಗಿ ಹಿಂದಿನ ವರ್ಷವಿದ್ದ Mody ಪದದ ಕೊನೆಯ `y' ಅಕ್ಷರದ ಬದಲಿಗೆ Modi ಎಂದರೆ ಕೊನೆಯಲ್ಲಿ 'ಐ' ತೂರಿಕೆಯಾಗಿದೆ. ಒಂದು ವರ್ಷವಿದ್ದ ನರೇಂದ್ರ ಕುಮಾರ್ ಹೆಸರು ಮುಂದಿನ ವರ್ಷಕ್ಕೆ 'ಕುಮಾರ್' ಪದ ನಾಪತ್ತೆಯಾಗುವುದು, ದಾಮೋದರ್ ದಾಸ್ ಎಂಬ ಒಂದೇ ಹೆಸರಲ್ಲಿದ್ದ 'ದಾಸ್' ಪದ ಪ್ರತ್ಯೇಕಗೊಳ್ಳುವುದು. Modi ಎಂಬ ಮೋದಿಯ ಸ್ಪೆಲ್ಲಿಂಗ್‌ನ ಕೊನೆಯ I ಮತ್ತು Yಗಳು ಪಕಾಪಕಿ ನಾಪತ್ತೆಯಾಗಿ ಮತ್ತೆ ಹಿಂದಿನಂತೆ ಸೇರ್ಪಡೆಗೊಳ್ಳುವುದು ಕೇವಲ ವಿಠಲಾಚಾರಿಯ 'ಮಾಯಾ ಬಜಾರ್' ಸಿನಿಮಾದಲ್ಲೋ ಚಂದಮಾಮಾದ ಕತೆಗಳಲ್ಲೋ ಮಾತ್ರವೇ ಸಾಧ್ಯವೆಂದು ಭಾವಿಸಿದ್ದರೆ ತಪ್ಪಾಗುತ್ತದೆ.

ಪ್ರಧಾನಿ ಮೋದಿಯ ಡಿಗ್ರಿ ಅಂಕಪಟ್ಟಿಗಳಲ್ಲೂ ಜಾದೂ ಸಾಧ್ಯ!

ಬ್ರಾಹ್ಮಣರ ಮಾಂಸಾಹಾರ ಸೇವನೆಯೂ... ಅಂಬೇಡ್ಕರರ ವಿಚಾರಗಳೂ...




ಶಿವಮೊಗ್ಗ ಜಿಲ್ಲೆ ಮತ್ತೂರಿನಲ್ಲಿ ಬ್ರಾಹ್ಮಣರು ಯಾಗ ಮಾಡಿ ಮಾಂಸ ತಿಂದಿರುವುದು ರಾಜ್ಯಾದ್ಯಂತ ದೊಡ್ಡ ಸುದ್ದಿಯಾಗಿದೆ. ಸೋಮಯಾಗದಲ್ಲಿ ಎಂಟು ಆಡುಗಳನ್ನು ಬಲಿ ನೀಡಲಾಗಿದೆ. ಸೋಮರಸ(ಬಟ್ಟಿ ಇಳಿಸಿದ ಹೆಂಡ)ವನ್ನೂ ಸೇವಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇದೊಂದು ಸಂಚಲನ ಸೃಷ್ಟಿಸಿರುವ ಪ್ರಕರಣವಾಗಿದೆ. ಸಂಚಲನ, ಯಾಕೆಂದರೆ ಯಾವ ಸಮುದಾಯ ಸಂಪೂರ್ಣ ಸಸ್ಯಾಹಾರಿ ಎಂದು ಸಮಾಜ ನಂಬಿದೆಯೋ ಮತ್ತು ಅವರ ಸಸ್ಯಾಹಾರದ ಮೇಲೆ ಜನ ಮೇಲು-ಕೀಳು, ವೆಜ್-ನಾನ್ ವೆಜ್ ಎಂದು ಭಿನ್ನಭೇದ ಆಚರಿಸುತ್ತಾರೋ ಅದರ ಬುಡ ಅಲ್ಲಾಡಲು ಇದರಿಂದ ಪ್ರಾರಂಭವಾಗಿದೆಯಲ್ಲ, ಜಾತಿವ್ಯವಸ್ಥೆ ಸಡಿಲಗೊಳ್ಳಲು ಇದು ಪ್ರೇರೇಪಕೆಯಾಗಿದೆಯಲ್ಲ ಎಂಬ ಕಾರಣಕ್ಕೆ ಇದು ಸಂಚಲನ. ಈ ನಿಟ್ಟಿನಲ್ಲಿ ಇದರ (ಬ್ರಾಹ್ಮಣರ ಮಾಂಸ ಸೇವನೆಯ) ಇತಿಹಾಸ, ಅದರಲ್ಲೂ ಬಾಬಾಸಾಹೇಬ್ ಅಂಬೇಡ್ಕರರು ಅಂತಹ ಇತಿಹಾಸವನ್ನು ದಾಖಲಿಸಿರುವುದರ ಬಗ್ಗೆ ತಿಳಿದುಕೊಳ್ಳುವ ಅಗತ್ಯವಿದೆ. ತನ್ಮೂಲಕ ಜಾತಿವ್ಯವಸ್ಥೆಯ ನಾಶಕ್ಕೆ ನಮ್ಮದೂ ಪುಟ್ಟ ಕಾಣಿಕೆ ನೀಡುವ ಅಗತ್ಯವಿದೆ. ಅಂಬೇಡ್ಕರರೇನು ಉದ್ದೇಶಪೂರ್ವಕವಾಗಿ ಅಥವಾ ಯಾರಿಗೋ ಮಸಿ ಬಳಿಯಬೇಕು ಎಂಬ ಕಾರಣಕ್ಕೆ ಇತಿಹಾಸವನ್ನು, ಬ್ರಾಹ್ಮಣರ ಮಾಂಸಾಹಾರವನ್ನು ದಾಖಲಿಸಿಲ್ಲ. 1948ರಲ್ಲಿ ಪ್ರಕಟಗೊಂಡ 'ದಿ ಅನ್‌ಟಚಬಲ್ಸ್' ಎಂಬ ಅವರ ಕೃತಿಯಲ್ಲಿ ಅಸ್ಪೃಶ್ಯತೆ ಅದು ಹೇಗೆ ಉಗಮವಾಯಿತು? ಅಸ್ಪೃಶ್ಯರು ಯಾರು? ಅವರೇಕೆ ಅಸ್ಪೃಶ್ಯರಾದರು? ಅದಕ್ಕಿಂತ ಮೊದಲು ಅವರು ಏನಾಗಿದ್ದರು? ಅವರ ಸಂಸ್ಕೃತಿ-ಧರ್ಮ ಏನು? ಅವರು ಸಸ್ಯಾಹಾರಿಗಳೇ? ಮಾಂಸಾಹಾರಿಗಳೇ? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರ ಕಂಡುಕೊಳ್ಳುತ್ತಾ ಹೋಗಿದ್ದಾರೆ. ಅಂತಹ ಉತ್ತರಗಳ ಮಾದರಿಯಲ್ಲಿ ಅವರು ಕಂಡುಕೊಂಡ ಅನೇಕ ಸತ್ಯಗಳಲ್ಲಿ ಒಂದು ಅಂಶವೆಂದರೆ 'ಅಸ್ಪೃಶ್ಯತೆಯ ಮೂಲವಾಗಿ ದನದ ಮಾಂಸ ಸೇವನೆ' ಎಂಬ ಅಂಶ. ಅಂದಹಾಗೆ ಮೇಲ್ಕಾಣಿಸಿದ ರೀತಿ ಹೀಗೆ ಪ್ರಶ್ನಿಸುತ್ತಲೇ ಅಂಬೇಡ್ಕರರು ಈ ಸಂಬಂಧ ಹಲವು ಉಪಪ್ರಶ್ನೆಗಳನ್ನು ಎತ್ತುತ್ತಾರೆ. ಅವುಗಳಲ್ಲಿ ಪ್ರಮುಖವಾದುದ್ದೆಂದರೆ **Did the Hindus never eat beef?** (ಹಿಂದೂಗಳು ಎಂದೂ ಕೂಡ ದನದ ಮಾಂಸ ತಿಂದೇ ಇಲ್ಲವೆ?), **Why did non-Brahmins give up beef eating?** (ಬ್ರಾಹ್ಮಣೇತರರೇಕೆ ದನದ ಮಾಂಸ ತಿನ್ನುವುದನ್ನು ಬಿಟ್ಟರು?), **What made the Brahmins become vegetarians?** (ಬ್ರಾಹ್ಮಣರು ಸಸ್ಯಾಹಾರಿಗಳಾಗಲು ಏನು ಕಾರಣ?)

ಖಂಡಿತ, ಅಂಬೇಡ್ಕರರು ಕೇಳಿರುವ ಕಡೆಯ ಪ್ರಶ್ನೆ ಬ್ರಾಹ್ಮಣರು ಮಾಂಸಾಹಾರಿಗಳಾಗಿದ್ದರು ಎಂಬುದನ್ನು ಶ್ರುತಪಡಿಸುತ್ತದೆ. ಈ ಸಂಬಂಧ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರನ್ನು ಪರಸ್ಪರ ಹೋಲಿಕೆ ಮಾಡುತ್ತಾ ಅಂಬೇಡ್ಕರರು ಹೇಳುವುದೇನೆಂದರೆ "ಮೊದಲಿಗೆ ಇತಿಹಾಸದಲ್ಲಿ ಸ್ಪಷ್ಟವಾಗಿ ಬ್ರಾಹ್ಮಣೇತರರು ಒಂದು ಕ್ರಾಂತಿಯ ಮೂಲಕ ಹಾದುಹೋಗಿದ್ದಾರೆ. ದನದ ಮಾಂಸ ತಿನ್ನುವವರಾಗಿದ್ದ ಅವರು (ಬ್ರಾಹ್ಮಣೇತರರು) ದನದ ಮಾಂಸ ತಿನ್ನದವರಾದದ್ದು ನಿಜಕ್ಕೂ ಒಂದು ಕ್ರಾಂತಿಯೇ! ಆಶ್ಚರ್ಯವೆಂದರೆ ಬ್ರಾಹ್ಮಣೇತರರು ಒಂದು ಕ್ರಾಂತಿಯನ್ನು ಅನುಭವಿಸುವಂತಾದರೆ ಬ್ರಾಹ್ಮಣರು ಒಮ್ಮೆಲೇ ಎರಡು ಕ್ರಾಂತಿಗಳನ್ನು ನೋಡುವಂತಾಯಿತು! ಅಂದರೆ ಅವರು ದನದ ಮಾಂಸ ತಿನ್ನುವುದನ್ನು ಬಿಟ್ಟದ್ದು ಒಂದು ಕ್ರಾಂತಿಯಾದರೆ, ಒಟ್ಟಾರೆ ಅವರು ಮಾಂಸ ತಿನ್ನುವುದನ್ನೇ ಬಿಟ್ಟದ್ದು ತನ್ಮೂಲಕ ಸಸ್ಯಾಹಾರಿಗಳಾಗಿದ್ದು ಮತ್ತೊಂದು ಕ್ರಾಂತಿ". (ಅಂಬೇಡ್ಕರ್ ಬರಹಗಳು, ಇಂಗ್ಲಿಷ್ ಸಂ.7, ಪು.334). ಮತ್ತ ಸ್ಪಷ್ಟವಾಗುವುದೆಂದರೆ ಅಂಬೇಡ್ಕರರ ಮೇಲಿನ ಮಾತುಗಳು ಬ್ರಾಹ್ಮಣರು ಬರೇ ಮಾಂಸಾಹಾರಿಗಳಾಗಿರಲಿಲ್ಲ ಬದಲಿಗೆ ದನದ ಮಾಂಸವನ್ನು ಕೂಡ ಸೇವಿಸುತ್ತಿದ್ದರು ಎಂಬುದನ್ನು ಸಾರಿಹೇಳುತ್ತವೆ. ಅಂಬೇಡ್ಕರರು ಈ ಸಂಬಂಧ ಸಾಕ್ಷಿಗಳನ್ನು ಎಲ್ಲಿ ಹೆಕ್ಕಿದ್ದಾರೆ? ಬ್ರಾಹ್ಮಣರ ಶೃತಿ-ಸ್ಮೃತಿಗಳಿಂದ. ಐತ್ತೇರಿಯ ಬ್ರಾಹ್ಮಣ, ಶತಪಥ ಬ್ರಾಹ್ಮಣ, ಅಪಸ್ತಂಭ ಧರ್ಮಸೂತ್ರ, ಅಶ್ವಲಾಯನ ಗೃಹ್ಯ ಸೂತ್ರ, ವಾಜಸನೇಯಿ ಸಂಹಿತೆ, ಋಗ್ವೇದ-ಇವೇ ಅಂಬೇಡ್ಕರರು ಹೆಕ್ಕಿ ತೆಗೆಯಲು ಬಳಸಿಕೊಂಡಿರುವ ಆಧಾರ ಗ್ರಂಥಗಳು.

ಹಾಗಿದ್ದರೆ ಇಲ್ಲೆಲ್ಲಿ ದನ ಅಥವಾ ಹಸು ಪವಿತ್ರ ಎಂದು ಉಲ್ಲೇಖ ಆಗಿಲ್ಲವೆ? ಹೌದು. ಉಲ್ಲೇಖ ಇದೆ. ಅಂಬೇಡ್ಕರರು ಕೂಡ ಇದನ್ನು ಒಪ್ಪುತ್ತಾರೆ. ಅವರ ಮಾತನ್ನೇ ದಾಖಲಿಸುವುದಾದರೆ "ಋಗ್ವೇದದಲ್ಲಿ ಹಸುವಿಗೆ ನೀಡಿರುವ 'ಅಘ್ನ' ಎಂಬ ವಿಶೇಷಣದ ಅರ್ಥವೆಂದರೆ, ಹಸು ಅದು ಹಾಲು ಕೊಡುತ್ತದೆ ಆದ್ದರಿಂದ ಅದನ್ನು ಕೊಲ್ಲುವುದು ಯೋಗ್ಯವಲ್ಲ, ಹಾಗೆಯೇ ಋಗ್ವೇದದಲ್ಲಿ ಹಸುವನ್ನು ಪವಿತ್ರೀಕರಣಗೊಳಿಸಲಾಗಿದೆ ಎಂಬುದು ಕೂಡ ಒಟ್ಟಾರೆ ನಿಜ. ಆದರೆ ವಾಸ್ತವವೆಂದರೆ ಹಸುವನ್ನು ಹೀಗೆ ಪವಿತ್ರವೆಂದು, ಶ್ರೇಷ್ಠವೆಂದು ನೋಡಬೇಕು ಎಂಬುದು ಕೃಷಿಕ ಸಮುದಾಯವಾದ ಇಂಡೋ ಆರ್ಯರ ಒಂದು ಆಕಾಂಕ್ಷೆಯಾಗಿತ್ತು ಅಷ್ಟೆ. ಇಂತಹ ಆಕಾಂಕ್ಷೆಯ ಕಾರಣಕ್ಕಾಗಿ ಹಸುವಿಗೆ ಅಂಟಿಸಲಾದ ಅದರ ಈ ಉಪಯೋಗದ ಅನ್ವಯ ಆಹಾರದ ಉದ್ದೇಶಕ್ಕಾಗಿ ಅದನ್ನು ಕೊಲ್ಲಲಿಕ್ಕಾಗಿ ಆರ್ಯರಿಗೆ ಯಾವುದೇ ರೀತಿಯ ತಡೆಯನ್ನು ಒಡ್ಡಲಿಲ್ಲ. ನಿಜ ಹೇಳಬೇಕೆಂದರೆ ಹಸು ಪವಿತ್ರ ಎಂದು ಪರಿಗಣಿಸಲ್ಪಟ್ಟಿದ್ದ ಕಾರಣಕ್ಕಾಗಿಯೇ ಅದನ್ನು ಕೊಲ್ಲಲಾಗುತ್ತಿತ್ತು! ಈ ಸಂಬಂಧ ಧರ್ಮಶಾಸ್ತ್ರ ವಿಚಾರ ಎಂಬ ಮರಾಠಿ ಕೃತಿಯಲ್ಲಿ ಶ್ರೀ ಕೇನ್‌ರವರು ಹೇಳುವುದೇನೆಂದರೆ "ವೇದಗಳಲ್ಲಿ ಹಸುವನ್ನು ಪವಿತ್ರಗೊಳಿಸಲಾಗಿರಲಿಲ್ಲ ಎಂದಲ್ಲ, ನಿಜಹೇಳಬೇಕೆಂದರೆ ಅದರ ಪಾವಿತ್ರೀಕರಣದ ಕಾರಣಕ್ಕಾಗಿಯೇ ವಾಜಸನೇಯಿ ಸಂಹಿತೆ ಹಸುವನ್ನು ತಿನ್ನಲೇಬೇಕು ಎಂದು ಕಟ್ಟಾಜ್ಞೆ ವಿಧಿಸಿತ್ತು". ಇನ್ನು ಋಗ್ವೇದ ಕಾಲದ ಆರ್ಯರು ಆಹಾರದ ಉದ್ದೇಶಕ್ಕಾಗಿ ಹಸುವನ್ನು ಕೊಲ್ಲುತ್ತಿದ್ದರು ಮತ್ತು ತಿನ್ನುತ್ತಿದ್ದರು ಎಂಬುದನ್ನು ಋಗ್ವೇದವೇ ಧಾರಾಳವಾಗಿ ಸ್ಪಷ್ಟಪಡಿಸುತ್ತದೆ. ಋಗ್ವೇದದಲ್ಲಿ (ಹತ್ತನೇ ಅಧ್ಯಾಯ, ಶ್ಲೋಕ.86.14) ಇಂದ್ರ ಹೇಳುತ್ತಾನೆ "ಅವರು ಒಬ್ಬನಿಗಾಗಿ ಹದಿನೈದರಿಂದ ಇಪ್ಪತ್ತು ಎತ್ತುಗಳನ್ನು ಅಡುಗೆ ಮಾಡುತ್ತಿದ್ದರು". ಋಗ್ವೇದ (ಹತ್ತನೇ ಅಧ್ಯಾಯ, ಶ್ಲೋಕ.91.14) ಹೇಳುತ್ತದೆ "ಅಗ್ನಿಗೆ ಟಗರುಗಳು, ಗೂಳಿಗಳು, ಗೊಡ್ಡುದನಗಳು, ಎತ್ತುಗಳು ಮತ್ತು ಕುದುರೆಗಳನ್ನು ಬಲಿಕೊಡಲಾಗುತ್ತಿತ್ತು". ಹಾಗೆಯೇ ಋಗ್ವೇದದಲ್ಲಿ (ಹತ್ತನೇ ಅಧ್ಯಾಯ, ಶ್ಲೋಕ.72.6) ಕಾಣಸಿಗುವುದೆಂದರೆ ಹಸುವನ್ನು ಒಂದು ಖಡ್ಗ ಅಥವಾ ಮಚ್ಚಿನಿಂದ ಕೊಲ್ಲಲಾಗುತ್ತಿತ್ತು ಎಂಬುದು.

ಮುಂದುವರಿದು ಅಂಬೇಡ್ಕರರು ಬರೀ ಹಸುವನ್ನು ಕೊಲ್ಲುವುದಷ್ಟೇ ಅಲ್ಲ, ಯಾವ ಬಗೆಯ ಹಸುವನ್ನು ಕೊಲ್ಲಬೇಕು ಎಂಬುದನ್ನೂ ಶಾಸ್ತ್ರಗಳು ಸೂಚಿಸಿವೆ ಎಂಬುದನ್ನು ತಿಳಿಸುತ್ತಾ, "ತೈತ್ತೇರಿಯ ಬ್ರಾಹ್ಮಣದಲ್ಲಿ ಪಟ್ಟಿಮಾಡಲ್ಪಟ್ಟಿರುವ ಕಾಮ್ಯಾಷ್ಟಿಗಳು, ಹಸುಗಳು ಮತ್ತು ಎತ್ತುಗಳನ್ನು ಬಲಿಕೊಡುವುದನ್ನಷ್ಟೆ ಸೂಚಿಸುವುದಿಲ್ಲ ಬದಲಿಗೆ ಯಾವ ಯಾವ ದೇವತೆಗಳಿಗೆ ಯಾವ ಯಾವ ಬಗೆಯ ಹಸುಗಳು ಮತ್ತು ಎತ್ತುಗಳನ್ನು ಅರ್ಪಿಸಬೇಕು ಎಂಬುದನ್ನು ಸೂಚಿಸುತ್ತವೆ" ಎನ್ನುತ್ತಾರೆ. ಇದಕ್ಕೆ ಪೂರಕವಾಗಿ, ಉದಾಹರಣೆಗೆ ವಿಷ್ಣುವಿಗೆ ಬಲಿ ನೀಡಲು ಕುಳ್ಳಗಿ ಇರುವ ಒಂದು ಎತ್ತನ್ನು ಅರ್ಪಿಸಬೇಕು, ವೃತ್ತದ ವಿನಾಶಕ ಆಗಿರುವ ಇಂದ್ರನಿಗೆ ಸೊರಗಿದ ಕೊಂಬಿನ ಹಣೆಯಲ್ಲಿ ಜ್ವಾಲೆಯನ್ನು ಹೊಂದಿರುವ ಗೂಳಿಯನ್ನು ಅರ್ಪಿಸಬೇಕು. ಇನ್ನು ಪೂಷಣ ಎಂಬುವವನಿಗೆ ಒಂದು ಕಪ್ಪು ದನ, ರುದ್ರನಿಗೆ ಕೆಂಪು ದನ, ಹೀಗೆ... ಅಂದಹಾಗೆ ತೈತ್ತೇರಿಯ ಬ್ರಾಹ್ಮಣ ಹೇಳುವ ಮತ್ತೊಂದು ಬಲಿ 'ಪಂಚ ಸರದಿಯ ಸೇವ್' ಎಂಬುದು. ಇದರ ಮುಖ್ಯ ಅಂಶವೆಂದರೆ ಹದಿನೇಳು ಐದು ವರ್ಷದೊಳಗಿನ ಡುಬ್ಬಗಳಿಲ್ಲದ, ಕುಳ್ಳಗಿನ ಹೋರಿಗಳು ಮತ್ತು ಅಷ್ಟೇ ಸಂಖ್ಯೆಯ ಮೂರು ವರ್ಷದೊಳಗಿನ ಕುಳ್ಳಗಿನ ಕರುಗಳನ್ನು ಬಲಿಕೊಡಬೇಕು ಎಂಬುದು.

ಇನ್ನು ಅಪಸ್ತಂಭ ಧರ್ಮಸೂತ್ರದ ಶ್ಲೋಕಗಳು (14, 15, 29) ಹೇಳುವುದೆಂದರೆ "ಹಸು ಮತ್ತು ಗೂಳಿ ಪವಿತ್ರವಾದವುಗಳಾಗಿವೆ. ಆ ಕಾರಣದಿಂದ ಅವುಗಳನ್ನು ತಿನ್ನಬೇಕು". ಈ ಸಂದರ್ಭದಲ್ಲಿ ಗೃಹ್ಯಸೂತ್ರದಲ್ಲಿ ಕಂಡುಬರುವ 'ಮಧುಪರ್ಕ' ಎಂಬುವುದರ ವಿವರಣೆಯನ್ನು ಅಂಬೇಡ್ಕರರು ಕೊಡುತ್ತಾರೆ. ಆ ವಿವರಣೆಯಂತೆ, "ಆರ್ಯರಲ್ಲಿ ಪ್ರಮುಖ ಅತಿಥಿಗಳನ್ನು ಸ್ವೀಕರಿಸುವ ಒಂದು ಶಿಷ್ಟಾಚಾರ ರೂಢಿಯಲ್ಲಿತ್ತು, ಆ ಶಿಷ್ಟಾಚಾರ ನಂತರ ಒಂದು ಪದ್ಧತಿಯಾಗಿ ಪರಿವರ್ತನೆಯಾಯಿತು. ತದನಂತರ ಅದು ಒಂದು ಆಚರಣೆಯೂ ಆಯಿತು. ಈ ಆಚರಣೆಯ ಮುಖ್ಯ ಅಂಶವೆಂದರೆ ಮಧುಪರ್ಕದ ಅರ್ಪಣೆ. ಮಧುಪರ್ಕದ ಈ ಸಂಪೂರ್ಣ ವಿವರಣೆ ಅನೇಕ ಗೃಹ್ಯಸೂತ್ರಗಳಲ್ಲಿ ದಾಖಲಾಗಿದೆ. ಬಹುತೇಕ ಗೃಹ್ಯಸೂತ್ರಗಳ ಆಧಾರದ ಮೇಲೆ ಹೇಳುವುದಾದರೆ ಮಧುಪರ್ಕವನ್ನು ಸ್ವೀಕರಿಸುವ ಹಕ್ಕನ್ನು ಹೊಂದಿರುವ ಆರು ಜನರು ಕಾಣಸಿಗುತ್ತಾರೆ. ಅವರು ಯಾರ್‍ಯಾರೆಂದರೆ 1. ಋತ್ವಿಜ ಅಥವಾ ಬಲಿಯನ್ನು ನಡೆಸಲು ಕರೆಯಲ್ಪಡುವ ಬ್ರಾಹ್ಮಣ. 2. ಆಚಾರ್ಯ, ಅಂದರೆ ಗುರು. 3. ಮದುಮಗ. 4. ರಾಜ. 5. ಆಗತಾನೆ ಗುರುಕುಲದಲ್ಲಿ ತನ್ನ ವಿದ್ಯಾಭ್ಯಾಸ ಪೂರ್ಣಗೊಳಿಸಿ



ಮಾಂಸಾಹಾರ ನೆಪದಲ್ಲಿ ವೈದಿಕ ಕೀಳರಿಮೆ..!!?

ಮೊನ್ನೆ ಕನ್ನಡ ಚಾನೆಲ್ ಒಂದರಲ್ಲಿ ಬರುತ್ತಿದ್ದ ಮಕ್ಕಳ ಕಾರ್ಯಕ್ರಮ (?) ನೋಡುತ್ತಿದ್ದೆ. ಅದರಲ್ಲಿ ಒಂದು ಬಾಲಕಿ ಪ್ರತಿಭಾವಂತೆಯಾಗಿದ್ದರೂ ಸ್ಟೇಜಿನಲ್ಲಿ ತೀರಾ ತಬ್ಬಿಬ್ಬುಗೊಂಡಂತೆ ವರ್ತಿಸಿದ್ದಳು. ನಂತರ ತಿಳಿದುಬಂದದ್ದೆಂದರೆ ಆ ಮಗುವಿಗೆ ತನ್ನ ಮೈಬಣ್ಣದ ಬಗ್ಗೆ ತೀರಾ ಕೀಳರಿಮೆ ಇದ್ದಿತಂತೆ. ಪೋಷಕರಿಂದ ಈ ವಿಚಾರ ತಿಳಿದ ಕಾರ್ಯಕ್ರಮದ ತೀರ್ಪುಗಾರರು ಆಕೆಗೆ ನಂತರ ಧೈರ್ಯ ತುಂಬಿದರು. ಸಮಾಜದಲ್ಲಿ ನಿಕೃಷ್ಟವಾಗಿ ನೋಡಲ್ಪಡುವ ಕೀಳುಜಾತಿಯಲ್ಲಿ ಹುಟ್ಟುವ ಹಾಗು ಬಿಸಿಲಲ್ಲಿ ದುಡಿಯುವ ವರ್ಗದ ಬಹುತೇಕ ಕಪ್ಪಗಿನ ಮೈಬಣ್ಣದ ಮಂದಿ ಈ ಕಾರಣಕ್ಕಾಗಿ ಕೀಳರಿಮೆಯಿಂದ ಇದೇರೀತಿ ಒಳಗೊಳಗೇ ಕೊರಗುವುದಿದೆ. ಆದರೆ ಸಾಮಾಜಿಕವಾಗಿ ಗೌರವಾರ್ಹತೆಯನ್ನು ಹುಟ್ಟಿನಿಂದಲೇ ಪಡೆದುಕೊಂಡು ಬರುವ ಬ್ರಾಹ್ಮಣವರ್ಗ ಇನ್ನಿತರರಂತೆ ಈ ಬಗೆಯ ಕೀಳರಿಮೆಯಿಂದ ಬಳಲುವ ಸಂಭವ ತೀರಾ ಕಡಿಮೆ. ಆದರೂ ಇತ್ತೀಚಿಗಿನ ಘಟನೆಯೊಂದು ಬ್ರಾಹ್ಮಣರಿಗೂ ಸಾಮಾಜಿಕ ಕೀಳರಿಮೆಯಿದೆ ಎಂಬ ಅಚ್ಚರಿದಾಯಕ ಸಂಗತಿಯನ್ನು ಎತ್ತಿ ತೋರಿಸಿತ್ತು, ಅದೇ ಶಿವಮೊಗ್ಗದ ಶ್ರೀಕಂಠಪುರದಲ್ಲಿ ನಡೆದ ಸೋಮಯಾಗ ಮತ್ತು ನಂತರ ಘಟಿಸಿದ ಬೆಳವಣಿಗೆಗಳು.

ಮತ್ತೂರು ಸಮೀಪದ ಶ್ರೀಕಂಠಪುರದಲ್ಲಿ ನಡೆದ ಸೋಮಯಾಗದಲ್ಲಿ ಮೇಕೆಯನ್ನು ಬಲಿಕೊಡಲಾಗಿದೆ. ಅದರ ಕುರಿತಾಗಿ ಪ್ರತಿಕ್ರಿಯಿಸಲಾರೆ, ಇಲ್ಲ ಅದು ಬರೀ ಕಟ್ಟಿ ಹಾಕಿದ್ದಷ್ಟೆ, ಹಿಟ್ಟಿನಿಂದ ಮಾಡಿದ ಪ್ರಾಣಿಗಳನ್ನು ಬಲಿಗಾಗಿ [illegible], ಕುಡಿದದ್ದು ಸೋಮಲತೆಯ ರಸ [illegible] ಏನೇನೋ ಈ ಕುರಿತಾಗಿ ಆಯೋಜಕರಿಂದ [illegible] ಒಂದಷ್ಟು. ಎಲ್ಲದಕ್ಕೂ [illegible] ಕ್ರಿಯಿಸುವ ಪೇಜಾವರರಂತೂ "ಇದು ನಡೆದದ್ದು ಹೌದಾದಲ್ಲಿ ನಾನೂ ಖಂಡಿಸುತ್ತೇನೆ. ಸರಕಾರದ ಕಾನೂನುಕ್ರಮಕ್ಕೂ ಕೂಡ ನನ್ನ ಬೆಂಬಲವಿದೆ. ಅಲ್ಲದೇ ನಾನೂ ಸಹ ಆಡನ್ನು ಬಲಿಕೊಟ್ಟಂತಹ ಸೋಮಯಾಗ ನಡೆದಿದ್ದರ ಬಗ್ಗೆ ಹಿಂದೊಮ್ಮೆ ಕೇಳಿದ್ದೆ ಕೂಡ" ಎಂದು ಹೇಳಿಕೆ ನೀಡಿದರು. ಅಲ್ಲಾ ಬಲಿ ನಡೆದಿರಲಿ, ಮಾಂಸಾಹಾರ ಸೇವನೆಯೂ ನಡೆದಿರಲಿ ಕಾನೂನು ಶಿಕ್ಷೆ ಇತ್ಯಾದಿಗಳನ್ನು ಬದಿಗಿಟ್ಟು (ಕರಾವಳಿಯ ಭೂತಕೋಲಗಳಲ್ಲಿ ಹಂದಿಕೋಳಿಗಳ ಲೆಕ್ಕವಿಲ್ಲದಷ್ಟು ಬಲಿ ನಡೆಯುತ್ತಿರುತ್ತದೆ) ನೋಡಿದರೆ ಇದರಲ್ಲಿ ಅಂಜಿಕೆ ಪಡುವಂತಾದ್ದಾಗಲೀ ನಾಚುವಂತಾದ್ದಾಗಲಿ ಏನಿದೆ? ಹೌದಪ್ಪ ಆಡನ್ನು ಬಲಿ ಕೊಟ್ಟು ತಿಂದಿದ್ದೇವೆ ನಿಮ್ಮ ನಾಲಗೆಯಲ್ಲಿರುವ ರಸಾಂಕುರ (Taste buds)ಗಳು ನಮ್ಮಲ್ಲೂ ಅಷ್ಟೇ ಚೆನ್ನಾಗಿ ಇವೆ ಏನೀಗ? ಎಂದು ಪ್ರಾಮಾಣಿಕ ಪ್ರಶ್ನೆ ಎಸೆದು ಕೇಳುಗರ ಬಾಯ್ಮುಚ್ಚಿಸುವ ಧೈರ್ಯ ಯಾವ ವೈದಿಕರಲ್ಲೂ ಇಲ್ಲವೇ? ಎಂಥಾ ವಿಚಿತ್ರ!!

ವೈದಿಕರ ಧಾರ್ಮಿಕ ಗ್ರಂಥಗಳಲ್ಲಿ ಹಾಗು ಅವರ ಹಿರಿಯರುಗಳೇ ರಚಿಸಿದ್ದ ಧರ್ಮಶಾಸ್ತ್ರಗಳಲ್ಲಿ ಹಿಂದೆ ಬ್ರಾಹ್ಮಣರೂ ಮಾಂಸಾಹಾರಿಗಳಾಗಿದ್ದರು ಎಂದು ಅತ್ಯಂತ ಸ್ಪಷ್ಟವಾಗಿ ದಾಖಲಿಸಲಾಗಿದೆ. ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮೊತ್ತ ಮೊದಲ ಬಾರಿಗೆ ಜಾಗತಿಕವಾಗಿ ಹಿಂದೂಧರ್ಮದ ಕೀರ್ತಿಪತಾಕೆಯನ್ನು ಎತ್ತಿಹಿಡಿದಿದ್ದ ನೇರನುಡಿಯ ಸ್ವಾಮಿ ವಿವೇಕಾನಂದರೂ ಕೂಡ "ನಿಮಗೆ ಆಶ್ಚರ್ಯವಾಗಬಹುದು, ಪ್ರಾಚೀನ ಹಿಂದೂ ವಿಧಿ ಮತ್ತು ಆಚರಣೆಗಳ ಪ್ರಕಾರ ದನದ ಮಾಂಸ ಸೇವಿಸದಿದ್ದರೆ ಆತ 'ಒಳ್ಳೆಯ [illegible]' ಎಂದು ಅನ್ನಿಸಿಕೊಳ್ಳುತ್ತಿರಲಿಲ್ಲ, ಹಾಗೆಯೇ ಒಂದು [illegible] ಎತ್ತು ದನವನ್ನು ತಿನ್ನದೇ ಯಾವ ಬ್ರಾಹ್ಮಣನೂ ಬ್ರಾಹ್ಮಣನಾಗಿ ಉಳಿಯಲು ಸಾಧ್ಯವೇ ಇದ್ದಿರಲಿಲ್ಲ. ಸನ್ಯಾಸಿಗಳು, ರಾಜರು ಅಥವ ಯಾರಾದರೂ ಮಹಾಪುರುಷರು ಮನೆಗೆ ಬಂದಾಗ ಅತ್ಯುತ್ತಮವಾದ ಎತ್ತನ್ನು ಕಡಿದು ಅಡುಗೆಯನ್ನು ಮಾಡಿ ಬಡಿಸಲಾಗುತ್ತಿತ್ತು ಎಂದು ವೇದಗಳಲ್ಲೇ ಉಲ್ಲೇಖವಿದೆ" ಎಂದಿದ್ದರು. (ಸ್ವಾಮಿ ವಿವೇಕಾನಂದ ಸಮಗ್ರ ಕೃತಿಗಳು ಸಂಪುಟ 3, ಪುಟ 536.)

ಮನುಸ್ಮೃತಿ, ರಾಮಾಯಣ, ಮಹಾಭಾರತಗಳಲ್ಲೂ ಬ್ರಾಹ್ಮಣರ ಮಾಂಸಾಹಾರ ಸೇವನೆ ಹಾಗು ಸುರಾಪಾನಗಳ ಬಗ್ಗೆ ಲೆಕ್ಕವಿಲ್ಲದಷ್ಟು ಉಲ್ಲೇಖಗಳಿವೆ. (ಹಿರಿಯ ಚಿಂತಕ ಪೇರೂರು ಜಾರುರವರ ಪ್ರಕಾರ ವೈದಿಕರು ಪೂಜಿಸುತ್ತಿದ್ದ ದೇವತೆಗಳಿಗೆ 'ಸುರರು' ಎಂಬ ಹೆಸರು ಬರಲು ಅವರು ಯಥೇಚ್ಛವಾಗಿ ಬಳಸುತ್ತಿದ್ದ ಸುರೆಯೇ ಕಾರಣವಂತೆ. ಅದೇ ಕಾರಣಕ್ಕೆ ಅವರನ್ನು ತೃಪ್ತಿಪಡಿಸುವ ಯಜ್ಞಯಾಗಾದಿಗಳಲ್ಲಿ ಅವರಿಗೆ ಪ್ರಿಯವಾದ ಮಾಂಸಾಹಾರ ಮತ್ತು ಸುರೆಗಳ ಬಳಕೆಯಿದೆ ಎನ್ನುತ್ತಾರೆ.) ಪ್ರಸಿದ್ಧ ವಾತಾಪಿ-ಇಲ್ವಲರ ಕಥೆಯಲ್ಲಂತೂ ಇದನ್ನು ನೇರವಾಗಿಯೇ ಹೇಳಲ್ಪಟ್ಟಿದೆ. ವಾತಾಪಿ ಮತ್ತು ಇಲ್ವಲರು ಮಾಂಸದಾಸೆಗೆ ಹಪಹಪಿಸುವ ಬ್ರಾಹ್ಮಣರನ್ನು ಕರೆದು ಆಡಿನ ಮಾಂಸದ ಅಡುಗೆ ಮಾಡಿ ಬಡಿಸುತ್ತಿದ್ದನಂತೆ. ಅವರು ತಿಂದದ್ದು ವಾಸ್ತವವಾಗಿ ಆಡಾಗಿರದೇ ಇದೇ ವಾತಾಪಿಯ ಮಾಂಸವಾದ್ದರಿಂದ ಉಂಡ ಎಲ್ಲಾ ಬ್ರಾಹ್ಮಣರ ಹೊಟ್ಟೆ ಸೇರಿದ ಮಾಯಾವಿ ವಾತಾಪಿಯನ್ನು ಆತನ ಜೊತೆಗಾರ ಇಲ್ವಲನು ಪುನಃ ಕರೆದಾಗ ಎಲ್ಲರ ಹೊಟ್ಟೆ ಬೇಧಿಸಿ ಹೊರಬರುತ್ತಿದ್ದನಂತೆ. ಇದನ್ನು ತಿಳಿದ ಅಗಸ್ತ್ಯ ಕೊನೆಗೆ ತಾನೇ ಅವರ ಆತಿಥ್ಯವನ್ನು ಸ್ವೀಕರಿಸಿ ವಾತಾಪಿಯನ್ನು ಮಾಮೂಲಿನಂತೆ "ಉಂಡು"

ಮತ್ತೂರು ಬ್ರಾಹ್ಮಣರು ಒಪ್ಪಿಕೊಂಡ ಸತ್ಯ



ತಂದೂರಿ ಮಟನ್, ತಂದೂರಿ ಚಿಕನ್ ಈ ಹೆಸರು ಎಲ್ಲರೂ ಕೇಳಿರುವರು ಆದರೆ ಇದರ ಮೂಲ ಹೆಚ್ಚಿನವರಿಗೆ ಗೊತ್ತಿಲ್ಲ, ಮೂಲತಃ ತಂದೂರಿ ಐಡಿಯಾ ಹುಟ್ಟಿದ್ದೇ ವೈದಿಕರ ಯಜ್ಞದಿಂದ. ಪರ್ಶಿಯನ್ ಭಾಷೆಯಲ್ಲಿ ಅಗ್ನಿ ಪೂಜಕರಿಗೆ "ದಸ್ತೂರ್ ಅಥವಾ ತಂದೂರ್" ಎಂದು ಕರೆಯುತ್ತಾರಂತೆ! ಯಜ್ಞಯಾಗದಲ್ಲಿ ಮೇಕೆ ಬಲಿ ಕೊಟ್ಟು ಅದರ ಮಾಂಸ ಯಜ್ಞದ ಬೆಂಕಿಯಲ್ಲಿ ಹಿಡಿದು ಚೆನ್ನಾಗಿ ಹುರಿದು ಉಪ್ಪು ಖಾರ ಮಸಾಲೆ ತಿಕ್ಕಿ ಯಾಜ್ಞಿಕರು ತಿನ್ನುವುದನ್ನು ನೋಡಿಯೇ ಮೊಘಲರು ಅದಕ್ಕೆ "ತಂದೂರಿ" ಎಂದು ಕರೆದರು ಹಾಗೂ ಅದನ್ನು ಮುಸ್ಲಿಮ್ ಬಾಣಸಿಗರು ತಮ್ಮ ರಾಜರ ಅರಮನೆಯಲ್ಲಿ ಅನುಕರಿಸಿದರಂತೆ. ಮತ್ತೂರಿನಲ್ಲಿ ಸಂಕೇತಿ ಬ್ರಾಹ್ಮಣರು ಸಾಂಕೇತಿಕವಾಗಿ ಮಾತ್ರವಲ್ಲ ರುಚಿಗಾಗಿಯೂ ಸೋಮಯಾಗದಲ್ಲಿ ಮಾಂಸ ಮತ್ತು ಮದ್ಯ ಸೇವಿಸಿ ಜನರಲ್ಲಿ ಕುತೂಹಲ ಹುಟ್ಟು ಹಾಕಿದ ಮೇಲೆ ಹಲವು ಐತಿಹಾಸಿಕ ಸತ್ಯಗಳು ಹೊರಬರುತ್ತಿವೆ.

ಮೂಲದಲ್ಲಿ ಬ್ರಾಹ್ಮಣರ ಸಹಿತ ಎಲ್ಲಾ ಆರ್ಯರು ಪೂರ್ಣ ಮಾಂಸಾಹಾರಿಗಳಾಗಿದ್ದರು ಹಾಗೂ ನಂತರ ಜೈನಧರ್ಮ ಭಾರತೀಯ ಸಮಾಜದಲ್ಲಿ ಪ್ರಭಾವಿಯಾದ ಮೇಲೆ ಜೈನರನ್ನು ಅನುಕರಿಸಿ ಬ್ರಾಹ್ಮಣರು ಹಾಗೂ ವೈಶ್ಯರೂ ಮಾಂಸಾಹಾರ ತ್ಯಜಿಸಿ ಸಸ್ಯಾಹಾರಿಗಳಾದರು ಎಂಬುದು ಐತಿಹಾಸಿಕ ಸತ್ಯ.

ಇಡೀ ಜಗತ್ತಿನಲ್ಲಿ ಸಂಸ್ಕೃತವನ್ನು ಮಾತೃಭಾಷೆಯಾಗಿ ಮಾತನಾಡುವ ಏಕೈಕ ಊರೆಂದರೆ ಶಿವಮೊಗ್ಗ ಜಿಲ್ಲೆಯ ಮತ್ತೂರು ಗ್ರಾಮ. ಈಗ ಅದೇ ಸಂಸ್ಕೃತ ಗ್ರಾಮದ ಪಕ್ಕಾ ಬ್ರಾಹ್ಮಣರು ಮಾಂಸ ಸೇವಿಸಿ ಮದಿರೆ ಕುಡಿದರು ಎಂದರೆ ವೈದಿಕರು ಮಾಂಸಾಹಾರಿಗಳು ಎಂಬುದಕ್ಕೆ ವೇದ ಉಪನಿಷತ್ತುಗಳಲ್ಲಿ ಸಮರ್ಥನೆ ಇದ್ದೇ ಇದೆ ಎಂದು ನಾವು ಭಾವಿಸಬಹುದು. ಇನ್ನು ಸಂಘ ಪರಿವಾರದವರು ಈ ವಿಷಯದಲ್ಲಿ ಏನೇನು ಶಬ್ದಗಳ ಸರ್ಕಸ್ ನಡೆಸಿ ವ್ಯಾಖ್ಯೆಗಳ ಜಾಲ ಹೆಣೆದು ವಿಷಯವನ್ನು ತಿರುಚಿ ಮತ್ತೂರಿನ ಸಂಕೇತಿ ವೈದಿಕರು ಮಾಡಿದ್ದು ಅದಲ್ಲ ಇದು ಮಾಡಿದ್ದು ಎಂದು ಸಾಧಿಸುವುದು ಖಂಡಿತಾ. ಈಗಾಗಲೇ ಸಂಕೇತಿಗಳ ಮುಖಂಡ ತಾವು ಜೀವಂತ ಆಡು ಬಲಿ ಕೊಟ್ಟಿಲ್ಲ ಕೇವಲ ಸಾಂಕೇತಿಕವಾಗಿ ಒಂದು ಜೀವಂತ ಆಡನ್ನು ಅಲ್ಲಿ ಕಂಬಕ್ಕೆ ಕಟ್ಟಿ ಅದರ ಹಾಲನ್ನು ಯಜ್ಞಕ್ಕೆ ಅರ್ಪಿಸಿ ಯಜ್ಞದಲ್ಲಿ ಕೇವಲ ಹಿಟ್ಟಿನ ಆಡುಗಳ ಗೊಂಬೆಯನ್ನು ಮಾತ್ರ ಸುಟ್ಟಿದ್ದು ಎಂದು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಹಾಗಾದರೆ ಹಿಟ್ಟಿನ ಆಡನ್ನು ಬಲಿ ಕೊಡುವ ಪದ್ಧತಿ ಶುರುವಾಗಿದ್ದು ಯಾವಾಗಿನಿಂದ? ಅಂದರೆ ಹಿಂದಿನ ಕಾಲದಲ್ಲಿ ಇದ್ದ ನಿಜವಾದ ಆಡನ್ನು ಬಲಿ ಕೊಡುವ ಪದ್ಧತಿಯೇ ಮುಂದುವರಿದು ಹಿಟ್ಟಿನ ಪ್ರತಿಕೃತಿ ಬಲಿ ಕೊಡುವ ಪದ್ಧತಿಯಾಗಿ ಪರಿವರ್ತನೆಯಾಗಿದ್ದು ಎಂದು ಅರ್ಥ ಅಲ್ಲವೇ? ಈ ರೀತಿ ಹಿಂದಿನ ಕಾಲದಲ್ಲಿ ವೈದಿಕರ ಯಜ್ಞಯಾಗದಲ್ಲಿ ನಿಜವಾದ ಪ್ರಾಣಿಬಲಿ ನಡೆಯುತ್ತಿತ್ತು ಎಂದು ಮತ್ತೂರು ಬ್ರಾಹ್ಮಣರೇ ಈಗ ಪರೋಕ್ಷವಾಗಿ ಒಪ್ಪಿಕೊಂಡಂತಾಯಿತು.

ರಾಜ್ಯ ಸರಕಾರವು ಶಿವಮೊಗ್ಗದ ಜಿಲ್ಲಾಧಿಕಾರಿಗೆ ತನಿಖೆ ನಡೆಸಿ ವರದಿ ಕೊಡುವಂತೆ ಆದೇಶಿಸಿದೆ. ಅವರು ಈ ಕೆಲಸವನ್ನು ಒಬ್ಬ ಉಪತಹಸೀಲ್ದಾರರ ಹೆಗಲಿಗೆ ಜಾರಿಸಿದ್ದಾರೆ. ಇದೆಲ್ಲಾ ಜನರ ಕಣ್ಣೊರೆಸುವ ತಂತ್ರ ಅಷ್ಟೇ. ಯಾರು ಎಷ್ಟೇ ಪ್ರಯತ್ನ ಪಟ್ಟರೂ ಸತ್ಯ ಹೊರಬರಲಾರದು. ಕಾರಣ ಸ್ವತಃ ಗೃಹ ಮಂತ್ರಿ ಡಾ.ಪರಮೇಶ್ವರ್ ಇವರ ಆದೇಶದ ಮೇರೆಗೆ ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್ ತಿಪ್ಪೆ ಸಾರಿಸಿಯಾಗಿದೆ. ಎಷ್ಟೇ ಆದರೂ ಗೃಹಮಂತ್ರಿ ಪರಮೇಶ್ವರರು ವೈದಿಕ ಮನಸ್ಥಿತಿಯ ದಲಿತರು. ಪರಮೇಶ್ವರರು ಪಾಠಕ್ಕೆ ಒಮ್ಮೆಯಾದರೂ ಯಾವುದಾದರೂ ಬ್ರಾಹ್ಮಣ ಜ್ಯೋತಿಷಿಯ ಕಾಲು ಹಿಡಿದು ಸಲಹೆ ಕೇಳುತ್ತಿರುತ್ತಾರೆ ಹಾಗೂ ತಾನು ಬೌದ್ಧನಾಗಿಲ್ಲ ಈಗಲೂ ಹಿಂದೂ ಆಗಿಯೇ ಇದ್ದೇನೆ ಎಂದು ಆಗಾಗ ಹೇಳಿ ವೈದಿಕರನ್ನು ಹಾಗೂ ಕೇಸರಿ ಪಡೆಗಳನ್ನು ಖುಷಿಪಡಿಸುತ್ತಾ ಇರುತ್ತಾರೆ. ಈ ಮತ್ತೂರು ಸೋಮಯಾಗದ ಬಗ್ಗೆಯೂ ಅವರು ಈಗಾಗಲೇ ಅವರ ಫ್ಯಾಮಿಲಿ ಜ್ಯೋತಿಷಿ ಬ್ರಾಹ್ಮಣ ಚಂದ್ರಶೇಖರಸ್ವಾಮಿ ಉರ್ಫ್ ಘೋರಿ ಚಂಭಟ್ಟನ ಹತ್ತಿರ ಸಲಹೆ ಕೇಳಿದ್ದಾರೆ ಹಾಗೂ ಚಂಭಟ್ಟ ಹೇಳಿದಂತೆಯೇ ಶಿವಮೊಗ್ಗ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠರಿಗೆ ಮತ್ತೂರು ಸಂಕೇತಿಗಳಿಗೆ ಕ್ಲೀನ್‌ಚಿಟ್ ನೀಡಲು ಗೃಹಮಂತ್ರಿಗಳೇ ಆದೇಶ ನೀಡಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಮಂಗಳೂರಿನ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗರ ಹಂತಕ ಕೊಲೆಗಾರ ಬಿಜೆಪಿಯ ನರೇಶ ಶೆಣೈಯನ್ನು ಹಿಡಿಯದಂತೆ ಪೊಲೀಸರ ಮೇಲೆ ಒತ್ತಡ ಹೇರಿರುವವರು ಬಿಜೆಪಿಯವರಾಗಿರದೇ ಕಾಂಗ್ರೆಸ್ಸಿನವರೇ ಆಗಿರುವರು ಎಂಬುದು ಈಗಾಗಲೇ ವರದಿ ಆಗಿದೆ ತಾನೇ. ಒಟ್ಟಾರೆ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖ ಅಷ್ಟೇ.

- ಆರ್.ಬಿ.ಶೇಣವ, ಮಂಗಳೂರು

ಬಂದಿರುವ ಸ್ನಾತಕ. 6. ಆತಿಥ್ಯ ನೀಡುವವರಿಗೆ ಯಾರು ಪ್ರಿಯವಾಗಿರುತ್ತಾನೋ ಆತ. ಅಂದಹಾಗೆ ಈ ಆರು ಜನರಲ್ಲಿ ರಾಜ, ಋತ್ವಿಜ ಮತ್ತು ಆಚಾರ್ಯರನ್ನು ಹೊರತುಪಡಿಸಿ ಉಳಿದ ಮೂವರಿಗೆ (ಮದುಮಗ, ಸ್ನಾತಕ, ಅತಿಥಿ) ವರ್ಷಕ್ಕೆ ಒಮ್ಮೆ ಮಾತ್ರ ಮಧುಪರ್ಕ ನೀಡಲಾಗುತ್ತಿತ್ತು ಆದರೆ ರಾಜ, ಋತ್ವಿಜ ಮತ್ತು ಆಚಾರ್ಯರಿಗೆ ಅವರು ಯಾವಾಗ ಆಗಮಿಸಿದರೂ ಅವರಿಗೆ ಮಧುಪರ್ಕ ಅರ್ಪಿಸಲಾಗುತ್ತಿತ್ತು.

ಈ 'ಮಧುಪರ್ಕ'ದಲ್ಲಿ ಏನೇನಿರುತ್ತಿತ್ತು? ಮಾಧವ ಗೃಹಸೂತ್ರ (ಅಧ್ಯಾಯ 1, ಶ್ಲೋಕ 9.22) ಹೇಳುತ್ತದೆ "ವೇದದ ಆಜ್ಞೆಯಂತೆ ಮಾಂಸರಹಿತವಾಗಿ ಮಧುಪರ್ಕ ತಯಾರಿಸುವುದು ಸಲ್ಲದು" ಮತ್ತು ಆ ಗೃಹಸೂತ್ರ ಶಿಫಾರಸು ಮಾಡುವುದೇನೆಂದರೆ ಒಂದುವೇಳೆ ಹಸು ತಪ್ಪಿಸಿಕೊಂಡು ಹೋಗಿದ್ದರೆ ಆಗ ಆಡಿನ ಮಾಂಸ ಅಥವಾ ಪಾಯಸ (ಹಾಲಿನ ಜೊತೆ ಅಕ್ಕಿ ಬೇಯಿಸಿದ) ನೀಡಬೇಕು. ಇನ್ನು ಹಿರಣ್ಯ ಗೃಹಸೂತ್ರ ಹೇಳುತ್ತದೆ ಮಧುಪರ್ಕದಲ್ಲಿ ಬೇರೇ ಮಾಂಸವನ್ನು ಸಹ ನೀಡಬಹುದು. ಹಾಗೆಯೇ ಬೌದ್ಧಾಯನ ಗೃಹಸೂತ್ರ ಹೇಳುತ್ತದೆ ಒಂದು ವೇಳೆ ಹಸು ಹೊರಗಡೆ ಹೋಗಿದ್ದರೆ ಆಡು ಅಥವಾ ಟಗರಿನ ಮಾಂಸವನ್ನು ಅರ್ಪಿಸಬಹುದು. ಅದೂ ಇಲ್ಲ ಅಂದರೆ ಮಾಂಸರಹಿತವಾಗಿ ಮಧುಪರ್ಕ ಸಾಧ್ಯವೇ ಇಲ್ಲದಿರುವುದರಿಂದ ಜಿಂಕೆ ಇತ್ಯಾದಿ ಕಾಡುಪ್ರಾಣಿಗಳ ಮಾಂಸವನ್ನಾದರೂ ಅರ್ಪಿಸಬೇಕು. ಈ ಸಮಯದಲ್ಲಿ ಅಕಸ್ಮಾತ್ ಯಾರಿಗಾದರೂ ಮಾಂಸ ಅರ್ಪಿಸುವುದು ಸಾಧ್ಯವೇ ಇಲ್ಲ ಎಂದಾಗ ಧಾನ್ಯವನ್ನು ಬಡಿಸಬಹುದು. ಒಟ್ಟಾರೆ ಸ್ಪಷ್ಟ ಅದೇನೆಂದರೆ ಮಧುಪರ್ಕದ ಅತ್ಯಗತ್ಯ ಘಟಕ ಮಾಂಸ ಅದರಲ್ಲೂ ಹಸುವಿನ ಮಾಂಸ ಎಂಬುದು (ಸಂ.7, ಪು.326).

ಈ ಸಮಯದಲ್ಲಿ ಅತಿಥಿಗಾಗಿ ಹಸುವನ್ನು ಕೊಲ್ಲುವುದು ಅದೆಷ್ಟು ಮಟ್ಟಕ್ಕೆ ಬೆಳೆದಿತ್ತು? ಹೇಗೆಂದರೆ ಆಗಮಿಸುತ್ತಿದ್ದ ಅತಿಥಿಯನ್ನು 'ಗೋಘ್ನ' ಎನ್ನಲಾಗುತ್ತಿತ್ತು, ಅಂದರೆ ಹಸುವನ್ನು ಕೊಲ್ಲುವವ ಎಂದರ್ಥ! ಈ ನಿಟ್ಟಿನಲ್ಲಿ ಹಸುವಿನ ಈ ಯಥೇಚ್ಛ ಹತ್ಯೆಯನ್ನು ತಪ್ಪಿಸಲು ಅಶ್ವಲಾಯನ ಗೃಹಸೂತ್ರ ನೀಡಿದ್ದ ಒಂದು ಸಲಹೆ ಎಂದರೆ ಮನೆಗೆ ಅತಿಥಿ ಬಂದಾಗ ಶಿಷ್ಟಾಚಾರವನ್ನು ಉಲ್ಲಂಘಿಸಲು ಹಸುವನ್ನು ತಪ್ಪಿಸಿಕೊಳ್ಳುವಂತೆ ಮಾಡಬೇಕು ಎಂದು! ಇಲ್ಲಿ ಅಂಬೇಡ್ಕರರು ಅಪಸ್ತಂಭ ಗೃಹಸೂತ್ರದ ಸತ್ತ ವ್ಯಕ್ತಿಯ ಶವಸಂಸ್ಕಾರಕ್ಕೆ ಪ್ರಾಣಿಗಳನ್ನು ಬಲಿಕೊಟ್ಟು ಆ ಪ್ರಾಣಿಯ ವಿವಿಧ ಅಂಗಗಳನ್ನು ಆ ವ್ಯಕ್ತಿಯ ವಿವಿಧ ಅಂಗಗಳ ಮೇಲೆ ಇಡುವುದನ್ನು ಉಲ್ಲೇಖಿಸುತ್ತಾರೆ. ಈ ಪ್ರಕಾರ, ಉದಾಹರಣೆಗೆ ಸತ್ತ ವ್ಯಕ್ತಿಯ ಹೃದಯದ ಮೇಲೆ ಪ್ರಾಣಿಯ ಹೃದಯ ಇಡುವುದು, ಸತ್ತ ವ್ಯಕ್ತಿಯ ಕೈಗಳ ಮೇಲೆ ಪ್ರಾಣಿಗಳ ಕಿಡ್ನಿಗಳನ್ನು ಇಡುವುದು, ಹೀಗೆ... ಅಂದರೆ ಸತ್ತ ಆ ವ್ಯಕ್ತಿಯು ಸತ್ತ ಆ ಪ್ರಾಣಿಯ ಪ್ರಾಣ ಮತ್ತು ವಿವಿಧ ಅಂಗಗಳ ಮೂಲಕ ಮತ್ತೆ ಮರು ಹುಟ್ಟಲಿ ಎಂದು ಹೀಗೆ ಇಡಲಾಗುತ್ತಿತ್ತು. ಆ ನಂತರವಷ್ಟೆ ಅದನ್ನು ಸುಡಲಾಗುತ್ತಿತ್ತು! (ಸಂ.7, ಪು.327)

ಮುಂದುವರಿದು ಅಂಬೇಡ್ಕರರು ಹೇಳುವುದೇನೆಂದರೆ "ಅದೇ ಆಪಸ್ತಂಭ ಧರ್ಮಸೂತ್ರ ಮತ್ತು ಶತಪಥ ಬ್ರಾಹ್ಮಣಗಳಲ್ಲಿ ಹಸುವಿನ ಈ ಹತ್ಯೆಯ ವಿರುದ್ಧ ಎಚ್ಚರಿಕೆಯ ಸಂದೇಶಗಳನ್ನೂ ನೀಡಲಾಗಿದೆ. ಹೀಗೆ ನೀಡಲಾದ ಸಂದೇಶ ಹಸುವನ್ನು ಯಥೇಚ್ಛವಾಗಿ ಕೊಲ್ಲುವುದು ಮತ್ತು ಅದನ್ನು ಯಥೇಚ್ಛವಾಗಿ ತಿನ್ನುವುದರ ವಿರುದ್ಧ ನೀಡಲಾದ ಎಚ್ಚರಿಕೆಯೇ ಹೊರತು ಹಸುವನ್ನು ಕೊಲ್ಲುವುದರ ವಿರುದ್ಧದ ನಿಷೇಧವಲ್ಲ. ನಿಜ ಹೇಳಬೇಕೆಂದರೆ ಹೀಗೆ ನೀಡಲಾದ ಎಚ್ಚರಿಕೆ ಹಸುವನ್ನು ಕೊಲ್ಲುವುದು ಮತ್ತು ತಿನ್ನುವುದು ಅದೆಷ್ಟು ಸಾಮಾನ್ಯ ಅಭ್ಯಾಸವಾಗಿತ್ತು ಎಂಬುದನ್ನು ಸಾಧಿಸಿ ತೋರಿಸುತ್ತದೆ" ಎಂದು. ಈ ಸಂದರ್ಭದಲ್ಲಿ ಅಂಬೇಡ್ಕರರು ಶತಪಥ ಬ್ರಾಹ್ಮಣದಲ್ಲಿ ಬರುವ ಆರ್ಯರ ಶ್ರೇಷ್ಠ ಋಷಿಯಾದ ಯಾಜ್ಞವಲ್ಕ್ಯನ ಪ್ರಸಂಗವನ್ನು ದಾಖಲಿಸುತ್ತಾರೆ. ನಿಜ ಹೇಳಬೇಕೆಂದರೆ ಶತಪಥ ಬ್ರಾಹ್ಮಣದಲ್ಲಿ ಹಸುವಿನ ಹತ್ಯೆಯ ವಿರುದ್ಧ ನೀಡಲಾದ ಎಚ್ಚರಿಕೆ ಅದು ಋಷಿ ಯಾಜ್ಞವಲ್ಕ್ಯನಿಗೆ ನೀಡಿದ ಎಚ್ಚರಿಕೆಯಾಗಿತ್ತು! ಅಂದಹಾಗೆ ಇದಕ್ಕೆ ಯಾಜ್ಞವಲ್ಕ್ಯರು ನೀಡಿದ ಪ್ರತಿಕ್ರಿಯೆ? ಎಚ್ಚರಿಕೆಯನ್ನು ಸಾವಧಾನವಾಗಿ ಕೇಳಿದ ಯಾಜ್ಞವಲ್ಕ್ಯರು ಹೇಳಿದ್ದೇನೆಂದರೆ "ನನಗೋಸ್ಕರ ಒಂದನ್ನು ಕತ್ತರಿಸಿ. ಅದೂ ಎಳೆಗರುವಾಗಿದ್ದರೆ ಮಾತ್ರ ತಿನ್ನುತ್ತೇನೆ" ಎಂದು!

ಒಟ್ಟಾರೆ ಅಂಬೇಡ್ಕರರ ಇವಿಷ್ಟು ವಿವಿಧ ಧರ್ಮಸೂತ್ರಗಳ, ಬ್ರಾಹ್ಮಣಗಳ, ಋಗ್ವೇದದ ಆಧಾರದ ಬರಹಗಳ ಸಾರ ಬ್ರಾಹ್ಮಣರು ಆರ್ಯರ ಇತಿಹಾಸದ ಕಾಲದಲ್ಲಿ ಯಥೇಚ್ಛವಾಗಿ ಯಜ್ಞ-ಯಾಗ ಮತ್ತು ಶಿಷ್ಟಾಚಾರದ ಹೆಸರಿನಲ್ಲಿ ಮಾಂಸಾಹಾರ ಮಾಡುತ್ತಿದ್ದರು, ಅದರಲ್ಲೂ ಹಸುವಿನ ಮಾಂಸ ಸೇವಿಸುತ್ತಿದ್ದರು ಎಂಬುದು. ಹಾಗಿದ್ದರೆ ಅವರು ಏಕೆ ಮಾಂಸಾಹಾರ ತೊರೆದರು? ಎಂಬ ಪ್ರಶ್ನೆಯೂ ಇಲ್ಲಿ ಮೂಡುತ್ತದೆ. ಅಂಬೇಡ್ಕರರು ಅದಕ್ಕೂ ತಮ್ಮ ಆ ಕೃತಿಯ ಮುಂದಿನ ಅಧ್ಯಾಯಗಳಲ್ಲಿ ಉತ್ತರ ನೀಡುತ್ತಾರೆ. ಅಂಬೇಡ್ಕರರ ಬರಹಗಳ ಈ ಹಿನ್ನೆಲೆಯಲ್ಲಿ ಸದ್ಯ ಶಿವಮೊಗ್ಗದ ಮತ್ತೂರಿನಲ್ಲಿ ಸಂಕೇತಿಗಳು ನಡೆಸಿರುವ ಸೋಮಯಾಗದಲ್ಲಿ ಆಡುಗಳನ್ನು ಬಲಿಕೊಟ್ಟಿರುವುದು, ಸೋಮರಸ ಸೇವಿಸಿರುವುದನ್ನು ಉಲ್ಲೇಖಿಸುವುದಾದರೆ ಈಗ ನಡೆದಿರುವ ಈ ಆಚರಣೆ ಅದು ಸಂಪೂರ್ಣ ಋಗ್ವೇದ ಮತ್ತು ಧರ್ಮಸೂತ್ರಗಳ ಪ್ರಕಾರವೇ ನಡೆದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅಂದಹಾಗೆ ಮತ್ತೆ ಹೇಳುವುದಾದರೆ ಅಂಬೇಡ್ಕರರು ಇದನ್ನು ದಾಖಲಿಸಿರುವುದು ಯಾರಿಗೋ ಅಪಮಾನ ಮಾಡಬೇಕು, ಅಪಚಾರ ಎಸಗಬೇಕು ಎಂದಲ್ಲ, ಬದಲಿಗೆ ತನ್ನ ಸಮುದಾಯವಾದ ಅಸ್ಪೃಶ್ಯ ಸಮುದಾಯದ ಇತಿಹಾಸ ಹುಡುಕುತ್ತಾ 'ಸತ್ತ ಹಸುಗಳನ್ನು ತಿನ್ನುತ್ತಿದ್ದ ನನ್ನ ಜನ ಅಸ್ಪೃಶ್ಯರಾದದ್ದು ಹೇಗೆ? ಇತಿಹಾಸದಲ್ಲಿ ಇನ್ನಾರೂ ಹಸುಗಳನ್ನು ತಿಂದಿಲ್ಲವೆ? ತಿಂದಿದ್ದರೆ ಹಾಗೆ ಹಸುವಿನ ಮಾಂಸ ತಿನ್ನುವುದನ್ನು ಅವರು ಏಕೆ ಬಿಟ್ಟರು? ತನ್ನ ಜನರು ಏಕೆ ಬಿಡಲಿಲ್ಲ? ಆ ಕಾರಣಕ್ಕೆ ಅವರು ಹೇಗೆ ಅಸ್ಪೃಶ್ಯರಾಗುವಂತಾಯಿತು?' ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ಈ ಸಂಬಂಧ ವಿವಿಧ ಶಾಸ್ತ್ರ-ಪುರಾಣಗಳು, ಶೃತಿ-ಸ್ಮೃತಿಗಳನ್ನು ಅಂಬೇಡ್ಕರರು ಜಾಲಾಡಿದ್ದಾರೆ. ಹಾಗೆ ಜಾಲಾಡುತ್ತಲೇ ತನ್ನ ಸಮುದಾಯದ ಸಂಸ್ಕೃತಿ ಮತ್ತು ಇತಿಹಾಸವನ್ನು ಬೇರೆ ಸಮುದಾಯಗಳ ಸಂಸ್ಕೃತಿ ಮತ್ತು ಇತಿಹಾಸದೊಡನೆ ಹೋಲಿಸುತ್ತಾ ಹಾದಿಯಲ್ಲಿ ಅಂಬೇಡ್ಕರರು ಬ್ರಾಹ್ಮಣರ ಮಾಂಸಾಹಾರವನ್ನು ಕೂಡ ದಾಖಲಿಸಿದ್ದಾರಷ್ಟೆ. ಈ ನಿಟ್ಟಿನಲ್ಲಿ ಅಂಬೇಡ್ಕರರ ಇಂತಹ ಮನುನಿಷ್ಠ ಅಧ್ಯಯನಶೀಲತೆ, ದೂರದೃಷ್ಟಿ, ಗತವನ್ನು ದಾಖಲಿಸಿ ಭವಿಷ್ಯಕ್ಕೆ ಪೂರಕವಾಗಿ ವರ್ತಮಾನವನ್ನು ಕಟ್ಟುವಲ್ಲಿನ ಅವರ ವಿಚಾರ, ಈ ಸಂಬಂಧದ ಅವರ ಸಾಹಿತ್ಯ ವರ್ತಮಾನದ ನಮ್ಮ ಅನೇಕ ವಿಚಾರಗಳಿಗೆ ಖಂಡಿತ ದೀವಿಗೆಯಾಗುತ್ತದೆ. ಹಾಗೆಯೇ ಶಿವಮೊಗ್ಗದಲ್ಲಿ ನಡೆದಿರುವ ಬ್ರಾಹ್ಮಣರ ಮಾಂಸಾಹಾರ ಸೇವನೆಯನ್ನು ಪ್ರಸ್ತಾಪಿಸುವುದಾದರೆ ಅಕ್ಷರಶಃ ಈ ಘಟನೆ ಜಾತಿರಹಿತ ವ್ಯವಸ್ಥೆಗೆ ಅಡಿಗಲ್ಲಾಗುತ್ತದೆ. ಯಾಕೆಂದರೆ ಮುಂದೊಂದು ದಿನ ಎಲ್ಲರೂ ಆಹಾರದಲ್ಲಿ ಯಾವುದೇ ಭೇದಭಾವ ಮಾಡದೆ ಮಾಂಸಾಹಾರ ಸಸ್ಯಾಹಾರ ಎಂದು ತಾರತಮ್ಯ ಮಾಡದೆ ಎಲ್ಲವನ್ನೂ ಸೇವಿಸಿದರೆ? ಜಾತಿವ್ಯವಸ್ಥೆ ನಿಂತಿರುವ ಅಡಿಪಾಯ ಖಂಡಿತ ಕುಸಿಯುತ್ತದೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರರ ಬರಹಗಳ ಆಶಯ ಕೂಡ ಇದೇ ಆಗಿದೆ ಎಂಬುದನ್ನು ಕೂಡ ನಾವು ಅತ್ಯಗತ್ಯ ಅರಿಯಬೇಕಾದ ವಾಸ್ತವ.

■ ರಘೋತ್ತಮ ಹೊ.ಬ

'ವಾತಾಪಿ ಜೀರ್ಣೋಭವ' ಎಂದು ಹೊಟ್ಟೆಯಲ್ಲಿದ್ದ ವಾತಾಪಿಯನ್ನು ಕೊಂದ ಕಥೆ ಇದು. ಒಂದು ವೇಳೆ ಬ್ರಾಹ್ಮಣರು ಮತ್ತು ಅಗಸ್ತ್ಯನಂತಹ ಮಹಾಮುನಿಗಳು ಮಾಂಸಾಹಾರಿಗಳಲ್ಲದಿದ್ದರೆ ಇಂತಹ ಕಥೆಯೇ ಮಹಾಭಾರತದಂತಹ ಗ್ರಂಥಗಳಲ್ಲಿ ಇರುತ್ತಿತ್ತೇ? ಇವೆಲ್ಲ ಪೌರಾಣಿಕ ಸಾಕ್ಷ್ಯಾಧಾರಗಳಾದರೆ, ಪ್ರಸ್ತುತ ಈಗಿನ ನವ ಬ್ರಾಹ್ಮಣರ ಮೀನು-ಮಾಂಸಾಹಾರ ಸೇವನೆಯ ಹಾಗು ಸುರಾಪಾನದ ಓಲಾಟಗಳ ಬಗ್ಗೆ ಎಲ್ಲರಿಗೂ ಗೊತ್ತೇ ಇದೆ ಬಿಡಿ.

ಮಾಜಿ ಸಿಎಂ ಗುಂಡೂರಾವ್ ಅವರ ಕೋಳಿ ಲಿವರ್ ಕಥೆ ಬಹಳ ಪ್ರಸಿದ್ಧವಾದ ಕಥೆ. ತಾನು ಚಿಕನ್‌ಪ್ರಿಯ ಬ್ರಾಹ್ಮಣ ಎಂದು ಬಹಿರಂಗವಾಗೇ ಅವರು ಹೇಳಿಕೊಂಡಿದ್ದರು. ಕೋಳಿ ಫಾರಮ್ ವ್ಯವಹಾರ ಈಗಿನಂತಿರದೇ ಇನ್ನೂ ಶೈಶವಾವಸ್ಥೆಯಲ್ಲೇ ಇದ್ದಂತಹ ಕಾಲ ಅದು. ಗುಂಡೂರಾವ್ ಸಾಹೇಬರು ಕೋಳಿಪ್ರಿಯ ಎಂದು ಅವರಿಗಾಗಿ ಬಿಟ್ಟ ಕೋಳಿ ಸರಬರಾಜಿಗೆ ಒಪ್ಪಿದ್ದ ಮಹಾನುಭಾವ ನಂತರ ಅವರು ಕೋಳಿ ಲಿವರ್ ಪ್ರಿಯ ಎಂದು ತಿಳಿದು ಬೇಸ್ತು ಬಿದ್ದಿದ್ದರು. ಅಂದರೆ, ಅವರಿಗೆ ಅವರ ಸಹಚರರಿಗಾಗಿ ಒಂದೆರಡು ಕೆಜಿ ಕೋಳಿ ಲಿವರ್ ಬೇಕೆಂದರೂ ಎಷ್ಟು ಕೋಳಿಗಳನ್ನು ಧರ್ಮಕ್ಕೆ ಕೊಲ್ಲಬೇಕಿಲ್ಲ ಎಂಬುದೇ ಅವರ ಚಿಂತೆ. ಅನಂತ್‌ನಾಗ್, ಉಪೇಂದ್ರ, ರಮೇಶ್ ಭಟ್, ರಮೇಶ್ ಪಂಡಿತ್‌ರಂತಹ ಅನೇಕ ಬ್ರಾಹ್ಮಣ ನಟರು ನೇರವಾಗಿ ಮಾಂಸ ಸೇವಿಸುವುದನ್ನು ಚಲನಚಿತ್ರಗಳಲ್ಲಿ ತೋರಿಸಿದ್ದುಂಟು. ಅವರು ಇತರರಂತೆ ಹಿಂದೆ ಕುಡಿದರೆ ತಪ್ಪೇನಿದೆ? ಅದು ಅವರವರ ಇಷ್ಟ ತಾನೇ?


ಹಾಗಾದರೆ ಇಲ್ಲೇ ಇರೋದು ಸೂಕ್ಷ್ಮ. ವಾಸ್ತವವಾಗಿ ಮಾಂಸಾಹಾರ-ಸಸ್ಯಾಹಾರ ಒಂದು ಆಹಾರ ಪದ್ಧತಿಯೇ ವಿನಾ ಇದರಲ್ಲಿ ಅದು ಮೇಲು ಇದು ಕೀಳು ಎಂಬ ವಿಚಾರವೇ ಮೂಲತಃ ಅಪ್ರಸ್ತುತವಾದದ್ದು. ಆದರೆ ಕೆಲವರು ಈ ಆಹಾರ ಪದ್ಧತಿಯನ್ನೇ ಹೈಜಾಕ್ ಮಾಡಿ ಅದನ್ನು ಸಾತ್ವಿಕ-ತಾಮಸ ಎಂದೋ, ಇಲ್ಲಾ ಶುದ್ಧ-ಅಶುದ್ಧ ಎಂದೋ ವಿಭಾಗೀಕರಣ ಮಾಡಿರುವುದೇ ಇವೆಲ್ಲಾ ರಂಪಾಟಕ್ಕೇ ಮೂಲಕಾರಣ. ಆಹಾರಕ್ಕೂ ಸಾತ್ವಿಕತೆ ತಾಮಸಿಕತೆಗೂ ಸಂಬಂಧವೇ ಇಲ್ಲ. ಭಗವಾನ್ ಬುದ್ಧ, ಮದರ್ ತೆರೇಸಾರಂತವರು ಮಾಂಸಾಹಾರಿಗಳಾಗಿದ್ದರೆ, ಕ್ರೂರಿ ಹಿಟ್ಲರ್ ಶುದ್ಧ ಸಸ್ಯಾಹಾರಿಯಾಗಿದ್ದಾತ. ಹೀಗಿದ್ದಲ್ಲಿ ಈ ಸಾತ್ವಿಕ ತಾಮಸಿಕ ಲಿಂಕ್ ಎಲ್ಲಿ ಹೋಯಿತು? ಇನ್ನು ಶುದ್ಧ ಅಶುದ್ಧತೆಯನ್ನು ಬೇಡರ ಕಣ್ಣಪ್ಪ ಕಾಲಿನಿಂದ ಒಗೆದು ಬಿಸಾಕಿದ ಕಥೆ ಗೊತ್ತೇ ಇದೆ. ಬೆಂಗಾಲಿ, ಕಾಶ್ಮೀರಿ ಬ್ರಾಹ್ಮಣರು ಆವಾಗಿನಿಂದ ಇವತ್ತಿನವರೆಗೂ ಮಾಂಸಾಹಾರಿಗಳೇ. ಜಾತಿಯ ಹೆಸರಲ್ಲಿ ಪ್ರತ್ಯೇಕತೆ ಕಾಯ್ದುಕೊಳ್ಳಬಯಸುವ ಸಂಪ್ರದಾಯಸ್ಥ ಮಂದಿಗೆ ತಮ್ಮ ಶುದ್ಧತೆಯ ಪ್ರತ್ಯೇಕತೆಯನ್ನು ಎತ್ತಿ ತೋರಿಸಲು ಈ ಮಾಂಸಾಹಾರವನ್ನು ಅಶುದ್ಧ ಅಸ್ಪೃಶ್ಯ ಎಂಬ ಸಾಲಿನಲ್ಲಿಟ್ಟು ನೋಡುವಂತಹ ಪ್ರಮೇಯವನ್ನು ಹುಟ್ಟುಹಾಕುವಂತಹ ಅನಿವಾರ್ಯತೆ ಇದ್ದಿತ್ತೇ ವಿನಃ ಇದು ಸಹಜ ಬೆಳವಣಿಗೆ ಅಲ್ಲವೇ ಅಲ್ಲ. ಸರಕಾರ ಶಾಲಾಮಕ್ಕಳಿಗೆ ಪೌಷ್ಠಿಕ ಆಹಾರವಾದ ಮೊಟ್ಟೆ ಕೊಡುವಾಗ ಹುಟ್ಟಿದ ವಿವಾದ, ಉಡುಪಿಯಲ್ಲಿ ಪಂಕ್ತಿಭೇದವನ್ನು ಸಮರ್ಥಿಸುತ್ತಾ ದಲಿತ ಕೇರಿಯಲ್ಲಿ ಪ್ರವಾಸ ಮಾಡಿದ ದಿ ಗ್ರೇಟ್ ಪೇಜಾವರರು ಅನ್ಯ ಜಾತಿಯವರು ಮಾಂಸಾಹಾರಿಗಳು ಹಾಗಾಗಿ ಅವರೊಂದಿಗೆ ಕುಳಿತು ಊಟಮಾಡಲು ಸಂಪ್ರದಾಯದ ಸಮಸ್ಯೆ ಇರುವ ಕಾರಣದಿಂದ ಪಂಕ್ತಿಭೇದವನ್ನು ತಳ್ಳಿಹಾಕಲಾಗದು ಎಂದಿರುವುದೆಲ್ಲ ಇಂತಹ ಹುಸಿ ಮಡಿವಂತಿಕೆಯ ಹಿನ್ನೆಲೆಯಿಂದಲೇ ತಾನೇ? ನಿಜಹೇಳಬೇಕೆಂದರೆ, ಇದು ಬ್ರಾಹ್ಮಣರ ಕೀಳರಿಮೆಯೇನೂ ಅಲ್ಲ, ಅವರ ಹುಸಿ ಶ್ರೇಷ್ಠತೆ ಎಂಬ ಸಾರ್ವತ್ರಿಕ ಮೇಲರಿಮೆಯ ಬೈ ಪ್ರಾಡಕ್ಟ್ ಇದು ಅಷ್ಟೆ.


ಯಾವುದೇ ಧರ್ಮ ಭಾಷೆ ಇತ್ಯಾದಿಗಳು ಪ್ರಭುತ್ವದ ಹಿನ್ನೆಲೆ ಇದ್ದಲ್ಲಿ ಗಟ್ಟಿಗೊಳ್ಳುತ್ತವೆ. ಈ ದೇಶವನ್ನು ವೈದಿಕರ ಹಿಡಿತದಿಂದ ತಪ್ಪಿಸಿ ಬೌದ್ಧ ಜೈನ ಧರ್ಮಗಳು ವಿಸ್ತಾರವಾಗಿ ಆಳಿದಂತಹ ಕಾಲವಿತ್ತು. ಅದು ಮೌರ್ಯರ, ಅಶೋಕನಂತಹ ಚಕ್ರವರ್ತಿಗಳ ಕಾಲದಲ್ಲಿ, ತಮ್ಮ ವೈದಿಕ ಧರ್ಮಕ್ಕೆ ರಾಜಾಶ್ರಯ ತಪ್ಪಿ ಕಳೆಗುಂದುತ್ತಿದ್ದ ಸಂದರ್ಭದಲ್ಲಿ ಅಂದಿನ ಸನಾತನವಾದಿಗಳು ಬೌದ್ಧ ಜೈನ ಧರ್ಮದ ಅಹಿಂಸೆಗೂ ಮಿಗಿಲಾಗಿ ಮಾಂಸಾಹಾರವನ್ನೇ ತ್ಯಜಿಸಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಂದರ್ಭ ಒದಗಿಬಂದಂತಹ ಪರಿಣಾಮವೇ ಯಜ್ಞ ಯಾಗಾದಿಗಳಲ್ಲಿ ರಾಜಾರೋಷವಾಗಿ ನಡೆಯುತ್ತಿದ್ದ ಪ್ರಾಣಿಬಲಿ (ಕೆಲವೊಮ್ಮೆ ನರಬಲಿಯೂ ಕೂಡ) ಹಾಗು ವೈದಿಕರ ಆಹಾರಕ್ರಮದಲ್ಲಿನ ಬದಲಾವಣೆ ನಡೆದಿತ್ತು ಎಂಬುವುದು ಐತಿಹಾಸಿಕ ಸತ್ಯ. ಅದನ್ನು ಬಿಟ್ಟು ಮಾಂಸಾಹಾರದ ವಿರುದ್ಧವಾಗಲೀ ಗೋಹತ್ಯೆಯ ವಿರುದ್ಧವಾಗಲೀ ಮಾತನ್ನಾಡುವ ಯಾವ ಅರ್ಹತೆಯೂ ಇವರುಗಳಿಗೆ ಖಂಡಿತವಾಗಿಯೂ ಇಲ್ಲ (ಎಂಬತ್ತು ವರ್ಷಗಳ ಹಿಂದೆ ನಮ್ಮ ಗೋಸೇವಕ ರಾಘವೇಶ್ವರ ಸ್ವಾಮಿಯವರೂ (ಶ್ರೀಕಂಠಪುರದಂತಹುದೇ ಯಾಗ ಮಾಡಿ ಯಜ್ಞಕುಂಡಕ್ಕೆ ಹಾಕಿದ ಎಳೆಗರುವಿನ ವಪೆಯನ್ನು ಎಲ್ಲರೊಂದಿಗೆ ಪ್ರಸಾದವಾಗಿ ಸೇವಿಸಿದ್ದು ಸುದ್ದಿಯಾಗಿತ್ತು.) ಯಜ್ಞ ಯಾಗಾದಿಗಳಲ್ಲಿ ಪಶುಗಳನ್ನು ಬಲಿಕೊಡುವುದಕ್ಕೆ ಹಾಗು ಕೊಟ್ಟಿರುವುದಕ್ಕೆ ವೈದಿಕ ಗ್ರಂಥಗಳಲ್ಲೇ ಬೇಕಷ್ಟು ಸಾಕ್ಷ್ಯಾಧಾರಗಳಿವೆ. ಶ್ರೀಕಂಠಪುರದಲ್ಲಿ ಏನೇ ನಡೆದಿರಲಿ ಮಾಂಸಾಹಾರದ ಕುರಿತಾಗಿ ವೈದಿಕರು ಪೊಳ್ಳು ಸಮರ್ಥನೆಗಳಿಯುವ ಬದಲಿಗೆ ಆತ್ಮವಿಮರ್ಶೆಗಿಳಿಯುವುದೇ ಹೆಚ್ಚು ಉತ್ತಮ.

- ಅವಿನಾಶ್ ಎಮ್.ಎಸ್, ನೆಲ್ಲಿಕಾರ್
(ಇ-ಜೀ ಕನ್ನಡ- ಡ್ರಾಮಾ ಜೂನಿಯರ್)

ಬ್ರಾಹ್ಮಣ ವಾದದ ಮೇಲೆ ಯುದ್ಧ ಘೋಷಣೆ ಭಾಗ-

ಬ್ರಾಹ್ಮಣ್ಯದ ವಿರುದ್ಧ ಪೆರಿಯಾಳ್ ಈ.ವಿ. ರಾಮಸ್ವಾಮಿ ಅವರು 1973 ರಲ್ಲಿ ಮಾಡಿದ ಕೊನೆಯ ಭಾಷಣದ ಎರಡನೇ ಭಾಗ ಇಲ್ಲಿದೆ.





ನಮ್ಮ ಮುಂದಿನ ಗುರಿ ಕಾಂಗ್ರೆಸ್. ಅದನ್ನು ಅಳಿಸಿ ಹಾಕಬೇಕು. ಈಗಾಗಲೇ ಅದರ ಒಂದು ಕಾದ ಗುದ್ದದಲ್ಲಿದೆ. ಅದು ಬಹಳ ಕಾಲ ಉಳಿಯುತ್ತದೆಂಬ ಭರವಸೆ ಇಲ್ಲ. ಈಗ ಅದು ಎರಡು ಬಣಗಳಾಗಿ ಒಡೆದುಹೋಗಿದೆ. ಕುರೂಪ ಸಂಗತಿಗಳು ನಡೆಯಲು ಅವರು ಅವಕಾಶ ಕೊಟ್ಟಿದ್ದಾರೆ. ಅದರ ಒಗ್ಗಟ್ಟು ಮರುಸ್ಥಾಪನೆ ಆದರೆ ಏನಾಗುತ್ತದೆ? ಇವತ್ತೇನಾದರೂ ಮೆಚ್ಚುವಂಥ ನೀತಿ ಕಾಂಗ್ರೆಸ್‌ನಲ್ಲಿ ಇದೆಯೇ? ಮಾನಮರ್ಯಾದೆ ಇಲ್ಲದವರನ್ನು ಬಿಟ್ಟರೆ ಇನ್ಯಾರು ಅದರ ಬೆಂಬಲಕ್ಕೆ ನಿಲ್ಲುತ್ತಾರೆ?

ಜಾತಿವ್ಯವಸ್ಥೆ ನಿರ್ನಾಮವಾಗಬೇಕು ಎಂದು ಬಾಯಿಬಿಟ್ಟು ಧೈರ್ಯವಾಗಿ ಹೇಳಲು ಈಗ ಕಾಮರಾಜ್ ಅವರಿಗೆ ಸಾಧ್ಯವೇ? ಇಂದಿನ ಕಾಂಗ್ರೆಸ್‌ನ ಒಂದೇ ಒಂದು ಕರ್ತವ್ಯ ಎಂದರೆ ಜಾತಿಪದ್ಧತಿಯನ್ನು ಸಂರಕ್ಷಿಸುವುದಾಗಿದೆ. ಸ್ವರಕ್ಷಣೆಗಾಗಿ ಹಾರುವರು ಜಾತಿಪದ್ಧತಿಯನ್ನು ಹುಟ್ಟು ಹಾಕಿದರು. ಕಾಂಗ್ರೆಸ್‌ನಲ್ಲಿ ಇರುವುದೆಂದರೆ ಹಾರುವರ ಆದೇಶಗಳನ್ನು ಒಪ್ಪಿಕೊಂಡು ಅವರಿಗೆ ಅಧೀನವಾಗಿರುವುದು ಎಂದು ಅರ್ಥ. ಸ್ವಲ್ಪ ಕಾಲದವರೆಗೆ ಕಾಮರಾಜ್ ನಮ್ಮ ಜೊತೆ ಇದ್ದರು. ಆದ್ದರಿಂದ ಅವರಿಗೆ ಸ್ವಲ್ಪ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಯಿತು.

ಜಾತಿಪದ್ಧತಿಯನ್ನು ನಾಶ ಮಾಡಲು ಭಕ್ತವತ್ಸಲಂ ಮುಂದೆ ಬರುತ್ತಾರೆಂದು ನೀವು ಭಾವಿಸಿದ್ದೀರಾ? ಸುಬ್ರಹ್ಮಣ್ಯಂ ಅವರನ್ನೇ ತೆಗೆದುಕೊಳ್ಳಿ. ಜಾತಿಪದ್ಧತಿಯನ್ನು ಅವರು ಖಂಡಿಸುತ್ತಾರೆಂದು ನೀವು ನಿರೀಕ್ಷಿಸುತ್ತೀರಾ? ಜಾತಿವ್ಯವಸ್ಥೆಯ ವಿರುದ್ಧ ಅವರೇನಾದರೂ ಧೈರ್ಯವಾಗಿ ಬಂದು ಮಾತಾಡಿದರೆ ಏನಾಗುತ್ತದೆಂದು ನಮಗೆ ಗೊತ್ತು. ಕಾಂಗ್ರೆಸ್‌ನಲ್ಲಿ ಕೋಲಾಹಲ ಉಂಟಾಗುತ್ತದೆ. ಕಾಂಗ್ರೆಸ್‌ನಲ್ಲಿ ಅವರು ಒಂದು ಗಳಿಗೆಯೂ ಇರಲು ಸಾಧ್ಯವಾಗುವುದಿಲ್ಲ. ಜಾತಿಗಳನ್ನು ಉಳಿಸಲು ಹಾರುವರು ಆಗಲೇ ಗುಟ್ಟಾಗಿ ಯೋಜನೆಗಳನ್ನು ರೂಪಿಸಿದ್ದಾರೆ. ಅಂಥ ಜನವಿರೋಧಿ ನೀತಿ ಇರುವ ಕಾಂಗ್ರೆಸ್ ಜನರಿಗೆ ಒಳ್ಳೆಯದು ಮಾಡುತ್ತದೆಂದು ನೀವು ಅಂದುಕೊಂಡಿದ್ದೀರಾ? ಕಾಂಗ್ರೆಸ್‌ನ ತತ್ವಗಳು ಹಳೆಯ ಕಾಲದವು. ಅವು ರೂಢಿಯಲ್ಲಿ ಇಲ್ಲ. ಅವು ಹಳಸಿಹೋಗಿವೆ. ಕಾಂಗ್ರೆಸ್ ಬದುಕುವ ಸಾಧ್ಯತೆಯೇ ಇಲ್ಲ. ಒಂದುಪಕ್ಷ ಡಿಎಂಕೆ ಪಕ್ಷ ಕರಗಿಹೋದರೂ ಸ್ವಾಭಿಮಾನ ಚಳವಳಿಯ ತತ್ವಗಳಿಗೆ ಬದ್ಧರಾದ ಜನರು ಡಿಎಂಕೆ ಪಕ್ಷದಲ್ಲಿದ್ದಾರೆ. ಅವರು ನಮ್ಮ ಜೊತೆ ಬಂದು ಚಳವಳಿಯನ್ನು ಬಲಗೊಳಿಸುತ್ತಾರೆ. ಆದರೆ ಎಂ.ಕೆ.ಗಾಂಧಿ ಮತ್ತು ಕಾಂಗ್ರೆಸ್ ವಿಷಯವಾಗಿ ಹೇಳುವುದಾದರೆ, ಇವೆರಡೂ ಸತ್ತುಹೋಗಿವೆ.

ದೇವರು ನಗೆಪಾಟಲು ವಸ್ತುವಾಗಿದೆ. ದೇವರಲ್ಲಿನ ತಮ್ಮ ನಂಬಿಕೆಯನ್ನು ಬಿಟ್ಟುಬಿಡಲು ಜನರು ಶುರುಮಾಡಿದ್ದಾರೆ. ಒಡನಾಡಿ ವೀರಮಣಿ ಇಂದು ನಮಗೆ ದೇವರ ಬಗ್ಗೆ ಹೇಳಿದ್ದಾರೆ. ದೇವರುಗಳಿಗೆ ಚಪ್ಪಲಿಗಳಿಂದ ಹೊಡೆಯಲಾಗಿದೆ. ಏನಾದರೂ ಅನಾಹುತ ಆಗಿದೆಯೇ? ಕಾಮರಾಜ್‌ರವರು ಸೇರಿದಂತೆ ಅನೇಕರು ದೇವರಿಗೆ ಯಕ್ಕಡದಲ್ಲಿ ಹೊಡೆದವರಿಗೆ ಜನರು ಓಟು ಕೊಡುವುದಿಲ್ಲ ಎಂದು ಹೇಳಿದ್ದರು. ಏನಾಯಿತು ಅಂತ ನಿಮಗೆ ಗೊತ್ತು. ಶಾಸನಸಭೆಗೆ ನಡೆದ ಚುನಾವಣೆಯಲ್ಲಿ ಡಿಎಂಕೆ ಪಕ್ಷಕ್ಕೆ 184 ಸ್ಥಾನಗಳು ಬಂದವು. ಕಾಮರಾಜ್, ಕಾಂಗ್ರೆಸ್ ಮತ್ತು ದೇವರು ಸೇರಿಕೊಂಡು 20 ಸ್ಥಾನಗಳನ್ನು ಗಳಿಸಿದರು. ನಾವು ಅಧಾರ್ಮಿಕ ನೀತಿಯನ್ನು ಅನುಸರಿಸುತ್ತಿದ್ದೇವೆಂದು ನಮ್ಮನ್ನು ನಿಂದಿಸಲಾಯಿತು. ನಮ್ಮನ್ನು ದೈವನಿಂದಕರೆಂದು ಬಹಿರಂಗಪಡಿಸಿದರು. ಆದರೂ ತಮಿಳುನಾಡಿನ ಒಟ್ಟು 235 ಸ್ಥಾನಗಳಲ್ಲಿ 200 ಸ್ಥಾನಗಳನ್ನು ಯಾರು ಚಪ್ಪಲಿಗಳಿಂದ ದೇವರುಗಳನ್ನು ಹೊಡೆದಿದ್ದರೋ ಅವರೇ ಗೆದ್ದುಕೊಂಡರು.

ಹಾಗಾಗಿ ಈ ಕಾಲದಲ್ಲಿ ಜನರನ್ನು ಸುಲಭವಾಗಿ ದಾರಿ ತಪ್ಪಿಸಲು ಆಗದು. ಅವರು ಸ್ವತಂತ್ರವಾಗಿ ಯೋಚನೆ ಮಾಡಬಲ್ಲರು. ಆ ಕಾರಣಕ್ಕಾಗಿಯೇ ನಾವು ದೇವರು ಮತ್ತು ಮತದ ಬಗ್ಗೆ ಅನೇಕ ವಿಷಯಗಳನ್ನು ಹೇಳುತ್ತೇವೆ. ನಾವು ಹೇಳುವ ವಿಷಯಗಳು ಅನೇಕರಿಗೆ ಚೆನ್ನಾಗಿ ತಿಳಿದಿಲ್ಲ. ಜನರು ಪ್ರಗತಿ ಹೊಂದಬೇಕೆಂಬುದೇ ನಮ್ಮ ಆಸೆ. ನಾವು ತುಳಿತಕ್ಕೆ ಒಳಗಾದವರ ಜೊತೆ ಇದ್ದೇವೆ. ಜೀವನದ ಎಲ್ಲಾ ರಂಗಗಳಲ್ಲಿ ನಾವು ಕ್ರಮೇಣ ಎದ್ದು ನಿಲ್ಲಬೇಕು. ಜಾತಿ ವಿಷಯಕ್ಕೆ ಸಂಬಂಧಿಸಿದಂತೆ ನಾವು ಅತ್ಯಂತ ಕೆಳಹಂತದಲ್ಲಿದ್ದೇವೆ, ನಾವು ಅಸ್ಪೃಶ್ಯರು, ನಮ್ಮನ್ನು ಸೂಳೆಯ ಮಕ್ಕಳು ಎಂದು ಪರಿಗಣಿಸಲಾಗಿದೆ. ಮೊದಲು ಇದು ಬದಲಾಗಬೇಕು. ಇದನ್ನು ಬದಲಿಸಿದ ಮೇಲೆ ನಾವು ಜೀವನದಲ್ಲಿ ಮೇಲಕ್ಕೆ ಬರಬೇಕು. ಇದನ್ನು ನಾನು ಹೇಳುವುದೇಕೆಂದರೆ ನಮ್ಮ ಶೂದ್ರ ಅಂತಸ್ತು ನಾಶವಾಗದ ಹೊರತು ನಮ್ಮ ಸಮಾಜದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.

ಈ ದಿಸೆಯಲ್ಲಿ ನಾವು ನಮ್ಮ ಕೈಲಾದುದನ್ನೆಲ್ಲ ಮಾಡುತ್ತಿದ್ದೇವೆ. ಈಗಿನ ಸ್ಥಿತಿಯಲ್ಲಿ ಈ ಧ್ಯೇಯಕ್ಕೆ ನಿಷ್ಠರಾಗಿರುವ ಬೇರೆ ಯಾರೂ ಕಾಣುವುದಿಲ್ಲ. ಶೂದ್ರ ಸ್ಥಾನಮಾನವನ್ನು ಅಂತ್ಯಗೊಳಿಸಲು ಆಸಕ್ತವಾಗಿರುವ ಯಾವುದೇ ರಾಜಕೀಯ ಪಕ್ಷ ಕಾಣಿಸುವುದಿಲ್ಲ. ಓಟುಗಳನ್ನು ಕಳೆದುಕೊಳ್ಳುತ್ತೇವೆಂಬ ಭಯ ಅವರಿಗಿದೆ. ಆ ಕಾರಣದಿಂದಲೇ ನಾವು ಬಹಳ ಕಷ್ಟಪಡುತ್ತಿದ್ದೇವೆ. ಜಾತಿಪದ್ಧತಿಯ ನಿರ್ಮೂಲನೆಗಾಗಿಯೇ ನಾವು ಪ್ರತ್ಯೇಕ ಸಮ್ಮೇಳನ ನಡೆಸಿದೆವು.

ಭಾರತದ ಸಮಾಜದಲ್ಲಿ ಅಸ್ಪೃಶ್ಯತೆ ಇರುವುದು ಅಪರಾಧ ಎಂದು ಆಳುವವರು ಸುಮ್ಮನೆ ಕಾನೂನು ಮಾಡಿದ್ದಾರೆ. ಅವರಲ್ಲಿ ಕೆಲವರು ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆ ಇಲ್ಲ ಎಂದು ಹೆಮ್ಮೆಯಿಂದ ಘೋಷಿಸುವುದೂ ಉಂಟು.

ಆದರೆ ವಸ್ತುಸ್ಥಿತಿ ಏನು? ತಥಾಕಥಿತ ಕಾನೂನು ಏನನ್ನು ಎತ್ತಿ ಹಿಡಿಯುತ್ತದೆ? ಧಾರ್ಮಿಕ ವಿಷಯದಲ್ಲಿ ಅಸ್ಪೃಶ್ಯತೆಯನ್ನು ತಡೆಗಟ್ಟದಂತೆ ಕಾನೂನು ವಿನಾಯಿತಿ ನೀಡಿದೆ. ಗರ್ಭಗುಡಿಯ ಒಳಕ್ಕೆ ಹೋಗಲು ಕಾನೂನು ನಮಗೆ ಅಧಿಕಾರ ಕೊಟ್ಟಿಲ್ಲ. ಭಾರತದ ಸಂವಿಧಾನದಲ್ಲಿ ಇರುವ ಈ ಕೊರತೆಯು ಸಂವಿಧಾನ ತಿದ್ದುಪಡಿಗೆ ನಮ್ಮನ್ನು ಪ್ರೇರೇಪಿಸುತ್ತದೆ. ಈ ಶೋಚನೀಯ ಸ್ಥಿತಿ ಹೋಗಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ. ಆದರೆ ಈ ಕೇಡು ಕಾನೂನಿನಿಂದಲೂ ಶಾಸ್ತ್ರ ಗ್ರಂಥಗಳಿಂದಲೂ ರಕ್ಷಣೆ ಪಡೆದುಕೊಂಡಿದೆ.

ಕಾನೂನು ಪುಸ್ತಕಗಳಿಂದ ಈ ಕೇಡನ್ನು ನಾವು ಬೇರುಸಹಿತ ಕಿತ್ತು ಹಾಕಬೇಕಾದರೆ ಈ ಕಾನೂನನ್ನೇ ಕಿತ್ತು ಹಾಕಬೇಕು. ಇಂಥ ಕಾನೂನನ್ನು ಅಳಿಸಬೇಕಾದರೆ ಈ ಕಾನೂನನ್ನು ಎತ್ತಿ ಹಿಡಿಯುವ ಸರ್ಕಾರದಿಂದ ಸಾಧ್ಯವಿಲ್ಲ. ಆದ್ದರಿಂದ ಅಂಥ ಸರ್ಕಾರವನ್ನು ಕೆಡವಬೇಕು. ಅದನ್ನು ಮಾಡಲು ನಾವು ಸರಿಯಾಗಿ ಸಿದ್ಧರಾಗಬೇಕಾಗುತ್ತದೆ. ಸರ್ಕಾರ ಈಗಲೇ ತನ್ನನ್ನೇ ತಾನು ಅನೇಕ ರೀತಿಯಲ್ಲಿ ಬಲಿಷ್ಠಗೊಳಿಸಿಕೊಂಡಿದೆ.

ಯಾವಾಗಲಾದರೂ ಜನರೆಲ್ಲ ಒಗ್ಗಟ್ಟಾಗಿ ಸರ್ಕಾರದ ವಿರುದ್ಧ ನಿಲ್ಲಬಹುದೆಂದು ಜನರನ್ನು ನಾನಾ ರಾಜ್ಯಗಳನ್ನಾಗಿ ವಿಭಜಿಸಿಬಿಟ್ಟಿದ್ದಾರೆ. ರಾಜ್ಯಗಳನ್ನು ಬೇರೆ ಬೇರೆ ಮಾಡಿ ಜನರನ್ನು ಒಡೆದಿದ್ದಾರೆ. ವಿವಿಧ ರಾಜ್ಯಗಳ ಜನರ ನಿಕಟ ಸಂಬಂಧವನ್ನು ಮೊಟಕು ಮಾಡಿದ್ದಾರೆ. ಇತರ ರಾಜ್ಯಗಳ ಜನರೊಂದಿಗೆ ನಮಗೆ ಯಾವುದೇ ಸಂಬಂಧ ಇಲ್ಲ. ಮಲಯಾಳಂ, ಹಿಂದಿ, ಬಂಗಾಳಿ ಇತ್ಯಾದಿ ಮಾತನಾಡುವ ಜನರನ್ನು ಭಾಷಾವಾರು ರಾಜ್ಯಗಳನ್ನಾಗಿ ಬೇರೆ ಬೇರೆ ಮಾಡಲಾಗಿದೆ.

ತಮಿಳುನಾಡಿನ ಜನಸಂಖ್ಯೆ ನಾಲ್ಕೂವರೆ ಕೋಟಿ ಇದೆ. ಮುಸ್ಲಿಮರು ಮತ್ತು ಕಿಲಿಸ್ತರನ್ನು ಬಿಟ್ಟರೆ ತಮಿಳುನಾಡಿನ ಮೂರು ಕೋಟಿ ಜನರು ಶೂದ್ರರು. ಅವರನ್ನೆಲ್ಲ ಒಟ್ಟುಗೂಡಿಸುವುದು ಮೆಚ್ಚತಕ್ಕ ಕೆಲಸ. ಆದರೆ ಅದು ಬಹಳ ಕಷ್ಟದ ಕೆಲಸ. ಅದಕ್ಕೆ ಪ್ರಚಂಡ ಪ್ರಯತ್ನಗಳು ಬೇಕಾಗುತ್ತವೆ.

ಸರ್ಕಾರ ಕರ್ತವ್ಯ ನಿರ್ವಹಿಸಲು ಸಂವಿಧಾನ ಬೇಕೇಬೇಕು. ಅದನ್ನು ನಾನು ನಿರಾಕರಿಸುವುದಿಲ್ಲ. ಆದರೆ ಸರ್ಕಾರ ನಡೆಸಲು ಬ್ರಾಹ್ಮಣ ಶೂದ್ರ ಸ್ಥಾನಮಾನ ಏಕೆ ಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರ ನಡೆಸುವ ಉದ್ದೇಶಕ್ಕಾಗಿ ಕೆಲವು ಪ್ರಜೆಗಳನ್ನು ಬ್ರಾಹ್ಮಣರೆಂತಲೂ, ಉಳಿದ ಬಹು ದೊಡ್ಡ ಸಮುದಾಯವನ್ನು ಶೂದ್ರರೆಂತಲೂ ಕರೆಯುವ ಅಗತ್ಯ ಏನಿದೆ? ಅದಕ್ಕೆ ಬೇಕಾದದ್ದು ಮನುಷ್ಯರು - ಬ್ರಾಹ್ಮಣರೂ ಅಲ್ಲ, ಶೂದ್ರರೂ ಅಲ್ಲ. ನೀವು ಜಗತ್ತಿನಲ್ಲಿ ಅನೇಕ ಸರ್ಕಾರಗಳನ್ನು ನೋಡಬಹುದು. ಆದರೆ ಬ್ರಾಹ್ಮಣರು ಮತ್ತು ಶೂದ್ರರು ಎಂಬ ವಿಭಜನೆಯನ್ನು ನೀವು ವಿದೇಶಗಳಲ್ಲಿ ಕಾಣುವುದಿಲ್ಲ.

ನಮ್ಮ ದೇಶದ ಜನರ ಐಕ್ಯತೆಗೆ ಅಡ್ಡವಾಗಿರುವ ಹಾರುವರ ಪರವಾಗಿ ನಮ್ಮ ಸರ್ಕಾರ ನಿಂತಿದೆ. ಉಳಿದ ಎಲ್ಲರೂ ಹಾರುವರಿಗೆ ಗುಲಾಮರಾಗಿರಬೇಕೆಂದು ಅವರು ಬಯಸುತ್ತಾರೆ. ಇದು ಹಾರುವರ ಏರ್ಪಾಡು. ಇದನ್ನು ಬದಲಾಯಿಸುವವರೆಗೂ ನಾವು ಹೋರಾಟ ಮಾಡಬೇಕು. ವೈದಿಕ ಧರ್ಮವನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕು. ಈ ಉದಾತ್ತ ಧ್ಯೇಯದಿಂದ ನಾವು ಸಮ್ಮೇಳನವನ್ನು ನಡೆಸಿದೆವು. ಸಮ್ಮೇಳನದ ಚರ್ಚೆಗಳಲ್ಲಿ ಭಾಗವಹಿಸಲು ಯಾವ ರಾಜಕೀಯ ಪಕ್ಷವೂ ಮುಂದೆ ಬರಲಿಲ್ಲ. ಯಾರೂ ನಮಗೆ ನೆರವಿನ ಹಸ್ತ ನೀಡಲಿಲ್ಲ. ನಮ್ಮ ಸಮ್ಮೇಳನದಲ್ಲಿ ಬೇರೆ ಯಾವುದಾದರೂ ರಾಜಕೀಯ ಪಕ್ಷ ಭಾಗ ವಹಿಸುತ್ತದೆಯೇ ಎಂದು ಹುಡುಕಲು ಅಪರಾಧ ತನಿಖಾ ಇಲಾಖೆಯ (ಸಿಐಡಿ) ಕಾವಲು ಪಡೆಯವರು ಎಚ್ಚರದಿಂದ ಗಮನಿಸುತ್ತಿದ್ದರು. ರಾಜಕೀಯ ಪಕ್ಷಗಳು ಬಹಿರಂಗವಾಗಿ ಬರಲು ತಮ್ಮ ಪಾದರಕ್ಷೆಗಳ ಒಳಗೇ ನಡುಗುತ್ತಿದ್ದವು. ಏತಕ್ಕಾಗಿ ನಾವು ಸಮ್ಮೇಳನ ನಡೆಸಿದೆವು? ಸಮಾಜದಲ್ಲಿ ಅವಮಾನಿತರಾಗಿರುವ ದುಸ್ಥಿತಿಗಿಳಿಸಿರುವ ಅಗೌರವಿಸಲ್ಪಟ್ಟ ಈ ಎಲ್ಲಾ ಶೂದ್ರರಿಗಾಗಿ ಅಲ್ಲವೇ ನಾವು ಸಮ್ಮೇಳನ ನಡೆಸಿದ್ದು? ಅತ್ಯಂತ ಹೀನ ಸಾಮಾಜಿಕ ಕೆಡುಕಿಗೆ ಬಲಿಯಾಗಿರುವ ಇವರು ಸಮ್ಮೇಳನದಲ್ಲಿ ಭಾಗಿಯಾಗಲೇಬೇಕಿತ್ತು. ಪ್ರತಿಯೊಬ್ಬರೂ ಮನಃ ಪೂರ್ವಕವಾಗಿ ನಮ್ಮ ಜೊತೆ ಸಮ್ಮೇಳನದಲ್ಲಿ ಪಾಲ್ಗೊಳ್ಳಬೇಕಿತ್ತು. ನಮ್ಮ ಮಂತ್ರಿಗಳು ಸಹ 'ಶೂದ್ರರು'. ಸಮಾಜದಲ್ಲಿ ಅದೇ ಅವರ ನೀಚ ಸ್ಥಾನಮಾನ; ಹಾಗಾಗಿ ಮಂತ್ರಿಗಳು ಕೂಡ ಸಮ್ಮೇಳನದಲ್ಲಿ ಭಾಗಿಯಾಗಬೇಕಿತ್ತು. ಇಡೀ ಶೂದ್ರ ಸಮುದಾಯಕ್ಕೆ ಸಂಬಂಧಿಸಿದ ಅತ್ಯಂತ ಪ್ರಮುಖ ಸಮಸ್ಯೆ ಇದು. ಈ ಕೇಡನ್ನು ಮೂಲೋತ್ಪಾಟನೆ ಮಾಡಲು ನಾವು ಗಂಡಾಂತರ ಎದುರಿಸಲೇಬೇಕು. ಇಲ್ಲವಾದರೆ ನಾವು ಉದಾತ್ತ ಸಾವನ್ನು ಎದುರಿಸಬೇಕಾಗುತ್ತದೆ. ಹೆಸರು ಕೀರ್ತಿ ಇಲ್ಲದ ದೀರ್ಘ ಜೀವನ ನಡೆಸುವುದಕ್ಕಿಂತ ಒಂದು ಗಳಿಗೆಯ ಭವ್ಯ ಬಾಳು ಹೆಚ್ಚು ಮೌಲಿಕವಾದುದು.

ಹೇಗಾದರೂ ಮಾಡಿ ಜೀವನ ಸಾಗಿಸಬೇಕೆಂದು ಜನ ಬಯಸುತ್ತಾರೆ. ಕುತ್ತಿಗೆ ಮಟ್ಟಕ್ಕೆ ಅವರ ಹೊಟ್ಟೆ ತುಂಬಿದರೆ ಅವರು ಸಂತೃಪ್ತರಾಗುವರು. ಇತರ ವಿಷಯಗಳ ಬಗ್ಗೆ ಅವರು ಚಿಂತಿಸುವುದಿಲ್ಲ. ಜನರು ತಲೆ ತಗ್ಗಿಸುವಂಥ ಜೀವನ ನಡೆಸುತ್ತಿದ್ದಾರೆ.

ದೇವರು, ಧರ್ಮ ಅಥವಾ ಶಾಸ್ತ್ರ ಎಂದರೆ ಏನೆಂದು ತಿಳಿದುಕೊಳ್ಳಲು ನಾವು ಸಮರ್ಥರೆ? ಎಂಬ ಬಗ್ಗೆ ಕ್ಷಣಕಾಲ ಯೋಚಿಸಿ. 'ಮನುಧರ್ಮ' ಎಂದರೆ ಏನೆಂದು ನಿನಗೆ ಗೊತ್ತೇ? ಎಂದು ಸಾಮಾನ್ಯ ಮನುಷ್ಯನನ್ನು ಕೇಳಿ. ಅದರ ತಲೆ ಬುಡ ಅವನಿಗೆ ಗೊತ್ತಿಲ್ಲ. ಅದು ಎಲ್ಲಿ ಮಾರಾಟವಾಗುತ್ತಿದೆ? ರೂಪಾಯಿಗೆ ಎಷ್ಟು ಕೆಜಿ ಕೊಡುತ್ತಾರೆ? ಎಂದು ಮುಗ್ಧವಾಗಿ ಕೇಳುತ್ತಾನೆ. ಆದ್ದರಿಂದಲೇ ನಮ್ಮ ಜನ ಗುಲಾಮಗಿರಿಯಲ್ಲಿದ್ದಾರೆ.

ಹಾಗೆಯೇ ಸಂಪ್ರದಾಯ ನಿಷ್ಠ ಮತೀಯ ಮನಸ್ಸಿನ ವ್ಯಕ್ತಿಯನ್ನು, 'ಹಿಂದೂ' ಶಬ್ದದ ಅರ್ಥವನ್ನು ವಿವರಿಸು ಎಂದು ಕೇಳಿ. 'ಹಿಂದೂ ಧರ್ಮ' ಯಾವಾಗ ಹುಟ್ಟಿತ್ತೆಂದು ಕೇಳಿ. ಹಿಂದೂ ಮತದ ಸ್ಥಾಪಕ ಯಾರು? ಎಂದು ಅವನನ್ನು ಕೇಳಿ. ಹಿಂದೂ ಮತದ ಸಿದ್ಧಾಂತವನ್ನು ವಿವರಿಸಿ ಎಂದು ಕೇಳಿ. ನಿಮಗೆ ಶಾಸ್ತ್ರಗಳ ಬಗೆ ಗೊತ್ತಿದೆಯೇ? ಎಂದು ಕೇಳಿ.

ನೀವು ಒಬ್ಬ ಕಿಲಿಸ್ತನನ್ನು ಕೇಳಿ, ಅವನು ತಡಬಡಾಯಿಸದೆ ಹೇಳುತ್ತಾನೆ. ಕ್ರಿಸ್ತ ಮತದ ಉದ್ಧಾರಕ ಏಸು, ಅದು 2000 ವರ್ಷಗಳ ಹಿಂದೆ ಶುರುವಾಯಿತು ಎಂದು ಉತ್ತರಿಸುತ್ತಾನೆ. 'ಬೈಬಲ್' ನಮ್ಮ ಧರ್ಮ ಗ್ರಂಥ ಎನ್ನುತ್ತಾನೆ.

ಅಂತೆಯೇ ನೀವು ಒಬ್ಬ ಮುಸ್ಲಿಮನನ್ನು ಕೇಳಿ. ಇಸ್ಲಾಮಿನ ಪ್ರವಾದಿ ಮಹಮ್ಮದ್; ಇಸ್ಲಾಂ 1300 ವರ್ಷಗಳ ಹಿಂದೆ ಹುಟ್ಟಿತು; ನಮ್ಮ ಪವಿತ್ರ ಧರ್ಮ ಗ್ರಂಥ 'ಕುರಾನ್' ಎಂದು ಉತ್ತರಿಸುತ್ತಾನೆ.

ಹಿಂದೂ ಮತದಲ್ಲಿ ಅಂಥಾದ್ದು ಏನಾದರೂ ಇದೆಯೇ? ಎಂದು ಕೇಳಿ. ಯಾರೋ ಒಬ್ಬ ನಿಷ್ಪ್ರಯೋಜಕ ಮನುಷ್ಯನನ್ನು ಹಿಡಿದುಕೊಂಡು ಅವನನ್ನು ಮುನಿ ಅಥವಾ ಋಷಿಯನ್ನಾಗಿ ಮಾಡುತ್ತಾರೆ. ಹಿಂದೂಗಳ ಧಾರ್ಮಿಕ ನಾಯಕ ಯಾರು? ಕೆಲವರು ವಶಿಷ್ಠ ಎನ್ನುವರು; ಇನ್ನೂ ಕೆಲವರು ವಿಶ್ವಾಮಿತ್ರ ಎಂದು ಹೇಳುತ್ತಾರೆ. ಸಂಪೂರ್ಣ ಗೊಂದಲ ಇ… ಮತೀಯ ನಾಯಕರ ಕಾಲದ ಬಗ್ಗೆ ಹಾರುವರು … ಸುಳ್ಳೇ ಹೇಳುತ್ತಾರೆ: ಅವರು ನಾಲ್ಕೈದು ಕೋಟಿ ವ… ಹಿಂದೆ ಬದುಕಿದ್ದರೆಂದು ಹೇಳುವರು. ಶಾಸ್ತ್ರಗಳನ್ನು ಯಾ… ಬರೆದಿಡಲಾಯಿತು? ಎಂದು ಕೇಳಿದರೆ, ಅವು… ಮನುಷ್ಯರು ಬರೆಯಲಿಲ್ಲ, ದೇವರೇ ಶಾಸ್ತ್ರಗಳನ್ನು ಬರೆದ… ಹಾರುವರು ಹೇಳುತ್ತಾರೆ. ಹಿಂದೂಗಳ ಹೆಸರಿಗೆ … ಉಳಿಯುತ್ತದೆ? ಅವರು ಹೆಮ್ಮೆ ಪಡಲು ಒಂದಾ… ವಿಷಯ ಇದೆಯೇ?

ಆದ್ದರಿಂದಲೇ ನಾವು ಹೇಳುವುದು: ದೇವ… ನಂಬುವವನು ಮೂರ್ಖ. ಹಿಂದೂಗಳಿಗೆ … ದೇವರುಗಳನ್ನು ಯಾರು ಸೃಷ್ಟಿಸಿದರೆಂಬುದು ಗೊ… ಅಷ್ಟೊಂದು ಗುಣಗಳ ಅಪರಾವತಾರ ಆಗಿರುವ ದೇ… ಸಿಕ್ಕಲ್ಲ, ದೇವರು ಕಾಣಿಸುವುದಿಲ್ಲ, ಅವನಿಗೆ ಆಕಾರ… ಎಂದು ಅವರು ಹೇಳುತ್ತಾರೆ. ಆದರೂ ಭಿನ್ನ ಭಿನ್ನ ಆಕಾ… ಬಗೆಬಗೆಯ ದೇವರುಗಳನ್ನು ಅವರು ಸೃಷ್ಟಿಸಿರು… ದೇವರಿಗೆ ಯಾವುದರ ಅಗತ್ಯವೂ ಇಲ್ಲ, ಎಲ್ಲ… ಅವನೇ ಕೊಡುತ್ತಾನೆ ಎಂದು ಅವರು ಹೇಳುತ್ತಾರೆ. ಅ… ಅವನಿಗೆ ಬೇಯಿಸಿ ಅಡುಗೆ ಮಾಡಿದ ವಿವಿಧ ಭೋಜ್ಯಗಳನ್ನು ನೈವೇದ್ಯ ಮಾಡುವರು. ದೇ… ಹೆಂಡತಿಯರಿದ್ದಾರೆ, ಉಪಪತ್ನಿಯರಿದ್ದಾರೆ, ಮ… ಮುಂತಾದ ಆಚರಣೆಗಳಿವೆ.

ಮನುಷ್ಯ ಮತ್ತು ದೇವರಿಗೆ ಏನು ವ್ಯತ್ಯಾ…

ನೈತಿಕ ಭ್ರಷ್ಟತನ ಇಲ್ಲದ ಯಾರಾದರೂ ಒಬ್ಬ ದೇ… ಇದ್ದಾನೆಯೇ? ನಿಮ್ಮ ದೇವರುಗಳೆಲ್ಲ ಆನೆಗ… ಕುದುರೆಗಳಿಗೆ, ಕತ್ತೆಗಳಿಗೆ ಹುಟ್ಟಿದ್ದಾರೆ. ಮರ್ಯಾ… ತಂದೆತಾಯಿಗಳಿರುವ ಯಾವ ದೇವರೂ ಇಲ್ಲ. ಶಿವ… ದೇವರು ತನ್ನ ಹೆಂಡತಿಯ ಜೊತೆ ಒಂದು ಲಕ್ಷ ವರ್ಷ… ಕಾಲ ಸಂಭೋಗ ಮಾಡಿದನೆಂದು ಅವರು ಹೇಳು…

ದೇವರಿಗೆ ಹೆಂಡತಿ ಏಕೆ? ಗಂಡಸು ತನ್ನ ಹೆಂಡ… ಜೊತೆ ಒಂದೆರಡು ಗಂಟೆಗಳ ಸಮಯ ಸುಖ ಪಡಬಹು… ಇದಕ್ಕಾಗಿ ಕೆಲವರು ತಮ್ಮ ಸಾಮರ್ಥ್ಯವನ್ನು ಉತ್ತೇಜಿ… ಗಿಡಮೂಲಿಕೆ ಮದ್ದುಗಳನ್ನು ಔಷಧಿಗ… ತೆಗೆದುಕೊಳ್ಳುತ್ತಾರೆ. ಆದರೆ ಸಾವಿರಾರು ವರ್ಷಗಳ … ನಿಲ್ಲಿಸದೇ ದೇವರು ಸಂಭೋಗ ಮಾಡಿದನೆ… ಪುರಾಣಗಳು ಹೇಳುತ್ತವೆ. ಆ ದೃಶ್ಯವನ್ನು ದೇವ… ನೋಡುತ್ತಿದ್ದರಂತೆ. ಅವರಿಗೆ ಹೆದರಿಕೆ ಆಯಿತು. … ದೇವರಿಗೆ ನಿಲ್ಲಿಸು ಎಂದು ಪ್ರಾರ್ಥಿಸಿದರು. ನಿಲ್ಲಿ… ನನಗೆ ಸಾಮರ್ಥ್ಯ ಇಲ್ಲ ಎಂದು ದೇವರು ಉತ್ತ… ಕೊನೆಗೆ ಮಹಾಕಷ್ಟದಿಂದ ಸಂಭೋಗವನ್ನು ನಿಲ್ಲಿಸಿ… ಕೊನೆಗೆ ಅವನ ವೀರ್ಯ ಕಾಲುವೆಯ ನೀರಿನಂತೆ ನು… ದೇವತೆಗಳು ಶಿವನ ವೀರ್ಯವನ್ನು ಕುಡಿದರೆಂದು ಹೇಳು… ಹೀಗಲ್ಲವೇ ಪುರಾಣಗಳಲ್ಲಿ ಬರೆದಿರುವುದು? … ದೇವರನ್ನು ಸೃಷ್ಟಿಸುವ ವಿಧಾನವೇ? ಹಾರುವರಿಗೆ … ಮೇಲೆ ಏನಾದರೂ ಗೌರವ ಇದ್ದರೆ, ನಮ್ಮನ್ನೆಲ್ಲ ಆ… ಮಾನವ ಜೀವಿಗಳು ಎಂದು ಪರಿಗಣಿಸಿದ್ದರೆ ಪುರಾಣ… ಇಂಥ ಅರ್ಥಹೀನ ವಿಷಯಗಳನ್ನು ಬರೆಯಲು ಧೈ… ಮಾಡುತ್ತಿದ್ದರೇ? ನಮಗೆ ವಿವೇಕ ಇಲ್ಲವೇ? ಹಾ… ಪುರಾಣಗಳಲ್ಲಿ ಬರೆದಿರುವುದನ್ನು ನಾವು ನಂಬಬೇಕ… ಬಲವಂತಪಡಿಸುವ ಧೀರತನ ಅವರಿಗೆ ಇದೆ.

ಪ್ರೀತಿಯ ಅಪರಾವತಾರ ಎಂದು ದೇವ… ವರ್ಣಿಸಲಾಗಿದೆ. ಆದರೆ ದೇವರುಗಳ ಕೈ… ಭಯಂಕರವಾದ ಆಯುಧಗಳಿವೆ. ದೇವರು… ಕೊಲೆಗಡುಕರೆ? ಯಾರನ್ನೂ ಕೊಲ್ಲದ ಯಾರಾದರೂ … ದೇವರಿದ್ದಾನೆಯೇ? ದೇವತೆಗಳು ಅಸಂಖ್ಯಾತ ಮಂದಿ… ಕೊಂದು ಹಾಕಿದರೆಂದು ತೋರಿಸಲು ಪುರಾಣಗಳಲ್ಲಿ … ನಿದರ್ಶನಗಳು ತುಂಬಿವೆ. ನಮ್ಮ ದೇವರುಗಳು ಕಟು… ದೇವರು ದಯಾಳು ಎಂಬ ಹೇಳಿಕೆಯನ್ನು ನಾವು … ಒಪ್ಪಲು ಸಾಧ್ಯ?

ಇಂಥ ಆಧಾರಹೀನ, ಅವಿವೇಕದ, ಮೂರ್ಖ… ಪುರಾಣಗಳಿಂದ ನಮ್ಮ ಸಮಾಜವನ್ನು ಹಾರುವರು … ಪ್ರತಿಗಾಮಿ ಮೂರ್ಖರನ್ನಾಗಿ ಮಾಡುವುದ… ಜಯಶಾಲಿಗಳಾಗಿಬಿಟ್ಟಿದ್ದಾರೆ. ಜನರು ಆಲೋಚನಾಶಕ್ತಿ… ಕಳೆದುಕೊಂಡಿದ್ದಾರೆ.

ಆದ್ದರಿಂದ ಇಂಥ ದೇವರುಗಳನ್ನು ಪೂಜಿಸಲು ಅ… ಯಾವುದೇ ಹಾರುವನ ಪಾದವನ್ನು ಗೌರವದಿಂದ ಮು… ವಿವೇಕ ಇರುವ ಯಾವ ಮನುಷ್ಯನೂ ಒಪ್ಪಲಾರ.

ದೇವರು ಎಂದರೆ ಏನು?

ನನ್ನನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿ. ದೇವ… ಪೂಜಿಸಬೇಡಿ ಎಂದು ನಾವು ನಿಮ್ಮನ್ನು ಕೇಳುತ್ತಿಲ್ಲ. … ನಮ್ಮ ಉದ್ದೇಶ ಅಲ್ಲ. ದೇವರನ್ನು ಪೂಜಿಸಬೇಡಿ ಎ… ನಾವು ನಿಮಗೆ ಹೇಳುತ್ತಿಲ್ಲ ಎಂಬುದನ್ನು ದಯ… ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಿ. ನಾವು ಕೇಳುತ್ತಿರುವು… 'ದೇವರು ಎಂದರೆ ಏನು?' ಎಂಬುದಷ್ಟೆ. ದೇವರು … ಏನು? ಎಂದು ಸ್ಪಷ್ಟವಾದ ಮಾತುಗಳಲ್ಲಿ ಹೇಳಿ … ನಾವು ಅವರನ್ನು ಒತ್ತಾಯಿಸುತ್ತಿದ್ದೇವೆ. ದೇವರನ್ನು …

⇨ 1

ಅಸಹಿಷ್ಣುತೆ ವಿಷಯದಲ್ಲಿ (ಅಸಲಿ) ಸ್ನಾತಕೋತ್ತರ ಪದವಿ!

ನಮ್ಮದು ವಿಶ್ವದ ಅತಿದೊಡ್ಡ ಪ್ರಜಾಸತ್ತೆ ಎನ್ನುತ್ತ ಗರ್ವದಿಂದ ಎದೆಯುಬ್ಬಿಸುವವರಿದ್ದಾರೆ. ಜನಸಂಖ್ಯೆ ಮತ್ತು ಮತಚಲಾವಣೆಯ ಮಟ್ಟಿಗೆ ಇದು ನಿಜವಿರಬಹುದು. ಆದರೆ ಕೇವಲ ಜನಸಂಖ್ಯೆ ಮತ್ತು ಮತಚಲಾವಣೆಗಳ ಆಧಾರದಲ್ಲಿ ಬೆನ್ನು ತಟ್ಟಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ? ಗುಣಮಟ್ಟವನ್ನು ಪರಿಗಣಿಸುವುದು ಬೇಡವೆ? ಏಕೆಂದರೆ ಮಿಕ್ಕೆಲ್ಲದಕ್ಕಿಂತಲೂ ಮುಖ್ಯವಾಗಿರುವುದು ಪ್ರಜಾಸತ್ತೆಯ ಗುಣಮಟ್ಟ. ನಮ್ಮ ಪ್ರಜಾಸತ್ತೆಯ ಗುಣಮಟ್ಟ ಹೇಗಿದೆಯೆಂದು ನೋಡಹೊರಟರೆ ಅದರ ದುಸ್ಥಿತಿ ಯಾರಿಗಾದರೂ ಕಣ್ಣೀರು ಬರಿಸುವಂತಿದೆ. ಆರಂಭದ ಕೆಲವು ವರ್ಷಗಳನ್ನು ಹೊರತುಪಡಿಸಿದರೆ ನವಉದಾರೀಕರಣದ ಫಲವಾಗಿ ಬಹುರಾಷ್ಟ್ರೀಯ ಕಾರ್ಪೋರೇಟುಗಳ ರೂಪದಲ್ಲಿ ಮರುಪ್ರತ್ಯಕ್ಷವಾಗಿರುವ ನವಸಾಮ್ರಾಜ್ಯವಾದ, ದುಬಾರಿಯಾದ ಚುನಾವಣೆಗಳು, ಅಕ್ರಮಗಳು, ಭ್ರಷ್ಟಾಚಾರ, ಸಂಸತ್ತಿನಲ್ಲಿ ಹೆಚ್ಚೆಚ್ಚು ಶ್ರೀಮಂತರು ಮತ್ತು ಕ್ರಿಮಿನಲ್ ಆರೋಪಿಗಳು, ಸದ್ದುಗದ್ದಲಗಳ ಏರಿಕೆ, ಅರ್ಥಪೂರ್ಣ ಚರ್ಚೆಗಳ ಇಳಿಮುಖ ಇವೇ ಮುಂತಾದ ಋಣಾತ್ಮಕ ಬೆಳವಣಿಗೆಗಳಿಂದಾಗಿ ಗುಣಮಟ್ಟ ಪಾತಾಳಕ್ಕಿಳಿಯುತ್ತ ಬಂದಿದೆ. ಮೋದಿ ಸರ್ಕಾರ ಬಂದ ಮೇಲಂತೂ ಅದು ಪ್ರಪಾತದ ಅಂಚಿಗೆ ಬಂದು ನಿಂತಿದೆ ಎನ್ನಬಹುದು.

ಕಳೆದೆರಡು ವರ್ಷಗಳ ಅವಧಿಯಲ್ಲಿ ಪರಿಸ್ಥಿತಿ ಎಷ್ಟೊಂದು ಬಿಗಡಾಯಿಸಿದೆ ಎಂದರೆ ಪ್ರಜಾಪ್ರಭುತ್ವದ ಅಳಿವುಉಳಿವಿನ ಬಗ್ಗೆ ದಟ್ಟ ಅನುಮಾನಗಳು ಕಾಡಲಾರಂಭಿಸಿವೆ.

ಧರ್ಮನಿರಪೇಕ್ಷತೆ ಅಥವಾ ಜಾತ್ಯತೀತತೆ ನಮ್ಮ ಪ್ರಜಾಸತ್ತೆಯ ಪ್ರಧಾನ ಮೌಲ್ಯಗಳಲ್ಲೊಂದು. ವಿವಿಧ ಜಾತಿಧರ್ಮಗಳು, ನಂಬಿಕೆಗಳು, ಪಂಥಗಳು, ತತ್ವ ಸಿದ್ಧಾಂತಗಳು ಪರಸ್ಪರ ಸಹಿಷ್ಣುತೆಯಿಂದ ಅಕ್ಕಪಕ್ಕದಲ್ಲಿ ಕೂಡಿಬಾಳಿದರೆ ಮಾತ್ರ ಪ್ರಜಾಸತ್ತೆ ಉಳಿಯಬಲ್ಲದು. ಆದರೆ ಮೋದಿ ಸರ್ಕಾರದ ಆಡಳಿತದಡಿ ದೇಶದಾದ್ಯಂತ ಅಸಹಿಷ್ಣುತೆಯ ಮಟ್ಟದಲ್ಲಿ ಭಾರಿ ಏರಿಕೆಯಾಗಿದೆ. ಸತ್ಯಶೋಧಕರು, ಎಡಪಂಥೀಯ ಬುದ್ಧಿಜೀವಿಗಳು, ಪ್ರಾಮಾಣಿಕ ಪತ್ರಕರ್ತರು, ಅಲ್ಪಸಂಖ್ಯಾತರು ಮುಂತಾದವರ ವಿರುದ್ಧ ಅಸಹಿಷ್ಣುತೆ ದುಸ್ಸಹನೀಯ ಮಟ್ಟಕ್ಕೆ ಏರುತ್ತಿರುವುದನ್ನು ಗಮನಿಸಿದ ಸಾಹಿತಿಗಳು, ಬುದ್ಧಿಜೀವಿಗಳು ತಮ್ಮ ಆತಂಕ ತೋಡಿಕೊಂಡಾಗ ಮೋದಿಭಕ್ತರೆಲ್ಲ ಅವರ ಮೇಲೆ ಮುಗಿಬಿದ್ದರು. ನೆಲದ ವಾಸ್ತವವನ್ನು ಮುಚ್ಚಿಟ್ಟು ಮೋದಿ ಸರ್ಕಾರದಡಿ ಅಸಹಿಷ್ಣುತೆ ಇಲ್ಲವೇ ಇಲ್ಲ ಎಂದು ಬೊಬ್ಬಿಡುತ್ತಾ ವಿರೋಧಿಗಳ ಬಾಯ್ಮುಚ್ಚಿಸಲೆತ್ನಿಸಿದರು. ಆದರೆ ಇದೀಗ ಇದೇ ಅಸಹಿಷ್ಣುತೆಯ ವಿಷಯದಲ್ಲಿ ಮೋದಿ ಸರ್ಕಾರಕ್ಕೆ ಸ್ನಾತಕೋತ್ತರ ಪದವಿ ಪ್ರಾಪ್ತಿಯಾಗಿದೆ, ಅದೂ ವಿದೇಶದಿಂದ! ಇದು ನಮ್ಮ ಕೆಲವು ದೇಸಿ ವಿಶ್ವವಿದ್ಯಾನಿಲಯಗಳ ಬಹುಚರ್ಚಿತ ನಕಲಿ ಡಿಗ್ರಿಯ ಹಾಗೆಂದು ಭಾವಿಸಬೇಕಾಗಿಲ್ಲ, ಏಕೆಂದರೆ ಪರದೇಶವೊಂದರಿಂದ ಸಿಕ್ಕಿರುವ ಅಸಲಿ ಡಿಗ್ರಿ ಇದಾಗಿದೆ! ಇದನ್ನು ದಯಪಾಲಿಸಿರುವುದು ಅಮೆರಿಕ ಸಂಯುಕ್ತ ಸಂಸ್ಥಾನದ ಮತೀಯ ಸ್ವಾತಂತ್ರ್ಯ ಆಯೋಗ!

ಇತ್ತೀಚೆಗಷ್ಟೆ ನೀಡಲಾದ ಈ ಡಿಗ್ರಿಯ ಜೊತೆಗಿರುವ 'ಪ್ರಶಸ್ತಿಪತ್ರ'ದ ಪ್ರಕಾರ 2015ರಲ್ಲಿ ಭಾರತದಲ್ಲಿ ಮತೀಯ ಸಹಿಷ್ಣುತೆಯ ವಾತಾವರಣ "ಹದಗೆಟ್ಟಿದೆ" ಮತ್ತು ಮತೀಯ ಸ್ವಾತಂತ್ರ್ಯ ಉಲ್ಲಂಘನೆಯ ಘಟನೆಗಳು "ಹೆಚ್ಚಾಗಿವೆ". ಇದಕ್ಕೆ ಕೇಂದ್ರದ ಮೋದಿ ಸರ್ಕಾರ, ಬಿಜೆಪಿ ಮತ್ತು ಆರೆಸ್ಸೆಸ್‌ಗಳೆ ಕಾರಣವೆಂದು ನೇರವಾಗಿ ಆರೋಪಿಸಿರುವ ಆಯೋಗ "ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದ ಪಕ್ಷದ ರಾಜಕಾರಣಿಗಳು ಧಾರ್ಮಿಕ ಅಲ್ಪಸಂಖ್ಯಾತರ ಕುರಿತು ಹೀನಾಯಕರ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅಲ್ಪಸಂಖ್ಯಾತರ ವಿರುದ್ಧ ಅನೇಕ ಹಿಂಸಾತ್ಮಕ ದಾಳಿಗಳು ನಡೆಯುತ್ತಿವೆ. ಸಂಘ ಪರಿವಾರದ ವಿಶ್ವ ಹಿಂದೂ ಪರಿಷತ್ ಮತ್ತಿತರ ಗುಂಪುಗಳು ಅಲ್ಪಸಂಖ್ಯಾತರನ್ನು ಬಲವಂತದಿಂದ 'ಮರು' ಮತಾಂತರಿಸುವುದರಲ್ಲಿ ನಿರತವಾಗಿವೆ... ಅಲ್ಪಸಂಖ್ಯಾತರ ವಿರುದ್ಧ, ಅದರಲ್ಲೂ ವಿಶೇಷವಾಗಿ ಕ್ರೈಸ್ತರು, ಮುಸ್ಲಿಮರು ಮತ್ತು ಸಿಖ್ಖರ ವಿರುದ್ಧ ಬೆದರಿಕೆ, ಕಿರುಕುಳ, ಹಿಂಸಾಚಾರದ ಅನೇಕ ಘಟನೆಗಳು ನಡೆದಿವೆ. ಹೆಚ್ಚಿನ ಸಂದರ್ಭಗಳಲ್ಲಿ ಇದನ್ನೆಲ್ಲ ನಡೆಸಿದವರು ಹಿಂದೂ ರಾಷ್ಟ್ರೀಯವಾದಿ ಗುಂಪುಗಳು. ಇಂತಹ ಕಾರ್ಯಾಚರಣೆಗಳಿಗೆಲ್ಲ ಬಿಜೆಪಿ ಸದಸ್ಯರ ಮೌನಸಮ್ಮತಿ ಇತ್ತು. ಅವರು ಉದ್ವಿಗ್ನತೆಯನ್ನು ತೀವ್ರಗೊಳಿಸಲು ಧರ್ಮಧರ್ಮಗಳ ನಡುವೆ ಒಡಕು ಮೂಡಿಸುವ ಮಾತುಗಳನ್ನಾಡಿದರು... ಸುದೀರ್ಘ ಕಾಲದಿಂದಲೂ ಇರುವ ಸಮಸ್ಯೆಗಳಾದ ಪೊಲೀಸ್ ವ್ಯವಸ್ಥೆಯ ಪಕ್ಷಪಾತೀಯ ಧೋರಣೆ ಮತ್ತು ನ್ಯಾಯವ್ಯವಸ್ಥೆಯಲ್ಲಿನ ಕುಂದುಕೊರತೆಗಳು ಇನ್ನಷ್ಟು ಬಿಗಡಾಯಿಸಿವೆ. ಇದಕ್ಕೆ ಆಡಳಿತ ಪಕ್ಷದ ಕೆಲವು ವರ್ಗಗಳ ಪಾಮೀಲಾತಿಯೆ ಕಾರಣವಾಗಿದೆ... ಇದು ವ್ಯಾಪಕವಾಗಿರುವ ಶಿಕ್ಷಾವಿನಾಯಿತಿಯ ವಾತಾವರಣವನ್ನು ಮತ್ತಷ್ಟು ಸ್ಪಷ್ಟವಾಗಿ ಬಿಂಬಿಸುತ್ತದೆ. ಇಂತಹ ವಾತಾವರಣದಲ್ಲಿ ಮತೀಯ ಹಿನ್ನೆಲೆಯ ಅಪರಾಧಗಳು ನಡೆದಾಗ ನ್ಯಾಯದ ಆಸರೆಯಿಂದ ವಂಚಿತರಾಗಿರುವ ಮತೀಯ ಅಲ್ಪಸಂಖ್ಯಾತರು ಹೆಚ್ಚೆಚ್ಚು ಅಭದ್ರತೆಯ ಭಾವನೆಯನ್ನು ಅನುಭವಿಸುತ್ತಿದ್ದಾರೆ" ಎಂದು ಹೇಳಿದೆ. ಅಂದಹಾಗೆ ಆಯೋಗದ ತಂಡವನ್ನು ಭಾರತಕ್ಕೆ ಬರದಂತೆ ತಡೆದ ಮೋದಿ ಸರ್ಕಾರ ಆ ಮೂಲಕ ತನ್ನ ಅಸಹಿಷ್ಣುತೆಗೆ ತಾನೇ ಬಲವಾದ ಪುರಾವೆ ಒದಗಿಸಿದೆ!

ಆಯೋಗವೀಗ ಧಾರ್ಮಿಕ ಸ್ವಾತಂತ್ರ್ಯದ ವಿಷಯದಲ್ಲಿ 2009ರಿಂದಲೂ ದ್ವಿತೀಯ ಹಂತದ ದೇಶಗಳ ಪಟ್ಟಿಯಲ್ಲಿರುವ ಭಾರತವನ್ನು 2015ರ ಸಾಲಿನಲ್ಲಿ ಮತ್ತೆ ಅದೇ ಪಟ್ಟಿಯಲ್ಲಿ ಮುಂದುವರಿಸಿದೆ. ಇದರರ್ಥ ಭಾರತದ ಪರಿಸ್ಥಿತಿ ಅಫಘಾನಿಸ್ತಾನ, ಅಜರ್‌ಬೈಜಾನ್, ಕ್ಯೂಬಾ, ಇಂಡೋನೇಷಿಯ, ಕಜಕಿಸ್ತಾನ್, ಲಾವೋಸ್, ಟರ್ಕಿಗಳಿಗೆ ಸರಿಸಮಾನವಾಗಿದೆ. ಇದರ ಮುಂದಿನ ಹಂತವೆ "ವಿಶೇಷ ಆತಂಕದ ದೇಶ" ಅಥವಾ ಸಿಪಿಸಿ. ಮುಂದಿನ ದಿನಗಳಲ್ಲಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ಬಳಿಕ ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯಿದೆಯ ಅಡಿಯಲ್ಲಿ ಭಾರತವನ್ನು ಧಾರ್ಮಿಕ ಸ್ವಾತಂತ್ರ್ಯದ ವ್ಯವಸ್ಥಿತ, ನಿರಂತರ ಹಾಗೂ ಘೋರ ಉಲ್ಲಂಘನೆಗಳಿಗಾಗಿ "ವಿಶೇಷ ಆತಂಕದ 'ದೇಶ'"ಗಳ ಪಟ್ಟಿಗೆ ಸೇರಿಸುವಂತೆ ಅಮೆರಿಕ ಸರಕಾರಕ್ಕೆ ಸಲಹೆ ನೀಡುವ ಬಗ್ಗೆ ನಿರ್ಧಾರಕ್ಕೆ ಬರಲಾಗುವುದು ಎಂದು ಆಯೋಗ ತಿಳಿಸಿದೆ.




'ಪ್ರಶಸ್ತಿಪತ್ರ'ದ ಮುಖ್ಯಾಂಶಗಳು ಗಮನಾರ್ಹವಾಗಿವೆ

- ಮೇಲ್ಜಾತಿಯ ವ್ಯಕ್ತಿಗಳು ಮತ್ತು ಸ್ಥಳೀಯ ರಾಜಕೀಯ ಮುಖಂಡರು ದಲಿತರಿಗೆ ಮಂದಿರ ಪ್ರವೇಶ ಮಾಡಲು ಬಿಟ್ಟಿಲ್ಲ.
- ಕೇಂದ್ರ ಅಥವಾ ರಾಜ್ಯ ಸರಕಾರಗಳು ಮತಾಂತರ, ಜಾನುವಾರು ಹತ್ಯೆ ನಿಷೇಧಿಸುವಂತಹ ಮತ್ತು ಸರಕಾರೇತರ ಸಂಸ್ಥೆಗಳಿಗೆ (ಎನ್‌ಜಿಒ) ವಿದೇಶಗಳಿಂದ ಬರುವ ಅನುದಾನಕ್ಕೆ ಪರಿಮಿತಿ ವಿಧಿಸುವಂತಹ ಹಲವಾರು ಕಾನೂನುಗಳನ್ನು ಜಾರಿಗೆ ತಂದಿವೆ.
- ಭಾರತದ ಸಂವಿಧಾನ ಸಿಖ್ಖರು, ಬೌದ್ಧರು, ಜೈನರನ್ನು ಹಿಂದೂಗಳ ಸಾಲಿಗೆ ಸೇರಿಸುತ್ತದೆ. ಇದು ಧಾರ್ಮಿಕ ಅಥವಾ ನಂಬಿಕೆಯ ಸ್ವಾತಂತ್ರ್ಯದ ಅಂತಾರಾಷ್ಟ್ರೀಯ ಮಾನದಂಡಗಳಿಗೆ ವಿರುದ್ಧವಾಗಿದೆ.
- ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಪದೇಪದೇ ದೊಡ್ಡಮಟ್ಟದ ಕೋಮು ಹಿಂಸಾಚಾರ ಘಟನೆಗಳು ನಡೆದಿವೆ. 2013ರ ಉತ್ತರ ಪ್ರದೇಶ, 2007-08ರ ಒಡಿಷಾ, 2002ರ ಗುಜರಾತ್, 1984ರ ದೆಹಲಿಯ ಘಟನೆಗಳು ಇದೇ ಸಾಲಿಗೆ ಸೇರುತ್ತವೆ.
- 2013ರಲ್ಲಿ ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯಲ್ಲಿ ಸಂಭವಿಸಿದ ಹಿಂದೂ ಮುಸ್ಲಿಂ ಗಲಭೆಯಲ್ಲಿ 40 ಮಂದಿ ಸಾವನ್ನಪ್ಪಿದ್ದಾರೆ, ಕನಿಷ್ಠ ಹನ್ನೆರಡು ಮಹಿಳೆಯರು ಮತ್ತು ಯುವತಿಯರ ಮೇಲೆ ಅತ್ಯಾಚಾರ ನಡೆದಿದೆ, 50,000ಕ್ಕೂ ಅಧಿಕ ಜನ ನಿರಾಶ್ರಿತರಾಗಿದ್ದು ಇವರಲ್ಲನೇಕರು ಇಂದಿನವರೆಗೂ ತಮ್ಮ ಮನೆಗಳಿಗೆ ವಾಪಸ್ಸಾಗಿಲ್ಲ.
- 2007-08ರಲ್ಲಿ ಒಡಿಷಾದಲ್ಲಿ ಹಿಂದೂಗಳು ಮತ್ತು ಕ್ರೈಸ್ತರ ನಡುವೆ ನಡೆದ ಹಿಂಸಾಚಾರದ ಘಟನೆಗಳ ವೇಳೆ ಸುಮಾರು 40 ಮಂದಿ ಹತರಾದರು; ಚರ್ಚುಗಳು, ಮನೆಗಳು ನಾಶವಾದವು; ಸುಮಾರು 10,000 ಜನ ನಿರಾಶ್ರಿತರಾದರು.
- 2002ರಲ್ಲಿ ಗುಜರಾತಿನಲ್ಲಿ ನಡೆದ ಹಿಂದೂ ಮುಸ್ಲಿಂ ಗಲಭೆಗಳಲ್ಲಿ 1200ರಿಂದ 2500 ಮುಸ್ಲಿಮರು ಪ್ರಾಣ ಕಳೆದುಕೊಂಡರು; ಮನೆಗಳು ಧ್ವಂಸವಾದವು; ಸುಮಾರು 1 ಲಕ್ಷ ಜನ ನಿರಾಶ್ರಿತರಾದರು.
- 1984ರಲ್ಲಿ ಸಿಖ್ಖರನ್ನು ಗುರಿಯಾಗಿಸಿ ನಡೆದ ಹಿಂಸಾಕೃತ್ಯಗಳ ವೇಳೆ 3000ಕ್ಕೂ ಅಧಿಕ ಸಿಖ್ಖರು ಅಸು ನೀಗಿದರು.
- ಈ ಘಟನೆಗಳ ತನಿಖೆ ಹಾಗೂ ವಿಚಾರಣೆಗೆಂದು ರಚನೆಯಾದ ಶೀಘ್ರಗತಿ ನ್ಯಾಯಾಲಯಗಳು, ವಿಶೇಷ ತನಿಖಾ ತಂಡಗಳು ಮತ್ತು ಸ್ವತಂತ್ರ ಆಯೋಗಗಳು ಪರಿಣಾಮಕಾರಿಯಾಗಿಲ್ಲ, ಇದಕ್ಕೆ ಅಡ್ಡಿಯಾಗಿರುವುದು ಅವುಗಳ ಸೀಮಿತ ಸಾಮರ್ಥ್ಯ, ಪುರಾತನ ನ್ಯಾಯಾಂಗ, ಅಸಮಂಜಸ ಬಳಕೆ, ರಾಜಕೀಯ ಭ್ರಷ್ಟಾಚಾರ ಮತ್ತು ವಿಶೇಷವಾಗಿ ಪ್ರಭುತ್ವದಲ್ಲಿನ ಮತ್ತು ಸ್ಥಳೀಯ ಧಾರ್ಮಿಕ ಪೂರ್ವಗ್ರಹಗಳು.
- ಭಾರತದ ಮುಸ್ಲಿಂ, ಕ್ರೈಸ್ತ ಮತ್ತು ಸಿಖ್ ಸಮುದಾಯಗಳ ಧಾರ್ಮಿಕ ನಾಯಕರು, ಜನಸಾಮಾನ್ಯರು ಮತ್ತು ಎನ್‌ಜಿಒಗಳ ಅಭಿಪ್ರಾಯದಲ್ಲಿ ದೇಶದಲ್ಲಿ ಇತ್ತೀಚೆಗೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ಕೋಮು ಸೌಹಾರ್ದತೆ ಇಳಿಮುಖವಾಗಲು ಮುಖ್ಯ ಕಾರಣಗಳೆಂದರೆ 2014ರ ಚುನಾವಣೆಗಳ ಸಂದರ್ಭದಲ್ಲಿ ಧರ್ಮಧರ್ಮಗಳ ನಡುವೆ ಅನೈತಿಕತೆ ಉಂಟುಮಾಡುವಂತಹ ಪ್ರಚಾರ ಮತ್ತು ತದನಂತರದ ಬಿಜೆಪಿ ಗೆಲುವು.
- ಧಾರ್ಮಿಕ ಸ್ವಾತಂತ್ರ್ಯದ ಸಮಸ್ಯೆಗಳು ಈ ಹಿಂದೆಯೂ ಇದ್ದುವು ಎಂಬುದನ್ನು ಗುರುತಿಸುವ ಮುಸ್ಲಿಂ, ಕ್ರೈಸ್ತ ಸಿಖ್ ಮತ್ತು ಇತರ ಅಲ್ಪಸಂಖ್ಯಾತ ಸಮುದಾಯಗಳು ಹೇಳುವುದೇನೆಂದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ತಮ್ಮನ್ನು ಗುರಿಯಾಗಿಸಿರುವ ಘಟನೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.
- ಕ್ರೈಸ್ತರ ಎನ್‌ಜಿಒಗಳು ಮತ್ತು ಧಾರ್ಮಿಕ ನಾಯಕರ ಪ್ರಕಾರ "ಧಾರ್ಮಿಕ ಸ್ವಾತಂತ್ರ್ಯ ಕಾಯಿದೆ"ಯನ್ನು (ಇದು ಮತಾಂತರ ತಡೆ ಕಾಯಿದೆ ಎಂದೆ ಜನಜನಿತವಾಗಿದೆ) ಜಾರಿಗೊಳಿಸಿರುವ ರಾಜ್ಯಗಳಲ್ಲಿ ಕ್ರೈಸ್ತರು ವಿಶೇಷ ಅಪಾಯ ಎದುರಿಸುತ್ತಿದ್ದಾರೆ.
- ಭಾರತದ ಸರಕಾರಗಳು 1984ರ ದಂಗೆಗಳಿಗೆ ಸಂಬಂಧಿಸಿದಂತೆ ಕಳೆದ ಹಲವಾರು ವರ್ಷಗಳಿಂದಲೂ ನ್ಯಾಯಕ್ಕಾಗಿ ಹೋರಾಡುತ್ತಿರುವ ಸಿಖ್‌ರನ್ನು ಅಥವಾ ಸಿಖ್ ಧರ್ಮವನ್ನು ಹಿಂದೂ ಧರ್ಮಕ್ಕಿಂತ ಪ್ರತ್ಯೇಕವಾದ ಧರ್ಮವೆಂದು ಪರಿಗಣಿಸಬೇಕೆಂದು ಹೋರಾಡುತ್ತಿರುವ ಸಿಖ್‌ರನ್ನು ಗುರಿಯಾಗಿಸಿವೆ.
- ಮುಸ್ಲಿಂ ಸಮುದಾಯಗಳು ನೀಡಿರುವ ವರದಿಗಳ ಪ್ರಕಾರ 2008 ಮತ್ತು 2010ರಲ್ಲಿ ಭಾರತದಲ್ಲಿ ನಡೆದ ಭಯೋತ್ಪಾದಕ ದಾಳಿಗಳ ನಂತರ ಮುಸ್ಲಿಮರನ್ನು ಅನಗತ್ಯ ಪರಿಶೀಲನೆಗೆ ಒಳಪಡಿಸಲಾಗುತ್ತಿದೆ, ಇಚ್ಛಾನುಸಾರಿಯಾಗಿ ಬಂಧಿಸಲಾಗುತ್ತಿದೆ, ಸೆರೆಮನೆಗೆ ತಳ್ಳಲಾಗುತ್ತಿದೆ. ಆದರೆ ಸರಕಾರ ಇದೆಲ್ಲವೂ ಉಗ್ರವಾದವನ್ನು ಎದುರಿಸಲು ಅವಶ್ಯವೆನ್ನುತ್ತಾ ತನ್ನ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತದೆ.

ಈ ಪದವಿ ಹಾಗೂ 'ಪ್ರಶಸ್ತಿಪತ್ರ'ವನ್ನು ತಿರಸ್ಕರಿಸಿರುವ ಮೋದಿ ಸರ್ಕಾರದ ಕ್ರಮ ಸಹಜವೂ ನಿರೀಕ್ಷಿತವೂ ಆಗಿದೆ. ಆದರೆ ದೇಶದ ವಾಸ್ತವಸ್ಥಿತಿಯನ್ನು ಬಿಂಬಿಸುವಂತಹ ಈ ಅಸಲಿ ಪದವಿ ಇದೆಯಲ್ಲ, ಅದನ್ನು ಮಾತ್ರ ಏನೇ ಕಸರತ್ತು ಮಾಡಿದರೂ ಅಳಿಸಲಾಗದು.

(ಆಧಾರ: ಸಬ್‌ರಂಗ್ ಇಂಡಿಯ ವರದಿ)



14⇦

ಮಾಡುವುದರಿಂದ ದೂರ ಇರಿ ಎಂದು ನಾವು ಹೇಳುತ್ತಿಲ್ಲ. ಎಲ್ಲವನ್ನೂ ದೇವರು ಎಂದು ಕರೆಯುವುದರ ಅರ್ಥ ಏನು? ಹಲ್ಲಿ, ಹಾವು, ಮರ ಅಥವಾ ಯಾವುದನ್ನೇ ಆಗಲಿ ದೇವರೆಂದು ಕರೆಯುವುದು ವಿವೇಕವೆ? ಇಲ್ಲ, ಅದು ಸಂಪೂರ್ಣ ಮೂರ್ಖತನವಾಗುತ್ತದೆ. ಅದರಿಂದ ನಮ್ಮ ಸಮಯ ಎಷ್ಟೊಂದು ಹಾಳಾಗುತ್ತದೆ. ನಮ್ಮ ಹಣ ಎಷ್ಟು ವ್ಯರ್ಥವಾಗುತ್ತದೆ. ನಮ್ಮನ್ನು ಶೂದ್ರರೆಂದು ಮಾತ್ರ ಕರೆಯುತ್ತಾರೆ.

ನಮ್ಮ ಉದ್ದೇಶವನ್ನು ಸಮರ್ಥಿಸುವ ಅಗತ್ಯವಿಲ್ಲ, ನಾವು ಸಮ್ಮೇಳನ ನಡೆಸಿ ಹತ್ತು ದಿನಗಳು ಮಾತ್ರ ಕಳೆದಿವೆ. ನಮ್ಮ ಸಮ್ಮೇಳನಕ್ಕೆ ಲಕ್ಷಾಂತರ ಮಂದಿ ಬಂದಿದ್ದರು. ನೂರು ಮೂವತ್ತು ಮಂದಿ ವರದಿಗಾರರು ಸಮ್ಮೇಳನದಲ್ಲಿ ಇದ್ದರು. ನಮ್ಮ ನಿರ್ಣಯಗಳನ್ನು ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಮರುದಿನವೇ ಅವೆಲ್ಲ ಭಾರತದ ಎಲ್ಲಾ ಕಡೆ ಪ್ರಸಾರವಾಗಿವೆ.

ಸಮ್ಮೇಳನದಲ್ಲಿ ಒಪ್ಪಿಕೊಂಡ ನಿರ್ಣಯಗಳನ್ನು ವಿರೋಧಿಸುವವರು ಇದ್ದರೆ, ಯಾರಾದರೂ ಮುಂದೆ ಬಂದಿದ್ದಾರೆಯೇ? ಎಂದು ಕೇಳಲು ಇಷ್ಟಪಡುತ್ತೇನೆ. ಆ ಬಗ್ಗೆ ಏನಾದರೂ ಸುದ್ದಿ ಯಾವುದಾದರೂ ಪತ್ರಿಕೆಯಲ್ಲಿ ಬಂದಿದೆಯೇ? ನಮ್ಮ ಉದ್ದೇಶಗಳನ್ನು ಟೀಕಿಸಲು ಯಾರೊಬ್ಬರಿಗೂ ಸಾಮರ್ಥ್ಯ ಇಲ್ಲ, ಏಕೆಂದರೆ ನಮ್ಮ ಕೆಲಸ ನಿಷ್ಕಪಟವಾದುದು. ನಮ್ಮ ಉದ್ದೇಶ ಉದಾತ್ತವಾದುದು. ತಾನು ಸೂಳೆಯ ಹಾದರದ ಕೂಸು ಎಂದು ಯಾರು ತಾನೇ ಒಪ್ಪಿಕೊಳ್ಳುತ್ತಾನೆ?

ಸುಮ್ಮನೆ ಕೇವಲ ನಿರ್ಣಯಗಳನ್ನು ಕೈಗೊಳ್ಳುವುದರಿಂದ ನಮ್ಮ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತು. ಹಕ್ಕನ್ನು ವರದಂತೆ ಪಡೆಯಲು ಸಾಧ್ಯವಿಲ್ಲ. ನಮ್ಮ ಬಲವನ್ನು ಪ್ರದರ್ಶಿಸಿ ಪರಿಹಾರವನ್ನು ಬೇಗ ಪಡೆಯೋಣ.

ನಾವು ಚಳವಳಿ ಮಾಡಿದರೆ ಅವರು ನಮ್ಮನ್ನು ಹತ್ತಿಕ್ಕುತ್ತಾರೆಂದು ನಾವು ಬಲ್ಲೆವು. ಸಾವಿರಾರು ಮಂದಿಯನ್ನು ದಸ್ತಗಿರಿ ಮಾಡುತ್ತಾರೆ. ಅದಕ್ಕೆಲ್ಲ ನಾವು ಸಿದ್ಧವಾಗಿರಬೇಕು. ನಮ್ಮ ಹೋರಾಟಕ್ಕಾಗಿ ನಾವು ಎಂಥ ಬೆಲೆ ತೆರಬೇಕು ಎಂದು ನಾವು ತಿಳಿದಿದ್ದೇವೆ. 'ಸೂಳೆ ಮಕ್ಕಳು' ಎಂಬ ಮಾತನ್ನು ನಾವು ಇನ್ನೆಂದೂ ಸಹಿಸುವುದಿಲ್ಲ ಎಂದು ತೋರಿಸಲೇಬೇಕು. ಸರಿಯಾದ ರೀತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಬೇಕೆಂದು ನಾವು ಒತ್ತಾಯಿಸಲೇಬೇಕಾಗಿದೆ. ಹಾಗೆ ಮಾಡಲು ಸರ್ಕಾರ ಸಿದ್ಧವಿಲ್ಲದಿದ್ದರೆ, ನಮಗೂ ಸರ್ಕಾರಕ್ಕೂ ಏನು ಸಂಬಂಧ? ಎಂದು ಕೇಳುತ್ತೇವೆ. ಯಾರ ಸರ್ಕಾರದಲ್ಲಿ ನಾವು ಪ್ರಜೆಗಳಾಗಿದ್ದೇವೆ? ಮುಂದಿನ ಹಂತ ಏನೆಂದರೆ, ಸರ್ಕಾರವನ್ನು ಬಿಟ್ಟು ತೊಲಗಿ ಎಂದು ಬಲವಂತಪಡಿಸುವುದೇ ಆಗಿದೆ. ನಮ್ಮ ಆಡಳಿತಗಾರರು ಸಾವಿರಾರು ಮೈಲಿಗಳಷ್ಟು ದೂರ ಇದ್ದಾರೆ. ಅವರ ಭಾಷೆ ನಮಗೆ ಅರ್ಥವಾಗುವುದಿಲ್ಲ, ನಾವು ಏನು ಹೇಳುತ್ತಿದ್ದೇವೆ ಎಂದು ಅವರು ತಿಳಿದುಕೊಳ್ಳುತ್ತಿಲ್ಲ, ಅವರ ರೀತಿನೀತಿಗಳೇ ಬೇರೆ. ಅವರ ನಾಗರಿಕತೆ ಬೇರೆ. ಅವರ ಸಂಸ್ಕೃತಿನೇ ಬೇರೆ.

(ಈ ಹಂತದಲ್ಲಿ ಪೆರಿಯಾರ್ ಅವರು 'ಅಮ್ಮ, ಅಮ್ಮ' ಎಂದು ನರಳಿದರು. ತಮ್ಮ ಅನಾರೋಗ್ಯದ ನಿಮಿತ್ತ ಭಯಂಕರ ನೋವನ್ನು ತಡೆದುಕೊಂಡು ಭಾಷಣ ಮುಂದುವರೆಸಿದರು.)

ನೀವೇಕೆ ನಮ್ಮ ಆಳ್ವಿಕೆಗಾರರಾಗಿರಬೇಕು? ನೀವು ಸರ್ಕಾರ ಬಿಟ್ಟುಹೋದರೆ ನಮಗೇನು ನಷ್ಟ? ನಮಗೆ ನೈಸರ್ಗಿಕ ಸಂಪತ್ತಿದೆ – ಬೆಟ್ಟಗಳು, ನದಿಗಳು, ಅರಣ್ಯಗಳು, ಎಲ್ಲಾ ಸಂಪತ್ತಿದೆ. ನೀವು ನಮಗೇನು ಸಹಾಯ ಮಾಡುತ್ತಿದ್ದೀರಿ? ಸಂವಿಧಾನವನ್ನು ತಿದ್ದುಪಡಿ ಮಾಡಿ ಎಂದು ನಾವು ಕೇಳುತ್ತಿದ್ದೇವೆ ಇಲ್ಲದಿದ್ದರೆ ಬಿಟ್ಟು ಹೊರಡಿ. ಯಾವ ರೀತಿಯಲ್ಲಿ ನಮ್ಮ ಒತ್ತಾಯ ಅನುಚಿತವಾಗಿದೆ? ನಾವು ಸರ್ಕಾರದ ವಿರುದ್ಧ ಇಲ್ಲದಿದ್ದರೆ ನಮ್ಮನ್ನು ಸರ್ಕಾರದ ದ್ರೋಹಿಗಳು ಎಂದು ನಿಂದಿಸುವುದು ತಪ್ಪು.

ಇದೇ ತಿಂಗಳ 25 ನೇ ತಾರೀಖು ನಾವು ಚಳವಳಿಯನ್ನು ಶುರುಮಾಡುತ್ತೇವೆ. ನೀವೆಲ್ಲ ಅಪಾರ ಸಂಖ್ಯೆಯಲ್ಲಿ ಭಾಗ ವಹಿಸಬೇಕೆಂದು ನಿಮ್ಮಲಿ ನಾನು ಮನವಿ ಮಾಡುತ್ತಿದ್ದೇನೆ. ಹಿರಿಯರು, ಮಹಿಳೆಯರು ಚಳವಳಿ ಮಾಡಲು ಮುಂದೆ ಬರಬೇಕು. ಅಂದು ನಾವು ಸಂವಿಧಾನವನ್ನು ಸುಡುತ್ತೇವೆ. ನಮ್ಮ ಹೋರಾಟ ಶಾಂತಿಯುತವಾಗಿ ಶಿಸ್ತುಬದ್ಧವಾಗಿರಬೇಕು. ವ್ಯವಸ್ಥಿತ ರೀತಿಯಲ್ಲಿ ನಾವು ಬಹಳ ಕೆಲಸ ಮಾಡಬೇಕಾಗಿದೆ. ಯಾವುದೇ ತರದ ಹಿಂಸೆಗೆ ನಾವು ಅವಕಾಶ ಕೊಡಬಾರದು. ನಾವು ದಬ್ಬಾಳಿಕೆಯನ್ನು ಎದುರಿಸಬೇಕು. ಪೊಲೀಸರು ಲಾಠಿ ಏಟು ಕೊಡಬಹುದು. ಅದನ್ನು ನಾವು ಸಹಿಸಿಕೊಳ್ಳಬೇಕು. ಹಿಂಸೆಯನ್ನು ಬಳಸಲು ನಮಗೇನು ಅಗತ್ಯ ಇದೆ? ನಾವು ಯಾರ ವಿರುದ್ಧ ಹೋರಾಡುತ್ತಿದ್ದೇವೆ? ಈ ಸರ್ಕಾರದಲ್ಲಿ ಸಂವಿಧಾನದ ಅಡಿಯಲ್ಲಿ ನಾವು ಪ್ರಜೆಗಳಾಗಿ ಉಳಿಯಬೇಕಾದರೆ, ಸಂವಿಧಾನವನ್ನು ತಿದ್ದುಪಡಿ ಮಾಡಲು ಸರ್ಕಾರ ಮುಂದೆ ಬರಬೇಕು ಎಂದು ಸ್ಪಷ್ಟಪಡಿಸೋಣ. ಈ ಸರ್ಕಾರದ ಕೆಳಗೆ ನಾವು ಸೂಳೆಯ ಮಕ್ಕಳೆಂದು ಇನ್ನು ಇರಲು ಸಾಧ್ಯವೇ? ಇಲ್ಲ ಎಂದು ಹೇಳುತ್ತಿದ್ದೇವೆ. ಅದಕ್ಕಾಗಿ ನಾವು ಸಂವಿಧಾನವನ್ನು ಸುಡಬೇಕೆಂದು ನಿರ್ಧರಿಸಿದ್ದೇವೆ. ನಾನು ಈಗಾಗಲೇ ಸಂವಿಧಾನವನ್ನು ಸುಟ್ಟಿದ್ದೇನೆ. ಸರಿ. ಸಂದರ್ಭಕ್ಕೆ ತಕ್ಕ ಯೋಗ್ಯತೆಯನ್ನು ತೋರಿಸಿ. ಮತ್ತೆ ಸಂವಿಧಾನವನ್ನು ಸುಟ್ಟು ಹಾಕೋಣ. ನೀವೆಲ್ಲಾ ಚೆನ್ನಾಗಿ ಸಿದ್ಧತೆ ಮಾಡಿಕೊಂಡು ಚಳವಳಿಯಲ್ಲಿ ಭಾಗವಹಿಸಿ

■ ಅನುವಾದ: ಕೆ.ಎಸ್. ಭಗವಾನ್

ಸ್ವಾತಂತ್ರ್ಯದ ಲಾಡು ಉಂಡೆಗಳು

ಏಳನೆಯ ತರಗತಿಯ ಅಸ್ಲಾಂ ಇಂದು ಸ್ಕೌಟ್ ಸಮವಸ್ತ್ರ ಧರಿಸಿಕೊಂಡು ಲಗುಬಗೆಯಿಂದಿದ್ದಾನೆ. ತೆಳಗೆ ಗಾಳಿಗೆ ಹಾರಿಹೋಗುವಂತಿರುವ ಅಸ್ಲಾಂಗೆ ಸರಿಹೊಂದುವ ಅಳತೆಯ ಸಮವಸ್ತ್ರ ಸಿಗಲೇ ಇಲ್ಲ. ಅಸ್ಲಾಂ ಮತ್ತು ಅವನ ಡ್ರಿಲ್ ಮಾಸ್ಟರ್ ಆದ ಬಾಲಾಜಿಯವರು ಹುಡುಹುಡುಕಿ ಸೋತರು. ಸರ್ಕಾರ ಒದಗಿಸಿದ್ದ 30-40 ಜೊತೆ ಬಟ್ಟೆಯಲ್ಲಿ ಅಸ್ಲಾಂಗೆ ಸರಿಹೊಂದುವ ಅಳತೆಯದ್ದು ಒಂದೂ ಇರಲಿಲ್ಲ. ಇದ್ದುದರಲ್ಲೇ ಸಣ್ಣದು ಹಾಕಿಕೊಂಡರೂ ಜೋಲಾಮಾಲಾ ಆಗುತ್ತಿತ್ತು. ಒಂದು ವಾರದ ಮುಂಚೆಯೇ ಮನೆಗೆ ತೆಗೆದುಕೊಂಡು ಹೋಗಿ ಒಗೆದು ಗಂಜಿ ಹಾಕಿ ಒಣಗಿಸಿಕೊಂಡ. ಇಸ್ತ್ರಿಪೆಟ್ಟಿಗೆ ಇದ್ದ ಸ್ನೇಹಿತರ ಮನೆಗೆ ಹೋಗಿ ಇಸ್ತ್ರಿ ಮಾಡಿಕೊಂಡು ಆಗಸ್ಟ್ 15 ರ ಹಬ್ಬಕ್ಕೆ ಸಿದ್ಧ ಮಾಡಿಟ್ಟುಕೊಂಡಿದ್ದ.

ಅಂದು ಆಗಸ್ಟ್ 15ರ ಬೆಳಗ್ಗೆ 5 ಗಂಟೆಗೆ ಎದ್ದವನೇ ಸ್ನಾನ ಮಾಡಿ ಸ್ವಚ್ಛವಾಗಿ ಸ್ಕೌಟ್ ಡ್ರೆಸ್ ಹಾಕಿಕೊಂಡ. ಬೂಟುಗಳು ಸ್ವಲ್ಪ ಸಡಿಲವಿದ್ದವು. ಹಳೆಯ ಬಟ್ಟೆಯ ತುಂಡುಗಳನ್ನು ಬೂಟಿನ ಒಳಗಡೆ ತುರುಕಿಕೊಂಡ. ಒಳಗೆ ತುರುಕಿದ್ದ ಬಟ್ಟೆ ತುಂಡುಗಳು ಕಾಲ್ಬೆರಳುಗಳಿಗೆ ಒತ್ತುತ್ತವೆಯೋ ಎಂದು ಪರೀಕ್ಷಿಸಿಕೊಂಡ. ಸರಿಯಾಗಿದೆ ಎಂದು ಖಚಿತಪಡಿಸಿಕೊಳ್ಳುವಷ್ಟರಲ್ಲಿ ನಿಕ್ಕರಿನ ಮುಂಭಾಗದಲ್ಲಿನ 'ಬುಲ್ಲಿಯ' ಹತ್ತಿರದ ಗುಂಡಿಗಳೊಂದೂ ಇಲ್ಲದಿರುವುದು ಗಮನಿಸಿ ಪೂರಾ ಗಲಿಬಿಲಿಗೊಂಡ. ನಿಕ್ಕರಿನ ಒಳಗಡೆ ಪಟಾಪಟ ಚಡ್ಡಿ ಇರಲಿಲ್ಲವಾಗಿ ಏನಾದರೂ ಹೆಚ್ಚುಕಡಿಮೆಯಾದರೆ ಬುಲ್ಲಿಯು ಓತಿಕ್ಯಾತದಂತೆ ನಿಕ್ಕರಿನ ಹೊರಗೆ ಇಣುಕಿ ಹಾಕುವುದು ಗ್ಯಾರಂಟಿ ಇತ್ತು. ಅದರಲ್ಲಿಯೂ ಅವರ ಮುಖ್ಯೋಪಾಧ್ಯಾಯರಂತೂ ಸಾಬರ ಹುಡುಗರಿಗೆಲ್ಲ 'ಎಬಿಸಿ' ಎಂದು ಕರೆಯುತ್ತಿದ್ದರು. ಎಬಿಸಿ ಅಂದರೆ 'ಆದ ಬುಲ್ಲಿ ಕಟ್' ಎಂದು ಹುಡುಗಿಯರ ಎದುರು ಕರೆದಾಗ ಸಾಬರ ಹುಡುಗರಿಗೆ ನಾಚಿಕೆಯೂ, ಅವಮಾನವೂ ಆಗುತ್ತಿತ್ತು. ನಿಕ್ಕರಿಗೆ ಹಾಕಿಕೊಳ್ಳಲು ಪಿನ್ನು ಹುಡುಕುತ್ತ ಮನೆಯೆಲ್ಲಾ ಬೆದಕಿದ. ಸಿಗಲಿಲ್ಲ. ಅವನ ಅಮ್ಮ ಅಷ್ಟು ಹೊತ್ತಿಗೇ ಎದ್ದು ತಹಸೀಲ್ದಾರ್ ಮನೆಗೆ ಕಸಮುಸುರೆ ಕೆಲಸಕ್ಕೆ ಹೋಗಿದ್ದಳು. ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಅಂದು ಅವರ ಮನೆಗೆ ಶಾಸಕರಷ್ಟೇ ಅಲ್ಲದೆ ಅನೇಕ ದೊಡ್ಡ ದೊಡ್ಡ ಮನುಷ್ಯರೆಲ್ಲ ಬರುವವರಿದ್ದರು. ಕೆಲಸ ಮುಗಿಸಿಕೊಂಡು ವಾಪಸ್ಸು ಬರುವ ಸಮಯ ಹೇಳಲು ಬರುವುದಿಲ್ಲ ಎಂದು ಅಮ್ಮ ಅಮೀನಮ್ಮ ತಿಳಿಸಿದ್ದಳು.

ಅಸ್ಲಾಮನ ತಂದೆ ಗಾಡಿ ರಹಮಾನ್ ಸಾಬ್ ಹಾಸಿಗೆ ಹಿಡಿದು ಹಲವು ತಿಂಗಳುಗಳೇ ಆಗಿದ್ದವು. ಒಮ್ಮೆ ಬಸ್ ನಿಲ್ದಾಣದಲ್ಲಿ ಲಗೇಜನ್ನು ಬಸ್ ಮೇಲಕ್ಕೆ ಹಾಕುವಾಗ ಆಕಸ್ಮಾತ್ ಕಾಲುಜಾರಿ ಕೆಳಗೆ ಬಿದ್ದು ಬೆನ್ನುಹುರಿಗೆ ಏಟಾಗಿ ಹಾಸಿಗೆ ಹಿಡಿದಿದ್ದ ಅವರು ಅದುವರೆಗೆ ಕೂಡಿಟ್ಟಿದ್ದ ಅಲ್ಪಸ್ವಲ್ಪ ದುಡ್ಡು ಆಸ್ಪತ್ರೆ ಮತ್ತು ವೈದ್ಯರ ಪಾಲಾಯಿತು. ಮನೆ ನಡೆಯಲು ಅಮೀನಮ್ಮ ಕೆಲಸಕ್ಕೆ ಹೋಗಬೇಕಾಯಿತು. ತಂದೆಯನ್ನು ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತಿದ್ದ ಅಸ್ಲಾಂ ಏಳನೆ ತರಗತಿಯ ಅಂತಿಮ ಪರೀಕ್ಷೆಗಳಿಗೆ ಹಾಜರಾಗಲಿಲ್ಲ. ಪುನಃ ಇನ್ನೊಮ್ಮೆ ಅಸ್ಲಾಂ ಏಳನೆಯ ತರಗತಿಗೆ ಹಾಜರಾಗಬೇಕಾಯಿತು. ರಹಮಾನ್ ಸಾಬನ ಎತ್ತು, ಗಾಡಿಗಳೂ ಸಹ ಆಸ್ಪತ್ರೆ, ಔಷಧದ ಅಂಗಡಿ ಮತ್ತು ವೈದ್ಯರ ಬಿಲ್ಲು ಚುಕ್ತಾ ಮಾಡಲು ವಿಲೇವಾರಿಯಾಗಿಹೋದವು. ಇತ್ತೀಚೆಗೆ ಒಂದೆರಡು ತಿಂಗಳಿಂದಷ್ಟೇ ರಹಮಾನ್ ಸಾಬ್ ಕೈಯ್ಯಲ್ಲಿ ಕೋಲು ಹಿಡಿದು ಮನೆಯ ಒಳಗೆ ಹೊರಗೆ ಓಡಾಡತೊಡಗಿದ್ದ.

ಇನ್ನು ಮನೆಯಲ್ಲಿದ್ದ ತಂಗಿ ಶಂಷಾದಳನ್ನು ಎಬ್ಬಿಸಿ ಪಿನ್ನಿಗಾಗಿ ಕೇಳಿದ. ನಿದ್ದೆಗಣ್ಣಿನಲ್ಲಿದ್ದ ಅವಳು ಉಟ್ಟಿದ್ದ ಫ್ರಾಕಿಗೆ ಹಾಕಿದ್ದ ಪಿನ್ನನ್ನು ತೆಗೆದುಕೊಟ್ಟಳು. ಅಸ್ಲಾಂ ಬೇರೆ ಕಡೆ ತಿರುಗಿ ಮುಂದಕ್ಕೆ ಬಾಗಿ ಎಚ್ಚರಿಕೆಯಿಂದ ಪಿನ್ನನ್ನು ಹಾಕಿಕೊಳ್ಳತೊಡಗಿದ. ಪಿನ್ನನ್ನು ತೆಗೆದಿದ್ದರಿಂದ ಹಿಂಜಿಹೋಗಿದ್ದ ಫ್ರಾಕಿನ ಮುಂಭಾಗ ಹಿಡಿದುಕೊಂಡು ಶಂಷಾದಳ ಹೊಟ್ಟೆ ಕಾಣಿಸತೊಡಗಿತು. ಪಾತ್ರೆಯಲ್ಲಿ ನಾಲ್ಕು ರೊಟ್ಟಿ ಮತ್ತು ಚಟ್ನಿ ಇರುವುದಾಗಿ ತಿಳಿಸಿ ತಂದೆ ಎದ್ದ ಮೇಲೆ ಇಬ್ಬರೂ ತಿನ್ನಲು ಅಸ್ಲಾಂ ಶಂಷಾದಳಿಗೆ ಸೂಚಿಸಿದ.

ತಡವಾಗುತ್ತಿದೆ ಎನಿಸತೊಡಗಿ ಅಸ್ಲಾಂ ಏಳು ಗಂಟೆಗೆಲ್ಲ ಶಾಲೆಗೆ ದೌಡಾಯಿಸಿಕೊಂಡು ಬಂದ. ಅದೇ ಹೊತ್ತಿಗೆ ಡ್ರಿಲ್ ಮಾಸ್ಟರ್ ಬಾಲಾಜಿಯವರು ಬಂದರು. ಅಟೆಂಡರ್ ಶಾಲಾ ಆವರಣದ ಕಸ ಗುಡಿಸುವಷ್ಟರ ಹೊತ್ತಿಗೆ ಅಸ್ಲಾಂ ಮತ್ತು ಮಿತ್ರರು ಸೇರಿಕೊಂಡು ನೀರು ಚಿಮುಕಿಸಿದರು. ಶಾಲೆಯಲ್ಲಿದ್ದ ಗಾಂಧಿ, ನೆಹರು ಅವರು ಫೋಟೋಗಳನ್ನು ಸ್ವಚ್ಛ ಮಾಡಿ ಧ್ವಜಸ್ತಂಭದ ಬಳಿ ಟೇಬಲ್ ಹಾಕಿ ಜೋಡಿಸಿದರು. ಎಲ್ಲಾ ಉಪಾಧ್ಯಾಯರು ಕುಳಿತುಕೊಳ್ಳಲು ಕುರ್ಚಿಗಳನ್ನು ಹಾಕಿ, ಧ್ವಜ, ಧ್ವಜಸ್ತಂಭಗಳನ್ನು ಸಿದ್ಧಪಡಿಸಿದರು. ಅಷ್ಟುಹೊತ್ತಿಗೆ ಶಾಲೆಯ ಎಲ್ಲ ಉಪಾಧ್ಯಾಯರು ಆಗಮಿಸಿದ್ದರು. ಶಾಲೆಯ ಆವರಣವೆಲ್ಲ ಸಗು, ಕೇಕೆ, ಗದ್ದಲಗಳಿಂದ ತುಂಬಿಹೋಯಿತು.

ಬಾಲಾಜಿ ಮೇಷ್ಟ್ರು ದೊಡ್ಡ ಡ್ರಮ್ ಮತ್ತು ಅಸ್ಲಾಂ ಸಣ್ಣ ಡ್ರಮ್ಮನ್ನು ಹೆಗಲಿಗೇರಿಸಿಕೊಂಡು ಬಂದರು. ಇನ್ನೊಬ್ಬ ವಿದ್ಯಾರ್ಥಿಯಾದ ವರದರಾಜು ಬ್ಯೂಗಲ್ ಹಿಡಿದುಕೊಂಡು ಬಂದ. ಬಾಲಾಜಿ ಮೇಷ್ಟ್ರು 'ಸಾವಧಾನ್ ಕರೇಗ-ಸಾವಧಾನ್', 'ವಿಶ್ರಮ್ ಕರೇಗ ವೀ..ಶ್ರಮ್' ಎಂದು ವಿದ್ಯಾರ್ಥಿಗಳಿಗೆ ಆದೇಶ ಕೊಡತೊಡಗಿದರು. ಸ್ಕೌಟ್‌ನವರು, ಸೇವಾದಳದವರು, ಇನ್ನಿತರೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಬೇರೆ ಬೇರೆ ಕಡೆ ಶಿಸ್ತುಬದ್ಧವಾಗಿ ನಿಂತು 'ಏಕ್' 'ಏಕ್ ದೋ ತೀನ್ ಏಕ್' ಎನ್ನುತ್ತ ಮತ್ತು 'ಲೆಫ್ಟ್ ರೈಟ್' 'ಲೆಫ್ಟ್ ಲೆಫ್ಟ್ ಲೆಫ್ಟ್ ರೈಟ್ ಲೆಫ್ಟ್' ಮುಂತಾಗಿ ಹುರುಪಿನಿಂದ ಉಚ್ಚರಿಸುತ್ತ ಆದೇಶಗಳನ್ನು ಪಾಲಿಸತೊಡಗಿದರು. ಬಾಲಾಜಿಯವರು ದೊಡ್ಡ ಡ್ರಮ್‌ನಲ್ಲಿ 'ಢಂ ಢಂ ಢಂ' ಎಂದು ಲಯಬದ್ಧವಾಗಿ ಬಾರಿಸಲು ಸಣ್ಣ ಡ್ರಂ ಅನ್ನು ಹೆಗಲಿಗೇರಿಸಿದ ಅಸ್ಲಾಮನು ಡ್ರಮ್ಮಿನ ಎರಡು ಕೋಲುಗಳನ್ನು ಸೊಗಸಾಗಿಯೂ, ಬೆಡಗಿನಿಂದಲೂ, ಜಂಭದಿಂದಲೂ ಡ್ರಂ ಮೇಲೆ ಆಡಿಸುತ್ತಾ ದೊಡ್ಡ ಡ್ರಮ್ಮಿನ ಸದ್ದಿನೊಂದಿಗೆ ಅತ್ಯುತ್ತಮವಾಗಿ ಹೊಂದಿಕೊಳ್ಳುವಂತೆ ಬಾರಿಸಿದನು. ಅದಕ್ಕೆ ಸರಿಯಾಗಿ ವರದರಾಜನು ಬ್ಯೂಗಲ್‌ನ್ನು 'ತು ತ್ತು ತೂ' ಎಂದು ಊದಿದೊಡನೆ ಇದ್ದಕ್ಕಿದ್ದಂತೆ ಅಲ್ಲೊಂದು ಮಾಯಾಲೋಕವೇ ಸೃಷ್ಟಿಯಾಯಿತು.



ಆಫೀಸ್ ರೂಮಲ್ಲಿ ಅದೂಇದೂ ಮಾತನಾಡುತ್ತಿದ್ದ ಎಲ್ಲ ಮೇಷ್ಟ್ರುಗಳು ಈ ರೋಮಾಂಚನಗೊಳಿಸುವ ಬ್ಯಾಂಡ್‌ಸೆಟ್ ಶಬ್ದ ಕೇಳಿದೊಡನೆ ಮಾತು ನಿಲ್ಲಿಸಿ ಧ್ವಜಸ್ತಂಭದ ಬಳಿ ಬಂದರು. ಶಾಲೆಯ ಆವರಣದಲ್ಲಿ ಶಿಸ್ತುಬದ್ಧವಾಗಿ ವರ್ತಿಸುತ್ತಿದ್ದ ವಿದ್ಯಾರ್ಥಿಗಳು, ಮಾಯಾಲೋಕವನ್ನು ಸೃಷ್ಟಿಸಿದ್ದ ಬ್ಯಾಂಡ್‌ಸೆಟ್ ನಿನಾದ ಅಲ್ಲಿದ್ದವರನ್ನೆಲ್ಲ ಮಂತ್ರಮುಗ್ಧರನ್ನಾಗಿಸಿತು.

ಶಾಲೆಯ ಮುಖ್ಯೋಪಾಧ್ಯಾಯರು ಧ್ವಜಾರೋಹಣ ಮಾಡಿದರು. ವಿದ್ಯಾರ್ಥಿ ಮಾಸ್ತರರುಗಳೆಲ್ಲ ಧ್ವಜಕ್ಕೆ ನಮಸ್ಕರಿಸಿದರು. ವಿದ್ಯಾರ್ಥಿಗಳೆಲ್ಲ ಏಕಾಗ್ರಚಿತ್ತರಾಗಿ ಧ್ವಜವನ್ನು ದೃಷ್ಟಿಸುತ್ತ ಏಕಕಾಲಕ್ಕೆ ನಮಸ್ಕರಿಸುತ್ತ ಎಳೆಯ ಬಿಸಿಲಿನಲ್ಲಿ ನಳನಳಿಸುತ್ತಿದ್ದರು.

ಕತೆ

ಇಂಗ್ಲಿಷ್ ಉಪಾಧ್ಯಾಯರೂ, ಅದ್ಭುತ ಮಾತುಗಾರರೂ ಆಗಿದ್ದ ಸುಭದ್ರಾ ದೇವಿ ಮೇಡಂರು ಎಲ್ಲರನ್ನುದ್ದೇಶಿಸಿ ಭಾರತ ದೇಶದ ಹಿರಿಮೆಗರಿಮೆಗಳನ್ನು, ಪ್ರಜೆಗಳ ಕರ್ತವ್ಯಗಳನ್ನು ಹಾಗೂ ದೇಶದಲ್ಲಿ ತಾಂಡವವಾಡುತ್ತಿರುವ ಬಡತನ, ನಿರುದ್ಯೋಗಗಳನ್ನು ಮನಮುಟ್ಟುವಂತೆ ವರ್ಣಿಸಿದಾಗ, ಅನೇಕ ವಿದ್ಯಾರ್ಥಿಗಳ ಕಣ್ಣಲ್ಲಿ ನೀರಾಡಿದವು. ಮುಕ್ತ ಮನಸ್ಸಿನವನಾಗಿದ್ದ ಅಸ್ಲಾಂ ಸುಲಭವಾಗಿ ಭಾವಾವೇಶಕ್ಕೊಳಗಾಗುತ್ತಿದ್ದ. ಯಾವುದೇ ಆಟದ ಸ್ಪರ್ಧೆಯಲ್ಲಿ ತನ್ನ ಶಾಲೆಯವರು ಸೋತರೆ ಕಣ್ಣೀರು ಹಾಕುತ್ತಿದ್ದ ಅಸ್ಲಾಂ ಗೆದ್ದಾಗಲೂ ಕಣ್ಣೀರು ತುಂಬಿಕೊಂಡು ಗದ್ಗದಿಸುತ್ತಿದ್ದ. ಈಗಲೂ ಅಷ್ಟೆ. ಸುಭದ್ರಾ ಮೇಡಂ ಮಾತನಾಡುತ್ತಿದ್ದಾಗ ಅವರು ಬಿಗಿಮುಷ್ಟಿ ಮಾಡಿ ಮಾತನಾಡುವುದು, ಧ್ವನಿಯ ಆರ್ದ್ರತೆ ಮತ್ತು ಏರಿಳಿತಗಳಿಗೆ ಪಕ್ಕಾಗಿ ಹೊತ್ತುಕೊಂಡಿದ್ದ ಡ್ರಮ್ಮನ್ನು ಕೆಳಗಿಳಿಸಿ ತೊಟ್ಟಿದ್ದ ಸ್ಕೌಟ್ ಶರ್ಟಿನಲ್ಲಿ ಕಣ್ಣೊರೆಸಿಕೊಂಡು ಬಿಕ್ಕಳಿಸಿದ. ಸುಭದ್ರ ಮೇಡಂ ತನ್ನ ಪ್ರೀತಿಯ ಶಿಷ್ಯನಾದ ಅಸ್ಲಾಮನ ತಲೆ ನೇವರಿಸಿದರು. ಅವನು ಹಾಗೇ ಕೆಳಕ್ಕೆ ಬಾಗಿ ಸುಭದ್ರ ಮೇಡಮ್ಮರ ಕಾಲುಮುಟ್ಟಿ ನಮಸ್ಕರಿಸಿದ. ಎಲ್ಲ ಮಕ್ಕಳ ಮನಸ್ಸಿನಲ್ಲಿ ಒಂದು ದೃಢ ನಿಶ್ಚಯ ಹರಳುಗಟ್ಟತೊಡಗಿತು. ಅದು ದೇಶದ ಒಳಿತಿಗಾಗಿ ದುಡಿಯುವ ನಿಶ್ಚಯವಾಗಿತ್ತು.

ಶಾಲಾ ಆವರಣದಿಂದ ಹೊರಟ ಎಲ್ಲರೂ ಮುಂದೆ ನಡೆದು ಮುನಿಸಿಪಾಲಿಟಿ ಮೈದಾನಕ್ಕೆ ಬಂದು ಸೇರಿದರು. ದಾರಿಯುದ್ದಕ್ಕೂ ಅಸ್ಲಾಂ 'ಜೈ ಬೋಲೋ ಭಾರತ್ ಮಾತಾಕಿ' ಎಂದಕೂಡಲೆ ಮಕ್ಕಳೆಲ್ಲ 'ಜೈ' ಎನ್ನುತ್ತಿದ್ದರು. ಅಸ್ಲಾಂ 'ಶಾಂತಿ' ಎಂದು ಕೂಗಿದರೆ ಮಕ್ಕಳೆಲ್ಲ 'ಶಿಸ್ತು' ಎಂದು ಕೂಗುತ್ತಿದ್ದರು. ಅಸ್ಲಾಂ 'ಏನೇ ಬರಲಿ' ಎಂದ ಕೂಡಲೆ ಮಕ್ಕಳೆಲ್ಲ 'ಒಗ್ಗಟ್ಟಿರಲಿ' ಎನ್ನುತ್ತಿದ್ದರು. ಜನಸಾಮಾನ್ಯರು ಗುಂಪುಗುಂಪಾಗಿ ಬಂದು ವಿದ್ಯಾರ್ಥಿಗಳನ್ನು ನೋಡಿ ಕಣ್ತುಂಬಿಕೊಂಡರು. ಬಸುರಿ, ಬಾಣಂತಿಯರು, ಕೋಲೂರುತ್ತ ನಡೆಯುತ್ತಿದ್ದ ಅಜ್ಜಅಜ್ಜಿಯರು, ಕಾಯಿಲೆಯಾಗಿ ಮಲಗಿದ್ದ ರೋಗಿಗಳು ಮತ್ತು ಹಾಲು ಕುಡಿವ ಮಕ್ಕಳೂ ಸಹ ಕ್ಷಣಹೊತ್ತು ಹಾಲು ಕುಡಿಯುವುದ ಬಿಟ್ಟು ವಿದ್ಯಾರ್ಥಿಗಳೆಡೆ ದೃಷ್ಟಿ ನೆಟ್ಟು ಹೂನಗೆ ನಕ್ಕವು. ಪ್ರತಿಯೊಬ್ಬರಿಗೂ ಸಂತೋಷದಲ್ಲಿ ಹಿಗ್ಗಿದಂತಾಗಿತ್ತು, ಆನಂದದಲ್ಲಿ ತೇಲಿದಂತಾಗಿತ್ತು, ಕ್ಷಣಹೊತ್ತು ಈ ಲೋಕವ ಮರೆತಂತಾಗಿತ್ತು. ಅಂಗಡಿಯೊಂದರ ಬಳಿ ಕುಳಿತಿದ್ದ ಮಹಲಿಂಗಪ್ಪ 'ಗಂಟಲು ಒಣಗಲ್ವೇನೋ ಅಸ್ಲಾಮ?' ಎಂದು ಪ್ರಶ್ನಿಸಿದ. 'ಇಲ್ಲವೇ ಇಲ್ಲ ಮಹಲಿಂಗಪ್ಪ ಮಾಮ' ಎಂದ ಅಸ್ಲಾಂ. ಮಹಲಿಂಗಪ್ಪ ಸಹ ಆ ಊರಿನ ಬಸ್‌ಸ್ಟಾಂಡಿನಲ್ಲಿ ಬಾಡಿಗೆಗೆ ಎತ್ತಿನ ಗಾಡಿ ಇಟ್ಟುಕೊಂಡು ರಹಮಾನ್ ಸಾಬನ ಸ್ನೇಹಿತನೂ, ಆಪ್ತನೂ ಆಗಿದ್ದ. ರಹಮಾನನಿಗೆ ಒದಗಿದ ದುರ್ದೆಸೆಗೆ ಮರುಗಿದವನೂ ಮತ್ತು ಕಷ್ಟಕಾಲದಲ್ಲಿ ಆ ಮನೆಗೆ ಬೆಂಬಲವಾಗಿ ನಿಂತಿದ್ದವನೂ ಆಗಿದ್ದನು.

ಅಸ್ಲಾಂ 'ಮಹಲಿಂಗ ಮಾಮ, ನೀನು ಬರಲ್ವಾ ಸ್ವಾತಂತ್ರ್ಯ ದಿನಾಚರಣೆಯ ಹಬ್ಬಕ್ಕೆ?' ಎಂದು ಪ್ರಶ್ನಿಸಿದ. 'ಅಸ್ಲಾಮ, ಕೂಲಿ ಮಾಡೋದು ಬಿಟ್ಟು ಆಚರಣೆ ನೋಡ್ತಾ ಕುಂತ್ರೆ ಹೆಂಡ್ತಿಮಕ್ಕಳನ್ನು ಯಾರು ಸಾಕ್ತಾರೆ? ಕೂಲಿ ಮಾಡ್ಬೇಕು, ಕೂಳು ನೋಡ್ಬೇಕು. ಮಗಳ ಮದುವೆಗೆ ದುಡ್ಡು ಜೋಡಿಸ್ತಾ ಇದೀನಿ. ಬರಕಾಗಲ್ಲ' ಎಂದು ಒಂದು ಬೊಗಸೆಯಷ್ಟು ನಿಂಬೆಹುಳಿ ಪೆಪ್ಪರ್‌ಮೆಂಟನ್ನು ಹುಡುಗರಿಗೆ ಹಂಚಿ 'ಹೋಗಿ ಬನ್ನಿ ಒಳ್ಳೆಯದಾಗಲಿ' ಎಂದ. ಬಾಯಲ್ಲಿ ಪೆಪ್ಪರ್‌ಮೆಂಟ್ ಸಿಹಿ ಬಿಡುತ್ತ ನಿಧಾನಕ್ಕೆ ಕರಗುತ್ತಿರಲು ಮಕ್ಕಳು ಮುಂದುವರೆದರು. ಅಲ್ಲಿ ಊರಿನ ಎಲ್ಲ ಶಾಲೆಗಳ ವಿದ್ಯಾರ್ಥಿಗಳು ತಂಡತಂಡವಾಗಿ ಆಗಮಿಸಿದರು. ಹತ್ತಾರು ಶಾಲೆಯ ನೂರಾರು ವಿದ್ಯಾರ್ಥಿಗಳು, ವಿವಿಧ ಸರ್ಕಾರಿ ಕಚೇರಿಗಳ ಸಿಬ್ಬಂದಿ, ಪೊಲೀಸರು, ಸಾರ್ವಜನಿಕರಿಂದ ಮೈದಾನ ತುಂಬಿ ಗಿಟಗಿರಿದಿತ್ತು, ಶಾಸಕರು ಧ್ವಜಾರೋಹಣ ಮಾಡಿದರು. ವಿವಿಧ ಶಾಲಾಮಕ್ಕಳಿಂದ ಲೇಜಿಮ್, ಡಂಬಲ್ಸ್, ನೃತ್ಯ ಕೋಲಾಟ ಮುಂತಾದವು ನಡೆದವು. ಕವಾಯಿತು ನಡೆವಾಗ, ವಿದ್ಯಾರ್ಥಿಗಳು ಸಾಲಿನಲ್ಲಿ ನಡೆವಾಗ ಬಾಲಾಜಿ ಮೇಷ್ಟ್ರು ಮತ್ತು ಅಸ್ಲಾಂ ಬ್ಯಾಂಡ್‌ಸೆಟ್ ಬಾರಿಸಿದರು. ವರದರಾಜನು ಬ್ಯೂಗಲ್‌ನ್ನು ಇಡೀ ಊರಿಗೆ ಕೇಳಿಸುವಂತೆ ಊದಿದನು. ಸೂರ್ಯನನ್ನೊಳಗೊಂಡಂತೆ ಇಡೀ ವಿಶ್ವವೇ ತಮ್ಮ ಬ್ಯಾಂಡ್‌ಸೆಟ್ಟಿಗೆ ಅನುಗುಣವಾಗಿ ಹೆಜ್ಜೆಯಿಡುತ್ತಿರುವಂತೆ ಅನ್ನಿಸಿ ಅಸ್ಲಾಮನಿಗೆ ಹೆಮ್ಮೆಯೆನಿಸಿತು.

ಶಾಸಕರು ಭಾಷಣದಲ್ಲಿ ತಮ್ಮ ಆಡಳಿತಾವಧಿ ಈ ತಾಲ್ಲೂಕಿನ 'ಸುವರ್ಣ ಯುಗ' ಎಂದು ಹೊಗಳಿಕೊಂಡರು. ಇತರೆ ಜನಪ್ರತಿನಿಧಿಗಳು, ತಹಸೀಲ್ದಾರ್, ಪೊಲೀಸ್ ಅಧಿಕಾರಿ ಮುಂತಾದವರು ಮಾತನಾಡಿದರು. ಶಾಸಕರ ಕೃಪಾಕಟಾಕ್ಷಕ್ಕೆ ಹಲ್ಲುಗಿಂಜುತ್ತಾ ನಡುಬಗ್ಗಿಸಿ ಓಡಾಡುತ್ತ ಹೊರಲಾರದಷ್ಟು ಭಾರದ ಹೂಮಾಲೆ ಹಾಕುತ್ತ ಅಧಿಕಾರಿವರ್ಗದವರು ಕಾಲ ಕಳೆದರು.

ಸಮಯ ಹನ್ನೊಂದರ ಮೇಲಾಗಿತ್ತು, ಬಿಸಿಲು ಚುರುಕು ಮುಟ್ಟಿಸುತ್ತಿತ್ತು. ಮೈದಾನದಲ್ಲಿ ವೇದಿಕೆಯ ಮೇಲಷ್ಟೇ ನೆರಳಿದ್ದು, ಬೇರೆಲ್ಲೂ ನೆರಳಿರಲಿಲ್ಲ, ಮಕ್ಕಳೆಲ್ಲರಿಗೆ ಹಸಿವು, ನೀರಡಿಕೆ, ಬಿಸಿಲಿನ ಝಳಗಳು ಪೀಡಿಸತೊಡಗಿದವು. ಕಾರ್ಯಕ್ರಮದ ಕೊನೆಗೆ ಲಾಡು ಹಂಚಲಾಗುವುದೆಂದು ಈಗಾಗಲೇ ನಾಲ್ಕಾರು ಬಾರಿ ಮೈಕಿನಲ್ಲಿ ಘೋಷಣೆಯಾಗಿತ್ತು, ಮಕ್ಕಳೆಲ್ಲರೂ ಲಾಡುವಿನ ನಿರೀಕ್ಷೆಯಲ್ಲಿ ಕಾದು ಕುಳಿತಿದ್ದರು.

ಅಷ್ಟರಲ್ಲಿ ಶಾಲೆಯ ಅಟೆಂಡರ್‌ಗೆ ಡ್ರಂ ಮತ್ತು ಬ್ಯೂಗಲ್‌ಗಳನ್ನೆಲ್ಲ ಕೊಟ್ಟು ಶಾಲೆಯಲ್ಲಿಡಲು ತಿಳಿಸುತ್ತಿದ್ದ ಅಸ್ಲಾಂನ ತಂಗಿ ಶಂಷಾದಳು ದೂರದಲ್ಲಿ ಕಾಣಿಸಿಕೊಂಡಳು. ಓಡಿಹೋಗಿ ಅವಳ ಕೈ ಹಿಡಿದುಕೊಂಡ ಅಸ್ಲಾಮನಿಗೆ ಶಂಷಾದಳು ಪ್ರಶ್ನಿಸಿದಳು: 'ಲಾಡು ಅಂದ್ರೆ ಏನಣ್ಣ?' 'ಲಾಡು ಅಂದ್ರೆ ಸಿಹಿ ತಿಂಡಿ' ಎಂದ ಅಸ್ಲಾಮನಿಗೆ ಬೆಳಗ್ಗೆಯಿಂದ ತಾನು ಉಪವಾಸ ಇರುವುದು ನೆನಪಿಗೆ ಬಂತು. ಶಂಷಾದಳು ಸಹ ಮನೆಯಲ್ಲಿ ರೊಟ್ಟಿ ತಿಂದಿರಲಿಲ್ಲ. ತಾನು ಹೇಗಾದರೂ ಕಷ್ಟಪಟ್ಟು ಉಪವಾಸವಿರಬಲ್ಲೆ. ಆದರೆ ಐದಾರು ವರ್ಷದ ಪುಟ್ಟ ಶಂಷಾದಳು ಹೇಗೆ ಉಪವಾಸವಿರುವಳೋ ಎಂದು ಸಂಕಟಪಟ್ಟ. ತನ್ನ ತಂದೆ ತಾಯಿಯ ಗತಿಯೇನಾಗಿದೆಯೋ? ತಂದೆ ಮನೆಯಲ್ಲಿ ರೊಟ್ಟಿ ತಿಂದಿರಬಹುದೇ? ಕಸಮುಸುರೆಯಲ್ಲಿ ಮುಳುಗಿರುವ ತಾಯಿಗೆ ಊಟ ತಿಂಡಿ ದಕ್ಕಿರಬಹುದೇ? ಅಪಘಾತಕ್ಕೆ ಮುಂಚೆ ಶಂಷಾದ್ ಮತ್ತು ತನ್ನನ್ನು ಹೊತ್ತುಕೊಂಡು ತಿರುಗುತ್ತಿದ್ದ ಬಲಶಾಲಿ ತಂದೆಯ ಚಿತ್ರ ಮನಸ್ಸಿನಲ್ಲಿ ಮೂಡಿ ಖಿನ್ನನಾದ ಅಸ್ಲಾಂ.

ಅಷ್ಟೊತ್ತಿಗೆ ಮೈದಾನದ ಒಂದು ಮೂಲೆಯಲ್ಲಿ ಸಣ್ಣ ಗೇಟಿದ್ದ ಕಡೆ ಲಾಡು ಹಂಚುವುದಾಗಿ ಮೈಕಿನಲ್ಲಿ ಪ್ರಕಟವಾಗಿದ್ದೇ ತಡ, ನೂರಾರು ಜನ ಆ ಕಡೆ ನುಗ್ಗತೊಡಗಿದರು. ಗೇಟಿನ ಬಳಿ ಲಾಡು ಪಡೆದು ಮೈದಾನದ ಹೊರಗೆ ಹೋಗಬೇಕಾಗಿತ್ತು. "ಲಾಡು ಸಾಕಷ್ಟಿದೆ. ಎಲ್ಲರಿಗೂ ಸಿಗುತ್ತದೆ. ಸಾವಧಾನ, ಶಾಂತಿ ಇರಲಿ" ಇತ್ಯಾದಿ ಘೋಷಣೆಗಳು ಮೊಳಗುತ್ತಲೇ ಇದ್ದವು. ತಂಗಿಯನ್ನು ಕರೆದುಕೊಂಡು ಅಸ್ಲಾಂ ಗುಂಪಿನ ಬಳಿ ಓಡುತ್ತ ಸಾಗಿದ. "ಲಡ್ಡು ಅಂದ್ರೆ ಹೇಗಿರುತ್ತೆ?" ಶಂಷಾದಳ ಪ್ರಶ್ನೆಗಳು ಮುಂದುವರೆದಿದ್ದವು. "ದುಂಡಗೆ, ನಿಂಬೆ ಹಣ್ಣಿನ ಗಾತ್ರಕ್ಕೆ ಇರುತ್ತದೆ ಶಂಷಾದ್. ಸಿಹಿ ಅಂದ್ರೆ ಸಿಹಿ." "ಪೆಪ್ಪರ್‌ಮೆಂಟ್ ತರ ಚೀಪಿಕೊಂಡು ತಿನ್ನಬೇಕಾ?" "ಇಲ್ಲ ಕಣೆ, ದುಂಡಗೆ ಇರುವ ಲಾಡುವನ್ನು ಮುರಿದು ಬಾಯಲ್ಲಿಟ್ಟುಕೊಂಡರೆ ಹಾಗೆಯೇ ಕರಗಿ ಹೋಗುತ್ತದೆ. ಏನು ಘಮಘಮ ಅನ್ನುತ್ತೆ ಗೊತ್ತಾ? ಲವಂಗ ಸಹ ಹಾಕ್ತಾರೆ ಕಣೆ ಅದಕ್ಕೆ" "ಯಾವುದರಲ್ಲಿ ಮಾಡ್ತಾರೆ ಲಾಡೂನ" ಈ ಪ್ರಶ್ನೆಗೆ ಅಸ್ಲಾಂ ಬಳಿ ಉತ್ತರವಿರಲಿಲ್ಲ. ಆದರೂ "ಬರೀ ಸಕ್ಕರೆ ತುಪ್ಪ ಕಣೆ. ಈಗ ತಂದುಕೊಡ್ತೀನಿ. ತಿಂದು ನೋಡು ಗೊತ್ತಾಗುತ್ತೆ" ಎಂದ ಅಸ್ಲಾಮನಿಗೆ ತಂಗಿಯನ್ನು ಹಿಡಿದುಕೊಂಡು ಮುಂದುವರಿಯಲಾಗಲಿಲ್ಲ. ಅಲ್ಲಿ ವಿಪರೀತ ಜನರಿದ್ದರು. ಅಸ್ಲಾಂ ಜನರ ಮಧ್ಯೆ ನುಗ್ಗತೊಡಗಿದ. ಜನರು ಒಬ್ಬರಿಗೊಬ್ಬರು ತಳ್ಳಾಡುತ್ತಿದ್ದರು. ಲಾಡು ಉಂಡೆ ಹಂಚುತ್ತಿದ್ದವನು ಇನ್ನೂ ಎಷ್ಟೋ ದೂರ ಇದ್ದು ಅವನ ಸುತ್ತ ನೂರಾರು ಜನ ದುಂಡುಗಟ್ಟಿಕೊಂಡಿದ್ದರೇ ವಿನಃ ಸಾಲಾಗಿ ನಿಂತಿರಲಿಲ್ಲ.

ಆ ಗುಂಪು ನೋಡಿದರೆ ಯಾರು ಲಾಡು ಇಸಿದುಕೊಳ್ಳಬೇಕು, ಯಾರು ಇಸಿದುಕೊಂಡಾಗಿದೆ ಎಂಬುದೇ ಗೊತ್ತಾಗುತ್ತಿರಲಿಲ್ಲ. ಅದರಲ್ಲಿ ಹಲವರು ಲಾಡು ಇಸಿದುಕೊಂಡು ಅಲ್ಲೇ ತಿಂದು, ಮತ್ತೆ ಕೈಯೊಡ್ಡುತ್ತ ಅಥವಾ ಕಿತ್ತುಕೊಳ್ಳುತ್ತಾ ನಿಂತಿದ್ದರು. ಯಾರೂ ಚಿಕ್ಕ ಗೇಟನ್ನು ದಾಟಿ ಹೊರಕ್ಕೆ ಹೋಗುತ್ತಲೇ ಇರಲಿಲ್ಲ. ಹಿಂದೆ ನಿಂತಿದ್ದವರು ಅಲ್ಲೇ ನಿಂತಿದ್ದರು. ಮುಂದೆ ನಿಂತಿದ್ದವರು ತಿನ್ನುತ್ತಲೇ ಇದ್ದರು. ಮುಂದೆ ನುಗ್ಗಲು ಪ್ರಯತ್ನಿಸಿದವರನ್ನು ಹಿಂದಕ್ಕೆ ನೂಕುತ್ತಿದ್ದರು. ಅಲ್ಲಿ ಯಾವ ನೀತಿ ನಿಯಮ, ಅಂತಃಕರಣಕ್ಕೂ ಬೆಲೆ ಇರಲಿಲ್ಲ. ಅಲ್ಲೆಲ್ಲ ಶಾಸಕರ ನೆಂಟರು, ಸ್ನೇಹಿತರು, ಬಾಲಬಡುಕರು, ಹೊಟ್ಟೆಬಟ್ಟೆಗೆ ಸಾಕಷ್ಟಿದ್ದವರು, ಪ್ರಭಾವಿಗಳು, ರೌಡಿಗಳು, ಜಾತಿ ಮತ್ತು ದುಡ್ಡಿನ ಲೆಕ್ಕಾಚಾರದವರು, ಮೂರು ಬಿಟ್ಟವರು ಮಾತ್ರ ಇದ್ದರೇ ವಿನಃ ಮಾನಮರ್ಯಾದೆಗೆ ಅಂಜುವವರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದರು.

"ಹೊಟ್ಟೆ ಹಸಿದಿದೆ. ದೊಡ್ಡ ಲಾಡು ಉಂಡೆಯನ್ನೇ ಇಸಕೊಂಡು ಬಾ" ಎಂದಳು ಶಂಷಾದ್. ಅಸ್ಲಾಂ ಎಷ್ಟು ಪ್ರಯತ್ನಿಸಿದರೂ ಲಾಡು ಹಂಚುವವರ ಹತ್ತಿರ ಸಹ ಹೋಗಲಾಗಲಿಲ್ಲ. ಆ ಅಗಾಧ ನೂಕುನುಗ್ಗಲಿನಲ್ಲಿ ಅವನ ಅಂಗಿಯ ಒಂದೆರಡು ಗುಂಡಿಗಳು ಎಗರಿ ಹೋಗಿ ಅಂಗಿ ಇನ್ನೂ ಜೋತಾಡತೊಡಗಿತು. ಗುಂಪಿನ ಅಂಚಿನಲ್ಲಿ ಶಂಷಾದ್ ತನ್ನಣ್ಣ ಲಾಡು ತಂದೇ ತರುತ್ತಾನೆಂಬ ಆಸೆಗಣ್ಣಿನಿಂದ ನಿಂತಿದ್ದಳು. ಬಿಸಿಲು, ಬಾಯಾರಿಕೆ, ಹಸಿವು, ಅಸಹಾಯಕತೆಯಿಂದ ಬೇಸತ್ತ ಅಸ್ಲಾಂಗೆ ಅಳು ಬರುವಂತಾಗಿತ್ತು. ಸುತ್ತಮುತ್ತ ತನ್ನ ಸ್ನೇಹಿತರ್‍ಯಾರಾದರೂ ಇದ್ದಾರೆಯೋ ಎಂದು ನೋಡಿದ. ಜನಜಂಗುಳಿಯಲ್ಲಿ ಯಾರೂ ಕಾಣಲಿಲ್ಲ. ಬರೀ ಗಂಡಸರೇ ತುಂಬಿಹೋಗಿದ್ದರಿಂದ ಅಲ್ಲಿ ಯಾವ ಹೆಣ್ಣುಮಕ್ಕಳೂ ಇರಲಿಲ್ಲ. ವಿದ್ಯಾರ್ಥಿನಿಯರೆಲ್ಲ ಯಾವಾಗಲೋ ಬರೀ ಕೈಯ್ಯಲ್ಲಿ ಮನೆ ಕಡೆ ಓಟ ಕಿತ್ತಿದ್ದರು.

ಅರ್ಧ ಗಂಟೆ ಕಾದರೂ ಅಸ್ಲಾಮನಿಗೆ ಒಂದಿಂಚೂ ಸಹ ಮುಂದುವರೆಯಲಾಗಲಿಲ್ಲ. ಲಾಡು ಸಿಗುವುದು

⇨19



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ನರಕದ ಬಗೆಗಳು ಭಾಗ:01



ನರಕದ ಪರಿಕಲ್ಪನೆಯು ವಿವಿಧ ಧರ್ಮಗಳಲ್ಲಿ ವಿವಿಧ ರೀತಿಗಳಲ್ಲಿ ಇವೆ. ಆದರೆ ಹಿಂದೂ ಎಂದು ಪ್ರಚಲಿತದಲ್ಲಿರುವ ಈ ಒಂದು ಧರ್ಮದಲ್ಲಿ ಇರುವ ನರಕದ ಪರಿಕಲ್ಪನೆಯು ಬಹಳ ಪಕ್ಷಪಾತದಿಂದಲೂ, ಅವ್ಯೆಚಾರಿಕತೆಯಿಂದಲೂ, ಅನ್ಯಾಯದಿಂದಲೂ ಕೂಡಿದೆ. ನೇರವಾಗಿ ಹೇಳಬೇಕಂದರೆ ಬ್ರಾಹ್ಮಣ್ಯದ ಪರವಾಗಿ ಇರುತ್ತದೆ. ವಿವಿಧ ಹಿಂದೂ ಪುರಾಣಗಳಲ್ಲಿ ಬರುವ ನರಕದ ಪರಿಕಲ್ಪನೆ ಇದನ್ನು ಸ್ಪಷ್ಟಗೊಳಿಸುವುದು ಕೂಡ.

ಮೊದಲು ಈ ನರಕ ಎಂಬುದೇನೆಂದರ ಬಾಲಪಾಠವನ್ನು ತಿಳಿಯೋಣ.

1.ನರಕ ಎಂದರೇನು?

ನರಕ ಎಂದರೆ ಸಾವಿನ ನಂತರ ಪಾಪಿಗಳು ಅವರು ಮಾಡಿರುವ ಪಾಪಕರ್ಮಗಳ ಅನುಸಾರವಾಗಿ ಶಿಕ್ಷೆ ಅನುಭವಿಸುವ ತಾಣ. ಇದು ಸಾವಿನ ದೇವತೆಯಾದ ಯಮನ ಸ್ಥಳವೂ ಹೌದು. ಇದು ವಿಶ್ವದ ದಕ್ಷಿಣ ಭಾಗದಲ್ಲಿ ಭೂಮಿಯ ಕೆಳಗಡೆ ಇರುವುದೆಂದು ಹೇಳಲಾಗುವುದು. ಆದ್ದರಿಂದಲೇ ದಕ್ಷಿಣದ ಭಾಗವನ್ನು ಅಧೋಭಾಗವೆಂದೂ, ಉತ್ತರ ಭಾಗವನ್ನು ಉನ್ನತಭಾಗವೆಂದೂ ಹೇಳುವುದು.

ನರಕವೆಂದರೆ ಎಂದಿಗೂ ಮುಗಿಯದ ನೋವಿನ ಅಥವಾ ಶಿಕ್ಷೆಯ ತಾಣ. ಇದರಲ್ಲಿ ಅನುಭವಿಸುವುದನ್ನು ಅನುಭವಿಸಲೇಬೇಕಾಗುತ್ತದೆಯೇ ಹೊರತು ಯಾವ ರೀತಿಯಲ್ಲಿಯೂ ತಪ್ಪಿಸಿಕೊಳ್ಳಲು ಆಗುವುದಿಲ್ಲ.

2. ನರಕದಲ್ಲಿ ಏನಾಗುತ್ತದೆ?

ವ್ಯಕ್ತಿಯು ತನ್ನ ಮರಣಾನಂತರ ಯಮಧರ್ಮನ ದೂತರು ಅವನನ್ನು ಯಮಧರ್ಮನ ನ್ಯಾಯಾಸ್ಥಾನಕ್ಕೆ ಕರೆದೊಯ್ಯುತ್ತಾರೆ. ಅಲ್ಲಿ ಅವನು ಮಾಡಿರುವಂತಹ ಪಾಪ ಮತ್ತು ಪುಣ್ಯಗಳೆರಡರ ವಿಚಾರಣೆಯಾಗುತ್ತದೆ. ಈ ವಿಚಾರಣೆಯ ತರುವಾಯ, ಅವನು ಮಾಡಿರುವ ಪಾಪಪುಣ್ಯಗಳೆರಡರ ಆಧಾರಿತವಾಗಿ ಅವನನ್ನು ಸ್ವರ್ಗಕ್ಕೆ ಅಥವಾ ನರಕಕ್ಕೆ ಕಳುಹಿಸುವ ತೀರ್ಮಾನವನ್ನು ಸ್ವಯಂ ಯಮನು ಪ್ರಕಟಿಸುವನು.

3. ನರಕದಲ್ಲಿ ಎಷ್ಟು ಬಗೆಗಳಿವೆ?

ವಿವಿಧ ಸಂಖ್ಯೆಗಳಲ್ಲಿ ಮತ್ತು ವಿವಿಧ ಬಗೆಗಳಲ್ಲಿರುವ ನರಕಗಳಿಗೆ ಆಯಾ ಪಾಪಗಳನ್ನು ಮಾಡಿರುವವರನ್ನು ಕಳುಹಿಸಲಾಗುತ್ತದೆ. ವಿವಿಧ ಪುರಾಣಗಳಲ್ಲಿ ವಿವಿಧ ನರಕದ ಬಗೆಗಳನ್ನು ತಿಳಿಸಲಾಗುತ್ತದೆಯಾದರೂ ಸಾಮಾನ್ಯವಾಗಿ ಒಟ್ಟು ಇಪ್ಪತ್ತೆಂಟು ನರಕಗಳನ್ನು ಪ್ರಮುಖವಾಗಿ ಉಲ್ಲೇಖಿಸಲಾಗುತ್ತದೆ.

4. ನರಕದ ಬಗೆಗಳಾವುವು?

ಭಾಗವತ ಪುರಾಣ ಮತ್ತು ದೇವಿ ಭಾಗವತ ಪುರಾಣದಲ್ಲಿ ಉಲ್ಲೇಖಿತವಾಗಿರುವ ಪ್ರಕಾರ ಇರುವ ಇಪ್ಪತ್ತೆಂಟು ನರಕಗಳೆಂದರೆ; ತಮಿಸ್ರ, ಅಂಧ ತಮಿಸ್ರ, ರೌರವ, ಮಹಾರೌರವ, ಕುಂಭೀಪಾಕ, ಕಾಲಸೂತ್ರ, ಅಸಿಪತ್ರವನ ಅಥವಾ ಅಸಿಪತ್ರಕಾನನ, ಸೂಕರಮುಖ, ಅಂಧಕೂಪ, ಕ್ರಿಮಿಭೋಜನ ಅಥವಾ ಕ್ರಿಮಿಭಕ್ಷ್ಯ, ಸಂದಂಶ, ತಪ್ತಸುರ್ಮಿ ಅಥವಾ ತಪ್ತಮೂರ್ತಿ, ವಜ್ರಕಂಟಕ ಶಾಲ್ಮಲಿ, ವೈತರಣಿ, ಪ್ರುಯೋದ, ಪ್ರಾಣರೋಧ, ವಿಸಾಶನ, ಲಾಲಭಕ್ಷ, ಸರಮೇಯದಾನ, ವಿವಿಚಿ, ಅಯಪಾನ, ಕ್ಷಾರಕರ್ಧಮ, ರಾಕ್ಷೋಗಣ ಭೋಜನ, ಶೂಲಪ್ರೋತ, ದಂಡಶುಕ, ಅವಾತನಿರೋಧನ, ಪರ್ಯಾವರ್ತನ ಮತ್ತು ಸೂಚಿಮುಖ. ಈ ಇಪ್ಪತ್ತೆಂಟು ನರಕಗಳ ಹೊರತಾಗಿ ವಿಷ್ಣುಪುರಾಣವೂ ಇನ್ನಷ್ಟು ನರಕಗಳನ್ನು ಹೆಸರಿಸುತ್ತದೆ. ಅವುಗಳೆಂದರೆ, ರೋಧ, ಸೂಕರ, ತಾಲ, ತಪ್ತಕುಂಭ, ತಪ್ತಲೋಹ, ಮಹಾಜ್ವಾಲ, ಲವಣ, ವಿಮೋಹನ, ಕ್ರಿಮಿಶ, ವೇಧಕ, ಅಧೋಮುಖ, ಪೂಯವಾಹ, ರುಧಿರಾಂಧ, ಕೃಷ್ಣ, ವಹ್ನಿಜ್ವಾಲ ಮತ್ತು ಶ್ವಾನಭೋಜನ. ಈ ಹದಿನಾರು ನರಕಗಳ ಹೆಸರುಗಳ ಉಲ್ಲೇಖವಿದ್ದು, ಇವುಗಳ ಬಗ್ಗೆ ಹೆಚ್ಚಿನ ವಿವರಣೆಗಳು ಸಿಗುವುದಿಲ್ಲ, ಆದರೆ ಯಾರು ಮತ್ತು ಏತಕ್ಕೆ ಹೋಗುತ್ತೇವೆಂದು ತಿಳಿದು ಎಚ್ಚರಿಕೆಯನ್ನು ವಹಿಸಬಹುದು. ಏನಾದರೂ ನರಕ ಎಂದರೆ ನರಕವೇ ತಾನೇ. ಸುಖವಂತೂ ಅಲ್ಲಿ ಇರೋದಿಲ್ಲ.


5. ಭಾಗವತ ಪುರಾಣ ಮತ್ತು ದೇವಿ ಭಾಗವತ ಪುರಾಣಗಳು ವಿವರಿಸುವ ನರಕಗಳು ಹೇಗಿರುತ್ತವೆ?


ತಮಿಸ್ರ: ಪರರ ಸೊತ್ತನ್ನು, ಹೆಂಡತಿ ಮತ್ತು ಮಕ್ಕಳನ್ನು ಯಾರು ಅಪಹರಿಸುತ್ತಾರೋ ಅವರನ್ನು ಈ ನರಕಕ್ಕೆ ತಳ್ಳಲಾಗುತ್ತದೆ. ಇದೊಂದು ಕತ್ತಲೆಯ ಕೂಪ. ಇದರಲ್ಲಿ ವ್ಯಕ್ತಿಯನ್ನು ಹಗ್ಗದಿಂದ ಕಟ್ಟಿ ಎಸೆಯಲಾಗಿರುತ್ತದೆ. ಅಲ್ಲಿ ಅನ್ನ ಮತ್ತು ನೀರು ಏನನ್ನೂ ಕೊಡಲಾಗುವುದಿಲ್ಲ, ಪಾಪಿಯು ಮೂರ್ಛಿತನಾಗುವವರೆಗೂ ಯಮದೂತರು ಚೆನ್ನಾಗಿ ಹೊಡೆದು ಬಡಿದು ಹಿಂಸಿಸುತ್ತಾನೆ.

ಅಂಧತಮಿಸ್ರ: ಯಾರು ಮತ್ತೊಬ್ಬ ವ್ಯಕ್ತಿಯನ್ನು ಮೋಸಗೊಳಿಸಿ ಅವನ ಹೆಂಡತಿ ಮತ್ತು ಮಕ್ಕಳನ್ನು ಅನುಭೋಗಿಸುತ್ತಾನೋ ಅವನನ್ನು ಅಂಧತಮಿಸ್ರಕ್ಕೆ ತಳ್ಳಲಾಗುತ್ತದೆ. ಮರದ ಬೇರುಗಳನ್ನು ಕಡಿಯುವಂತೆ ಈ ನರಕದಲ್ಲಿ ಪಾಪಿಯು ಪ್ರಜ್ಞೆಯನ್ನೂ ಮತ್ತು ದೃಷ್ಟಿಯನ್ನೂ ಕಳೆದುಕೊಳ್ಳುವವರೆಗೂ ಹಿಂಸೆ ನೀಡಲಾಗುತ್ತದೆ.

ರೌರವ: ಯಾವ ಪಾಪಿಯು ಸದಾ ತನ್ನ ಮತ್ತು ತನ್ನ ಕುಟುಂಬದ ಸೌಖ್ಯವನ್ನು ಮಾತ್ರ ನೋಡಿಕೊಳ್ಳುವಷ್ಟು ಸ್ವಾರ್ಥಿಯಾಗಿರುತ್ತಾನೋ ಮತ್ತು ಇತರರ ಒಳ್ಳೆಯ ಜೀವನಕ್ಕೆ ಗಮನ ಹರಿಸದೇ ಅಸೂಯಾಪರನಾಗಿರುತ್ತಾನೋ ಅವನು ಈ ನರಕಕ್ಕೆ ಹೋಗುತ್ತಾನೆ. ಇಂಥಾ ಮನುಷ್ಯನಿಂದ ಸಂಕಟಕ್ಕೆ ಈಡಾಗಿರುವ ಜೀವಿಗಳು ರುರು ಎಂದು ಕರೆಯಲ್ಪಡುವ ಭಯಾನಕ ಸರ್ಪಗಳಾಗಿ ಈ ಪಾಪಿಗೆ ಹಿಂಸೆ ಕೊಡುತ್ತಾರೆ. ವಿಷ್ಣುಪುರಾಣದಲ್ಲಿ ಸುಳ್ಳು ಸಾಕ್ಷ್ಯ ಹೇಳಿದವರಿಗೆ ಅಥವಾ ಸುಳ್ಳು ಹೇಳುವವರಿಗೆ ಈ ನರಕ ಎಂದು ಹೇಳಲಾಗುತ್ತದೆ.









ಮಹಾರೌರವ: ಯಾರು ಪರರಿಗೆ ನೋವು ಕೊಟ್ಟು ಕೊಂಡು, ಸದಾ ಇತರರ ಖರ್ಚಿನಲ್ಲಿ ಬದುಕುತ್ತಿರುತ್ತಾರೋ ತನ್ನ ಮಾಂಸವನ್ನು ತಾನೇ ತಿನ್ನುವಂತಹ ಕ್ರವ್ಯಾದಗಳೆಂದು ಕರೆಯಲ್ಪಡುವ ರುರುಗಳಿಂದ ಹಿಂಸೆ ಅನುಭವಿಸುತ್ತಾನೆ.

ಕುಂಭೀಪಾಕ: ಯಾವ ವ್ಯಕ್ತಿಯು ಯಾವುದೇ ಪ್ರಾಣಿ ಅಥವಾ ಪಕ್ಷಿಯನ್ನು ಜೀವಂತವಾಗಿ ಸುಡುತ್ತಾನೋ ಅಥವಾ ಬೇಯಿಸುತ್ತಾನೋ, ಆ ಪ್ರಾಣಿ ಅಥವಾ ಪಕ್ಷಿಯ ಕೂದಲುಗಳಿರುವಷ್ಟು ವರ್ಷಗಳ ಕಾಲ ಯಮದೂತರು ಪಾಪಿಯನ್ನು ಎಣ್ಣೆಯಲ್ಲಿ ಬೇಯಿಸುತ್ತಾರೆ.

ಕಾಲಸೂತ್ರ: ಭಾಗವತ ಪುರಾಣದಲ್ಲಿ ಈ ನರಕವನ್ನು ಬ್ರಾಹ್ಮಣನ ಕೊಂದವರಿಗೆ ಮೀಸಲಿಟ್ಟರೆ, ದೇವಿ ಭಾಗವತ ಪುರಾಣದಲ್ಲಿ ತಂದೆತಾಯಿಗಳಿಗೆ, ಹಿರಿಯರಿಗೆ, ಪೂರ್ವಿಕರಿಗೆ ಮತ್ತು ಬ್ರಾಹ್ಮಣರಿಗೆ ಮರ್ಯಾದೆಯನ್ನು ಕೊಡದವನಿಗೆ ಈ ನರಕದ ಶಿಕ್ಷೆ ನೀಡುತ್ತದೆ. ಈ ನರಕ ತಾಮ್ರ ಪ್ರದೇಶ ಚೆನ್ನಾಗಿ ಕಾಯಿಸಲಾಗುತ್ತದೆ. ಕೆಳಗೆ ಬೆಂಕಿ ಮತ್ತು ಮೇಲೆ ಉರಿಯುತ್ತಿರುವ ಸೂರ್ಯನಿರಬೇಕು; ಹಾಗೆ ನೋಡಿಕೊಳ್ಳಲಾಗುತ್ತದೆ. ಪಾಪಿಯನ್ನು ಅದರಲ್ಲಿ ಹಸಿವು ಮತ್ತು ಬಾಯಾರಿಕೆಗಳಿಂದ ನರಳುವ ಹಾಗೆ ನೋಡಿಕೊಳ್ಳಲಾಗುತ್ತದೆ. ಅವನು ನಿದ್ರಿಸಲಿ, ಕೂರಲಿ, ನಿಲ್ಲಲಿ ಅಥವಾ ಓಡಲಿ. ಈ ತಾಮ್ರದ ಭೂಮಿಯ ಕೆಳಗೆ ಬೆಂಕಿ, ಮೇಲೆ ಉರಿಯುವ ಸೂರ್ಯ.

ಅಸಿಪತ್ರವನ: ಯಾರು ವೇದಪಾಠಗಳನ್ನು ಮತ್ತು ಅವುಗಳಲ್ಲಿ ಹೇಳಿರುವಂತಹ ಮಾತುಗಳನ್ನು ಗೌರವಿಸುವುದಿಲ್ಲವೋ, ಉಲ್ಲಂಘಿಸುತ್ತಾನೋ ಅವನಿಗೆ ಈ ನರಕವೆಂದು ಭಾಗವತ ಪುರಾಣ ಮತ್ತು ದೇವಿ ಭಾಗವತ ಪುರಾಣಗಳು ಹೇಳಿದರೆ, ವಿಷ್ಣು ಪುರಾಣವು ಉದ್ದೇಶಪೂರ್ವಕವಾಗಿ ಕೆಡುಕುಂಟುಮಾಡುವವರಿಗೆ ಈ ನರಕವನ್ನು ವಿಧಿಸುತ್ತದೆ. ಯಮದೂತರು ಪಾಪಿಯನ್ನು ಛಡಿಯಿಂದ ಹೊಡೆಯುತ್ತಾ ಈ ಅಸಿಪತ್ರವನದಲ್ಲಿ ಬಿಡುತ್ತಾರೆ. ಪಾಪಿಯು ಎಲ್ಲಿಯೂ ಓಡಿಹೋಗಲು ಸಾಧ್ಯವಿಲ್ಲ, ಅದು ಖಡ್ಗದಂತೆ ಮೊನಚಾಗಿರುವ ತಾಳೆಎಲೆಗಳ ಕಾಡು. ಎಲ್ಲಿಗೇ ಓಡಿದರೂ ಒಂದೋ ಯಮದೂತರ ಛಡಿ ಏಟು, ಇಲ್ಲಾ ಹರಿತವಾಗಿರುವ ತಾಳೆ ಎಲೆಗಳು.

ಸೂಕರಮುಖ: ರಾಜನ ಅಥವಾ ಪ್ರಭುತ್ವದ ಅಧಿಕಾರಿಗಳು ಮುಗ್ಧರನ್ನು ಅನವಶ್ಯಕವಾಗಿ ಶಿಕ್ಷಿಸಿದರೆ ಅಥವಾ ಬ್ರಾಹ್ಮಣನಿಗೆ ದೈಹಿಕವಾಗಿ ಶಿಕ್ಷೆ ನೀಡಿದರೆ ಈ ನರಕಕ್ಕೆ ಹೋಗುತ್ತಾರೆ. ಯಮದೂತರು ಅವನನ್ನು ಕಬ್ಬಿನಿಂದ ರಸ ತೆಗೆಯುವಂತೆ ಹಿಂಡುತ್ತಾರೆ. ಅವರಿಂದ ನಿರಪರಾಧಿಯು ಅನುಭವಿಸಿದ ಸಂಕಟ ನೋವುಗಳನ್ನೆಲ್ಲಾ ಇಲ್ಲಿ ಅವನು ಅನುಭವಿಸಬೇಕು.

ಅಂಧಕೂಪ: ಈ ನರಕಕ್ಕೆ ಹೋಗುವವರು ಯಾರೆಂದರೆ ಮೋಸಗೊಳಿಸುವ ಉದ್ದೇಶದಿಂದಲೇ ಜನರಿಗೆ ತೊಂದರೆಯನ್ನುಂಟು ಮಾಡುವವರು ಮತ್ತು ಕ್ರಿಮಿಕೀಟಗಳನ್ನು ಹಿಂಸಿಸುವವರು. ಈ ನರಕದಲ್ಲಿ ಕಣ್ಣು ಕುರುಡಾಗುವಷ್ಟು ಕತ್ತಲೆ ಇರುತ್ತದೆ. ಅದರಲ್ಲಿ ಅವನ ಮೇಲೆ ಹಕ್ಕಿಗಳು, ಪ್ರಾಣಿಗಳು, ಹಾವು ಚೇಳುಗಳು, ಸೊಳ್ಳೆಗಳು, ಹೇನುಗಳು, ಹುಳುಗಳು, ನೊಣಗಳು ಮತ್ತು ಇತರ ಉಪದ್ರವ ಕೊಡುವ ಎಲ್ಲಾ ಜೀವಿಗಳು ದಾಳಿ ಮಾಡುತ್ತಲೇ ಇರುತ್ತವೆ. ಅವನಿಗೆ ವಿಶ್ರಾಂತಿ ತೆಗೆದುಕೊಳ್ಳಲು ಬಿಡದೇ ಅಲ್ಲಿಂದಿಲ್ಲಿಗೆ ಓಡುತ್ತಿರುವಂತೆ ನೋಡಿಕೊಳ್ಳುತ್ತವೆ.

ಕ್ರಿಮಿಭೋಜನ: ಭಾಗವತ ಪುರಾಣ ಮತ್ತು ದೇವಿ ಭಾಗವತ ಪುರಾಣಗಳ ಪ್ರಕಾರ ಯಾವ ವ್ಯಕ್ತಿಯು ತನ್ನ ಆಹಾರವನ್ನು ಅತಿಥಿಯೊಡನೆ, ಹಸಿದವರೊಡನೆ, ಮಕ್ಕಳೊಡನೆ, ಹಿರಿಯರೊಡನೆ ಹಂಚಿಕೊಳ್ಳದೇ ಸ್ವಾರ್ಥಪರನಾಗಿ, ಪಂಚಯಜ್ಞಗಳನ್ನು ಆಚರಿಸದೇ ತಾನೊಬ್ಬನೇ ಊಟ ಮಾಡುವನೋ ಅವನು ಈ ನರಕಕ್ಕೆ ಬರುತ್ತಾನೆ. ವಿಷ್ಣುಪುರಾಣದಲ್ಲಿ ತಂದೆ, ಬ್ರಾಹ್ಮಣರ ಅಥವಾ ದೇವರುಗಳ ಬಗ್ಗೆ ಅಸಹ್ಯ ಪಟ್ಟುಕೊಳ್ಳುತ್ತಾನೋ ಮತ್ತು ಆಭರಣವನ್ನು ನಾಶಪಡಿಸುತ್ತಾನೋ ಅವನಿಗೆ ಈ ನರಕವೆಂದು ಹೇಳುತ್ತದೆ. ಇದೇನೆಂದರೆ ಒಂದು ಲಕ್ಷ ಯೋಜನದ ಅಗಲದ ಸರೋವರವು ಹುಳುಗಳಿಂದ ತುಂಬಿರುತ್ತದೆ. ಪಾಪಿಯನ್ನೂ ಹುಳುವಿನಂತೆ ಪರಿವರ್ತಿಸಿ ಈ ಹುಳುಗಳ ನಡುವೆ ಹಾಕಲಾಗುತ್ತದೆ. ಒಂದು ಹುಳುವು ಮತ್ತೊಂದನ್ನು ಕಿತ್ತುಕೊಂಡು ತಿನ್ನುತ್ತಿದ್ದರೂ ಪಾಪಿಯ ಜನ್ಮವೇನೂ ಮುಗಿದು ಹೋಗುವುದಿಲ್ಲ, ಒಂದು ಲಕ್ಷ ವರ್ಷ ಹಾಗೆಯೇ ಅನುಭವಿಸಿಕೊಂಡು ಬದ್ದಿರಬೇಕು.

ಸಂದಂಶ: ಯಾರು ಬ್ರಾಹ್ಮಣನನ್ನು ದೋಚುತ್ತಾನೆಯೋ ಅಥವಾ ಪ್ರಾಣ ಹೋಗುವಂತಹ ಅಗತ್ಯವಿಲ್ಲದಿದ್ದರೂ ಚಿನ್ನಾಭರಣಗಳನ್ನು ಇತರರಿಂದ ಕಳುವು ಮಾಡುತ್ತಾನೋ ಅಂತಹ ಪಾಪಿ ಈ ನರಕಕ್ಕೆ ಹೋಗುವುದು. ವಿಷ್ಣುಪುರಾಣದ ಪ್ರಕಾರ ಮಾತು ತಪ್ಪಿದವನು, ನೀತಿಪಾಲನೆಯನ್ನು ಮುರಿದವನು ಈ ನರಕಕ್ಕೆ ಹೋಗುತ್ತಾನೆ. ಈ ನರಕದ ಶಿಕ್ಷೆಯೇನೆಂದರೆ, ಪಾಪಿಯ ದೇಹವನ್ನು ಕೆಂಪಾಗಿ ಕಾದಿರುವ ಕಬ್ಬಿಣದ ಗುಂಡುಗಳು ಮತ್ತು ಸರಪಳಿಗಳಿಂದ ಕಟ್ಟಿ ಎಳೆದಾಡಿಸಲಾಗುತ್ತಿರುತ್ತದೆ.

ತಪ್ತಸುರ್ಮಿ: ಅಕ್ರಮ ಮತ್ತು ಅಶ್ಲೀಲ ಲೈಂಗಿಕ ಸಂಬಂಧಗಳನ್ನು ಹೊಂದುವ ಸ್ತ್ರೀ ಮತ್ತು ಪುರುಷರಿಬ್ಬರಿಗೂ ಈ ನರಕ. ಕೆಂಪಾಗಿ ಕಾದಿರುವ ಹೆಣ್ಣು ಮತ್ತು ಗಂಡಿನ ಕಬ್ಬಿಣದ ವಿಗ್ರಹಗಳಿರುತ್ತವೆ. ಪಾಪಿ ಹೆಣ್ಣಾದರೆ ಗಂಡಿನ ವಿಗ್ರಹವನ್ನು, ಗಂಡಾದರೆ ಹೆಣ್ಣಿನ ವಿಗ್ರಹವನ್ನೂ ತಬ್ಬಿಕೊಂಡಿರಬೇಕೆಂದು ಚಾಟಿಯಿಂದ ಹೊಡೆದೊಡೆದು ಬಲಾತ್ಕರಿಸುತ್ತಿರುತ್ತಾರೆ.

ವಜ್ರಕಂಟಕ ಶಾಲ್ಮಲಿ: ಪ್ರಾಣಿಗಳ ಜೊತೆಗೆ ಲೈಂಗಿಕತೆಯನ್ನು ಹೊಂದುವವರಿಗೆ ಅಥವಾ ಅತಿಕಾಮದಿಂದ ಸಂಭೋಗ ಮಾಡುತ್ತಲೇ ಇರುವವರಿಗೆ ಈ ನರಕ. ವಜ್ರ ಕಂಟಕ ಶಾಲ್ಮಲಿ ಮರಕ್ಕೆ ಪಾಪಿಯನ್ನು ತಬ್ಬಿಕೊಂಡಿರುವಂತೆ ಕಟ್ಟಿ ಅವರ ದೇಹವು ಮುಳ್ಳುಗಳ ಮೇಲೆ ಹರಿದು ಎಳೆದುಕೊಂಡು ಹೋಗುವಂತೆ ಯಮದೂತರು ಮಾಡುತ್ತಾರೆ.

ವೈತರಣಿ: ಇದೊಂದು ಸುಂದರವಾದ ಹೆಸರುಳ್ಳ ಅತ್ಯಂತ ಹೇಯ ನದಿ. ಇದು ಭೂಮಿ ಮತ್ತು ನರಕದ ಮಧ್ಯದಲ್ಲಿದೆ ಅಥವಾ ನರಕದ ಎಲ್ಲೆ ಎಂದೂ ಹೇಳಬಹುದು. ಈ ನದಿಯು ಹೇಲು, ಉಚ್ಚೆ ಕೀವು, ರಕ್ತ ಕೂದಲು, ಉಗುರು, ಮೂಳೆಗಳು, ಅಸ್ಥಿಮಜ್ಜೆ ಮಾಂಸ ಮತ್ತು ದೇಹದ ಕೊಬ್ಬು, ಅಲ್ಲದೇ ಮನುಷ್ಯ ಮಾಂಸವನ್ನು ಕಿತ್ತು ತಿನ್ನುವ ಜಲಚರಗಳಿಂದ ಪಿತಗುಟ್ಟುತ್ತಿರುತ್ತದೆ. ಭಾಗವತ ಪುರಾಣ ಮತ್ತು ದೇವಿ ಭಾಗವತ ಪುರಾಣದ ಪ್ರಕಾರ ಯಾರು ಗೌರವಾನ್ವಿಕ ಕುಟುಂಬದಲ್ಲಿ ಮತ್ತು ವರ್ಣದಲ್ಲಿ ಹುಟ್ಟಿ ಆ ವರ್ಣಕ್ಕೆ ಅಥವಾ ಹುಟ್ಟಿರುವ ಗೌರವಾನ್ವಿತ ಕುಟುಂಬಕ್ಕೆ ಕಳಂಕ ತರುವಂತೆ ನಡೆದುಕೊಂಡರೆ ಅಥವಾ ಕರ್ತವ್ಯ ಲೋಪ ಮಾಡಿದರೆ; ಅವರನ್ನು ಈ ನದಿಗೆ ಎಸೆಯಲಾಗುತ್ತದೆ. ಆದರೆ ವಿಷ್ಣು ಪುರಾಣದಲ್ಲಿ ಹೇಳುವಂತೆ, ಜೇನುಗೂಡನ್ನು ಅಥವಾ ಪಟ್ಟಣವನ್ನು ನಾಶ ಮಾಡುವವನು ಈ ವೈತರಣೀ ನದಿಗೆ ಬೀಳುತ್ತಾನೆ.

ಪ್ರುಯೋದ: ಇದೂ ಕೂಡ ವೈತರಣೀ ನದಿಯಂತೆ ಇರುವುದು. ಅದೇ ಮಲ, ಮೂತ್ರ, ಕೀವು, ಗೊಣ್ಣೆ, ಕಫ, ರಕ್ತ ಇತ್ಯಾದಿಗಳು. ಆದರೆ ಇಲ್ಲಿಗೆ ಬಂದು ಬೀಳುವ ಪಾಪಿಗಳು ಬೇರೆ. ಶೂದ್ರ ಗಂಡಂದಿರು ಅಥವಾ ಕೀಳು ಜಾತಿಯ ವೇಶ್ಯೆಯರು ಶುಭ್ರವಾಗಿರದೇ, ಸ್ವಚ್ಛತೆಯನ್ನು ಪಾಲಿಸದೇ ಪ್ರಾಣಿಗಳಂತೆ ಬದುಕಿದರೆ, ಉತ್ತಮ ನಡವಳಿಕೆಯನ್ನು ಹೊಂದದಿದ್ದರೆ ಈ ಪ್ರುಯೋದಕ್ಕೆ ಬಂದು ಬೀಳಬೇಕಾಗುತ್ತದೆ. ಅಲ್ಲದೇ ಆ ಹೇಸಿಗೆಯನ್ನೆಲ್ಲಾ ತಿನ್ನಿಸಲಾಗುತ್ತದೆ.


ಪ್ರಾಣರೋಧ: ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ತಮ್ಮ ನಾಯಿ ಮತ್ತು ಕತ್ತೆಗಳೊಡನೆ ಕಾಡುಗಳಲ್ಲಿ ವಿವಿಧ ಪ್ರಾಣಿಗಳನ್ನು ಬೇಟೆಯಾಡಿ ಕೊಂದರೆ, ಅವರನ್ನು ಈ ಕಾಡಿನ ರೂಪದಲ್ಲಿರುವ ನರಕಕ್ಕೆ ತಂದು ಒಡಲು ಬಿಡಲಾಗುತ್ತದೆ. ಯಮದೂತರು ಬಿಲ್ಲುಬಾಣಗಳನ್ನು ಬಿಡುತ್ತಾ ಅವರನ್ನು ಬೇಟೆಯಾಡುವ ಆಟವಾಡುತ್ತಾರೆ.

ವಿಸಾಶನ: ಭಾಗವತ ಮತ್ತು ದೇವಿ ಭಾಗವತ ಪುರಾಣದಲ್ಲಿ ಹೇಳುವಂತೆ ಯಾರು ತಮ್ಮ ಶ್ರೇಣಿ, ಸಂಪತ್ತು ಇವುಗಳಿಂದ ಮದೋನ್ಮತ್ತರಾಗಿ ತಮ್ಮ ಪ್ರತಿಷ್ಠೆಗಾಗಿ ಪ್ರಾಣಿಬಲಿಯನ್ನು ಕೊಟ್ಟು ಕೊಲ್ಲುತ್ತಾರೋ ಅವರಿಗೆ ಈ ನರಕ. ವಿಷ್ಣು ಪುರಾಣದಲ್ಲಿ ಈಟಿ, ಕತ್ತಿ ಮತ್ತು ಇತರ ಆಯುಧಗಳನ್ನು ಮಾಡುವವರಿಗೆ ಈ ನರಕ ಎಂದು ಹೇಳುತ್ತಾರೆ. ಶಿಕ್ಷೆಯೆಂದರೆ ಯಮದೂತರು ಛಡಿಯಿಂದ ಪಾಪಿಗಳನ್ನು ಅನಂತವಾಗಿ ಹೊಡೆಯುತ್ತಲೇ ಇರುತ್ತಾರೆ.

ಲಾಲಭಕ್ಷ: ಭಾಗವತ ಮತ್ತು ದೇವಿ ಭಾಗವತ ಪುರಾಣದಲ್ಲಿ ಯಾವ ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯ ಗಂಡಂದಿರು ತಮ್ಮ ಹೆಂಡತಿಯರಿಗೆ ಸಂಭೋಗದ ಸಮಯದಲ್ಲಿ ಕಾಮಾತುರದಿಂದ ತಮ್ಮ ವೀರ್ಯವನ್ನು ಉಣ್ಣಲು ಅಧಿಕಾರಯುತವಾಗಿ ಬಲತ್ಕರಿಸುತ್ತಾರೋ ಅಂತವರನ್ನು ವೀರ್ಯದ ನದಿಗೆ ಎಸೆಯಲಾಗುತ್ತದೆ. ಅಲ್ಲಿ ಅದನ್ನುಣ್ಣುತ್ತಲೇ ಇರಬೇಕಾದ ಸ್ಥಿತಿ ಅನುಭವಿಸಬೇಕು. ಆದರೆ ವಿಷ್ಣು ಪುರಾಣ ಇದನ್ನು ನಿರಾಕರಿಸುತ್ತದೆ. ಬದಲಾಗಿ ಯಾರು ಪಿತೃಗಳಿಗೆ, ದೈವಗಳಿಗೆ ಮತ್ತು ಅತಿಥಿಗಳಿಗೆ ಆಹಾರವನ್ನು ಅರ್ಪಿಸದೇ ತಿನ್ನುತ್ತಾನೋ ಅವನಿಗೆ ಈ ನರಕವನ್ನು ಅನುಭವಿಸಲು ಶಿಕ್ಷಿಸುತ್ತದೆ.

■ (ನರಕಗಳು ಮುಂದುವರಿಯುತ್ತವೆ)

ದೇವಸ್ಥಾನಗಳಲ್ಲಿ ದುರ್ಗೆ ಬದಲು ಯೋನಿ ಪೂಜೆ



ಯೋಗೀಶ್ ಮಾಸ್ಟರ್ ಅವರು ಮೇ 18 ರ ಸಂಚಿಕೆಯಲ್ಲಿ ನಮ್ಮ ದೇಶದಲ್ಲಿ ಶಿಶ್ನ ಮತ್ತು ಯೋನಿ ಪೂಜೆ ಹಾಗೂ ವೇಶ್ಯೆಯರ ಪೂಜೆಯ ಮೂಲವನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಇಂಡೋನೇಷಿಯಾ ಕಾಂಬೋಡಿಯಾ ಥೈಲ್ಯಾಂಡಿನಲ್ಲೂ ಯೋನಿ ಪೂಜೆ ಹಿಂದೊಮ್ಮೆ ಜಾರಿಯಲ್ಲಿತ್ತು ಎಂಬ ಮಾಹಿತಿ ಇಂಟರ್ನೆಟ್‌ನಲ್ಲಿ ಲಭ್ಯವಿದೆ. ನಮ್ಮ ಭಾರತದಲ್ಲಿ ಈಗಲೂ ಜನರು ಮುಗಿಬಿದ್ದು ಯೋನಿ ಪೂಜೆ ಮಾಡುತ್ತಾರೆ ಎಂದು ಹೆಚ್ಚಿನವರಿಗೆ ಗೊತ್ತಿಲ್ಲ. ವಿಚಿತ್ರವೆಂದರೆ ತಾವು ಏನನ್ನು ಪೂಜಿಸುತ್ತಿದ್ದೇವೆ, ಯಾವ ದೇವಸ್ಥಾನದಲ್ಲಿ ಯಾವ ಪ್ರತಿಮೆಯನ್ನು ಪೂಜಿಸಲಾಗುತ್ತಿದೆ, ಆ ಪ್ರತಿಮೆಯ ಅರ್ಥವೇನು ಎಂಬುದು ಸಹ ಗೊತ್ತಿಲ್ಲದೇ ದೂರದೂರದ ದೇವಸ್ಥಾನಕ್ಕೆ ಓಡಿಹೋಗಿ ಮಾನವನ ಗುಪ್ತಾಂಗ ಪೂಜಿಸುವುದು ಭಾರತೀಯರು ಮಾತ್ರ. ಒಂದು ಕಾಲದಲ್ಲಿ ಯೋನಿ ಪೂಜೆ ಮಾಡುವ ದೇವಸ್ಥಾನಗಳು ಗಂಡಸರಿಗೆ ಮೀಸಲಾಗಿತ್ತಂತೆ, ಖಜೂರಾಹೊ ಅದರಲ್ಲಿ ಒಂದು. ಆದರೆ ಈಗ ಅಂತಹ ಯೋನಿ ಪೂಜೆ ಮಾಡುವ ದೇವಸ್ಥಾನಗಳಿಗೆ ನುಗ್ಗುವುದು ಮಹಿಳೆಯರೇ ಹೆಚ್ಚು. ವಿಚಿತ್ರವೆಂದರೆ ಇಂತಹ ದೇವಸ್ಥಾನಕ್ಕೆ ಹೋಗುವ ಭಕ್ತರಲ್ಲಿ ಶೇ.98 ಜನರಿಗೆ ತಾವು ಯೋನಿ ಪೂಜೆ ಮಾತ್ರವಲ್ಲ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಯೋನಿಯ ಸೂಕ್ಷ್ಮ ಭಾಗವಾದ ಭಗ (ಕ್ಲಿಟೋರಿಸ್) ಎಂಬ ಅಂಗವನ್ನೂ ಪ್ರತ್ಯೇಕವಾಗಿ ಪೂಜಿಸು ತ್ತೇವೆ ಎಂಬುದೇ ಗೊತ್ತಿಲ್ಲ. ಯಾಕೆಂದರೆ ಅರ್ಚಕರು ಮಂದ ಬೆಳಕಿನ ಗರ್ಭಗುಡಿಯ ಕೊನೆಯಲ್ಲಿರುವ ಲೋಹದ ಮಾನವರೂಪದ ಉತ್ಸವಮೂರ್ತಿಯನ್ನು ತೋರಿಸಿ ಅದೇ ಮೂಲ ದೇವರು ಎಂದು ಹೇಳಿ ಜನರನ್ನು ಅನಾದಿಕಾಲದಿಂದಲೂ ಹಾದಿ ತಪ್ಪಿಸುತ್ತಿದ್ದಾರೆಯೇ ವಿನಃ ಮೂಲ ಲಿಂಗವನ್ನು ತೋರಿಸುವುದೇ ಇಲ್ಲ.

ಮಂಗಳೂರು ಹತ್ತಿರದ ಕಟೀಲು ಬಪ್ಪನಾಡು ಮುಂತಾದ ಎಲ್ಲಾ ದುರ್ಗಾಪರಮೇಶ್ವರಿ ದೇವಳಗಳಲ್ಲಿ ಪೂಜೆಗೊಳ್ಳುವ ಮೂಲ ಪ್ರತಿಮೆಗಳು ಸಹ ಮಹಿಳೆಯ ಗುಪ್ತಾಂಗ ಸ್ವರೂಪದ ಲಿಂಗಗಳೇ ಆಗಿವೆ. ಇದು ಆಗಾಗ ಕಟೀಲು ಮತ್ತು ಬಪ್ಪನಾಡಿಗೆ ಎಡತಾಕುವ ಮಾಜಿ ಪ್ರಧಾನಿ ದೇವೇಗೌಡರಿಗೆ ಗೊತ್ತಿಲ್ಲವೆಂದ ಮೇಲೆ ಇತರರಿಗೆ ಗೊತ್ತಾಗಲೂ ಹೇಗೆ ಸಾಧ್ಯ! ದೇವೇಗೌಡರನ್ನು ನೋಡಿ ಈಗ ಹಳೆ ಮೈಸೂರು ಭಾಗದ ಶೂದ್ರರೆಲ್ಲಾ ಯೋನಿ ಮತ್ತು ಭಗ ಪೂಜೆಗಾಗಿ ಕರಾವಳಿಯ ಕಟೀಲು ಮತ್ತು ಬಪ್ಪನಾಡಿಗೆ ಮುಗಿಬೀಳುತ್ತಿದ್ದಾರೆ. ಕರಾವಳಿಯ ಯಾವುದೇ ದುರ್ಗಾಪರಮೇಶ್ವರಿ ದೇವಳಗಳಲ್ಲಿ ಈ ಭಗಲಿಂಗದ ಫೋಟೋಗಳನ್ನು ಮಾರದಂತೆ ಅಲ್ಲಿಯ ವ್ಯಾಪಾರಿಗಳಿಗೆ ಅರ್ಚಕರೇ ನಿರ್ಬಂಧ ವಿಧಿಸಿದ್ದಾರೆ. ಹಾಗಾಗಿ ಇಲ್ಲಿಯ ಎಲ್ಲಾ ದುರ್ಗಾಪರಮೇಶ್ವರಿ ದೇವಸ್ಥಾನಗಳ ಹತ್ತಿರ ಯಾವುದೇ ಅಂಗಡಿಯಲ್ಲೂ ಜನರಿಗೆ ಮೂಲ ಯೋನಿಲಿಂಗ/ಭಗಲಿಂಗದ ಫೋಟೋಗಳು ಸಿಗುವುದೇ ಇಲ್ಲ. ಹಾಗಾಗಿ ದಡ್ಡ ಶೂದ್ರರೆಲ್ಲಾ ಮಾನವರೂಪದ ಉತ್ಸವಮೂರ್ತಿಯ ಫೋಟೋಗಳನ್ನೇ ಖರೀದಿಸಿಕೊಂಡು ಹೋಗಿ ಮನೆಯಲ್ಲಿ ಪೂಜಿಸುತ್ತಾರೆ.

ಮೂಲತಃ ಕರಾವಳಿಯ ದುರ್ಗಾಪರಮೇಶ್ವರಿ ದೇವಸ್ಥಾನಗಳು ವೈದಿಕ ದೇವಸ್ಥಾನಗಳು ಅಲ್ಲವೇ ಅಲ್ಲ. ಇಲ್ಲಿಯ ತುಳುವ ಶೂದ್ರರು ಉಲ್ಲಾಳ್ತಿ ಮತ್ತು ಉಲ್ಲಾಯ ಎಂಬ ಭೂತಗಳನ್ನು ಯೋನಿಲಿಂಗ/ಭಗಲಿಂಗದ ರೂಪದಲ್ಲಿಯೇ ಪೂಜಿಸುತ್ತಿದ್ದದ್ದು. ನಂತರ ವೈದಿಕರು ಮತ್ತು ಅವರ ಕಾಲು ನೆಕ್ಕುವ ಮೇಲ್ಜಾತಿ ಬಂಟರು ಕೂಡಿ ಈ ಉಲ್ಲಾಯ-ಉಲ್ಲಾಳ್ತಿ ಭೂತಗಳ ಗುಡಿಗಳನ್ನು ಕೈವಶ ಮಾಡಿಕೊಂಡು ವೈದಿಕ ದೇವಾಲಯವಾಗಿ ಪರಿವರ್ತಿಸಿ ಕಾಲ್ಪನಿಕ ರಾಕ್ಷಸನನ್ನು ದುರ್ಗೆ ಕೊಲ್ಲುವ ಪೊಳ್ಳು ಕ್ಷೇತ್ರ ಪುರಾಣ ಹೊಸೆದು ಮುಗ್ಧ ಜನರನ್ನು ಪೆದ್ದು ಮಾಡಿದರು ಹಾಗೂ ಈಗ ಅದೇ ತುಳುವರ ಭೂತಗಳನ್ನು ಅರ್ಚಿಸುತ್ತಾ ವೈದಿಕರು ಕೋಟ್ಯಾಧೀಶರಾದರು. ಮೈಸೂರು ಬೆಂಗಳೂರಿನವರು ಈಗ ಇಷ್ಟು ದೂರ ಬಂದು ಪೂಜಿಸಿಹೋಗುವುದು ಯೋನಿ ಸಂಕೇತದ ತುಳುವರ ಭೂತಗಳನ್ನೇ ಹೊರತು ದುರ್ಗೆಯನ್ನಲ್ಲ. ದುರ್ಗಾದೇವಿಗೇ ತುಳು ಭಾಷೆಯಲ್ಲಿ ಉಲ್ಲಾಳ್ತಿ ಎಂದು ಸ್ಥಳೀಯರು ಕರೆಯುತ್ತಾರೆ ಎಂಬುದಾಗಿ ವೈದಿಕರು ಹೇಳುತ್ತಿರುವುದೂ ಸುಳ್ಳು. ಸ್ಥಳೀಯ ಎಲ್ಲ ದುರ್ಗಾಪರಮೇಶ್ವರಿ ದೇವಸ್ಥಾನಗಳಲ್ಲಿ ಏನಾದರೂ ಕಾರಣಿಕ ಇರುವುದು ನಿಜವಾಗಿದ್ದರೆ ಅದು ಸ್ಥಳೀಯ ತುಳುವರ ಭೂತ-ದೈವಗಳ ಕಾರಣಿಕವೇ ಹೊರತು ವೈದಿಕ ದುರ್ಗಾದೇವಿಯದ್ದು ಅಲ್ಲವೇ ಅಲ್ಲ ಎಂದು ತುಳುವ ಶೂದ್ರರ ನಂಬಿಕೆ. ಒಳನಾಡಿನ ಶೂದ್ರರು ಕರಾವಳಿಯ ವೈದಿಕ ದೇವಳಗಳಿಗೆ ನುಗ್ಗುವ ಮೊದಲು ತುಳುನಾಡಿನ ಭೂತಾರಾಧನೆ ಹಾಗೂ ಭಗ/ಯೋನಿ ಮುಂತಾದ ಮಾನವನ ಗುಪ್ತಾಂಗಗಳ ಪೂಜೆಯ ಇತಿಹಾಸ ತಿಳಿದುಕೊಂಡರೆ ಒಳಿತು.

ಇನ್ನು ವೇಶ್ಯೆಯರನ್ನು ಪೂಜಿಸುವ ಬಗ್ಗೆ ಹೇಳಬೇಕೆಂದರೆ- ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿ ಈಗಲೂ ಇರುವ ದೇವದಾಸಿ ಪದ್ಧತಿಯು ಮೂಲತಃ ಯೋನಿ ಪೂಜೆಯು ವಿಕಾರಗೊಂಡ ರೂಪವಾಗಿದೆ. ಒಬ್ಬ ಪರಿಶುದ್ಧ ಕನ್ಯೆಯನ್ನು ಹಿಂದಿನ ಕಾಲದಲ್ಲಿ ಯೋನಿ ಪೂಜೆಗಾಗಿ ಊರವರು ಆರಿಸಿ ಅವಳನ್ನು ದೇವರಿಗೆ ಬಿಡುವ ಪದ್ಧತಿಯಿತ್ತು, ಆದರೆ ನಂತರ ಈ ಕನ್ಯೆಯ ಯೋನಿ ಪೂಜೆಯೇ ವಿರೂಪಗೊಂಡು ಊರಿನ ಪ್ರಬಲ ಪಟ್ಟಭದ್ರರು ಆ ಪವಿತ್ರ ಕನ್ಯೆಯನ್ನು ದೇವಸ್ಥಾನದ ನರ್ತಕಿಯಾಗಿ ಮಾಡಿ ನಂತರ ವೇಶ್ಯೆಯಾಗಿ ಪರಿವರ್ತಿಸಿ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿರಬೇಕು. ಹೀಗೆ ಯೋನಿಪೂಜೆಯೇ ವೇಶ್ಯಾವಾಟಿಕೆಗೆ ದಾರಿ ಮಾಡಿಕೊಟ್ಟಿರಬೇಕು. ಸೂಳೆಬಾವಿ, ಸೂಳೆದಾಳ, ಸೂಳೆಕೆರೆ ಎಂಬ ಊರುಗಳಿಗೆ ಆಯಾ ಹೆಸರು ಇಟ್ಟಿರುವುದು ಹಿಂದಿನ ಕಾಲದಲ್ಲಿ ಯೋನಿ ಪೂಜೆಯಲ್ಲಿ ಕುಳಿತುಕೊಳ್ಳುವ ವೇಶ್ಯೆಯರಿಗೆ ಸಮಾಜದಲ್ಲಿ ಇದ್ದ ಅಪಾರ ಗೌರವದ ಸೂಚಕ.

ನಮ್ಮ ಹಿರಿಯರು ಶಿಶ್ನ ಹಾಗೂ ಯೋನಿ ಪೂಜೆ ಮಾಡುತ್ತಿದ್ದರು ಎಂದು ನಾವು ಹೇಳಿದರೆ ಈಗಿನ ಕೆಲವು ಅರೆ-ಜ್ಞಾನಿಗಳು ತಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಯಿತು ಎಂದು ಜಗಳಕ್ಕೆ ಇಳಿಯುತ್ತಾರೆ, ಮತ್ತೆ ಕೆಲವರು ಕೀಳರಿಮೆಯಿಂದ ಬಳಲುತ್ತಾರೆ. ಇದಕ್ಕೆ ಉದಾಹರಣೆ: ನಮ್ಮೂರಿನ ರಾಷ್ಟ್ರೀಕೃತ ಬ್ಯಾಂಕ್ ಶಾಖೆಗೆ ಅಸ್ಸಾಮ್ ರಾಜ್ಯದ ಒಬ್ಬ ಅಧಿಕಾರಿ ವರ್ಗವಾಗಿ ಬಂದ. ಅವನ ಪರಿಚಯವಾದ ಮೇಲೆ ಒಮ್ಮೆ ನಾನು ಅಸಾಮಿನಲ್ಲಿ ಕಾಮಾಖ್ಯಾ ದೇವಲದಲ್ಲಿ ಯೋನಿ ಪೂಜೆ ನಡೆಯುತ್ತದೆ ಅಲ್ಲವೇ ಎಂದು ಕೇಳಿದೆ. ಅದಕ್ಕೆ ಆತ ಇಲ್ಲ ಅದೆಲ್ಲಾ ಸುಳ್ಳು ಎಂದು ಸಿಟ್ಟಿನಿಂದ ಹೇಳಿದನು. ನಂತರ ಅವನನ್ನು ನಾನು ಇಲ್ಲಿಯ ಬಪ್ಪನಾಡು ಹಾಗೂ ಕಟೀಲಿನ ಕುದ್ರುವಿನಲ್ಲಿ ಕಟ್ಟಿರುವ ಹೊಸ ಗುಡಿಗೆ ಕರೆದುಕೊಂಡು ಹೋಗಿ ಅಲ್ಲಿ ಪೂಜೆಗೊಳ್ಳುವ ಮೂಲ ಲಿಂಗವನ್ನು ತೋರಿಸಿ ಇದು ಯೋನಿಲಿಂಗ ಹಾಗೂ ಅದರ ನಟ್ಟನಡುವೆ ಇರುವ ತ್ರಿಕೋನಾಕೃತಿಯ ಕಲ್ಲೇ ಭಗಲಿಂಗ ಎಂದು ವಿವರಿಸಿದ ಮೇಲೆ ಅವನ ಅಸ್ಸಾಮ್ ರಾಜ್ಯದ ಕಾಮಾಖ್ಯಾ ದೇವಲದ ಬಗ್ಗೆ ಅವನಿಗಿದ್ದ ಕೀಳರಿಮೆ ಬಿಟ್ಟುಹೋಯಿತು. ನಂತರ ತನ್ನ ಅಸ್ಸಾಮ್‌ನಲ್ಲಿಯೂ ಯೋನಿ ಹಾಗೂ ಭಗದ ಪೂಜೆಯಾಗುತ್ತದೆ ಎಂದು ಅವನು ಒಪ್ಪಿಕೊಂಡನು.

ನಮ್ಮ ಕುಟುಂಬ ಸ್ನೇಹಿತರಾದ 70 ವರ್ಷದ ಶ್ರೀಮಂತ ಹಿರಿಯರೊಬ್ಬರು ಬಪ್ಪನಾಡು ಹಾಗೂ ಕಟೀಲಿನ ದುರ್ಗಾ ದೇವಳಗಳಿಗೆ ಹಿಂದಿನ 50 ವರ್ಷದಲ್ಲಿ ನೂರು ಬಾರಿಯಾದರೂ ಹೋಗಿರುವರು. ಆದರೆ ಅಲ್ಲಿ ಪೂಜೆಗೊಳ್ಳುತ್ತಿರುವುದು ಏನೆಂದು ಅವರಿಗೆ ಗೊತ್ತೇ ಇರಲಿಲ್ಲ. ಆದರೆ ಒಮ್ಮೆ ನಾವು ಅವರಿಗೆ ಅಲ್ಲಿಯ ಲಿಂಗಗಳ ಯೋನಿ ಸ್ವರೂಪ ಹೇಳಿದಾಗ ಅವರು ನಂಬಲಿಲ್ಲ. ಆಮೇಲೆ ಅವರೇ ನೇರವಾಗಿ ಹೋಗಿ ಅರ್ಚಕರನ್ನೇ ಕೇಳಿತಿಳಿದುಕೊಂಡ ಮೇಲೆ ಅವರು ಆ ದುರ್ಗಾ ಪರಮೇಶ್ವರಿ ದೇವಳಗಳಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟರು. ನಂತರ ಅವರು ಮನೆಯಲ್ಲಿಯೇ ಕೃಷ್ಣನ ಪೂಜೆ ಮಾಡುತ್ತಾ ಕೃಷ್ಣನ ಮೂರ್ತಿಗೆ ಶಂಖದಿಂದ ತೀರ್ಥ ಹೊಯ್ಯುತ್ತಿದ್ದರು. ನಾನು ಆ ಶಂಖ ಸಹ ಯೋನಿಯ ಪ್ರತೀಕ ಬೇಕಾದರೆ ಶಂಖದ ಸ್ವರೂಪ ಸರಿಯಾಗಿ ನೋಡಿ ಎಂದು ಹೇಳಿದ ಮೇಲೆ ಅವರು ತಮ್ಮ ಮನೆಯ ಪೂಜೆಯಲ್ಲಿ ಶಂಖದ ಬಳಕೆಯನ್ನೂ ನಿಲ್ಲಿಸಿದರು. ಹೀಗೆ ನಮ್ಮ ಮೂಲ ಸಂಸ್ಕೃತಿಯ ನೈಜಜ್ಞಾನ ಇಲ್ಲದವರೆಲ್ಲಾ ಇಂತಹ ಸಂಕುಚಿತ ಬುದ್ಧಿಯ ಮಡಿವಂತಿಕೆ ತೋರಿಸುತ್ತಾರೆ ಅಷ್ಟೇ. ಬಾಲಿವುಡ್ ತಾರೆಯರಾದ ಶಿಲ್ಪಾ ಶೆಟ್ಟಿ ಮತ್ತು ಸುನಿಲ್ ಶೆಟ್ಟಿ ಆರು ತಿಂಗಳಿಗೊಮ್ಮೆ ನಮ್ಮೂರಿಗೆ ಬಂದು ಇಲ್ಲಿಯ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಗಡದ್ದಾಗಿ ಪೂಜಿಸಿ ಹೋಗುತ್ತಾರೆ. ಆದರೆ ಅವರಿಗೆ ಮನುಷ್ಯನ ಯಾವ ಅಂಗವನ್ನು ತಾವು ಪೂಜಿಸುತ್ತಿದ್ದೇವೆ ಎಂದು ಅವರ ಸ್ಥಳೀಯ ಸಂಬಂಧಿಕರು ಈವರೆಗೂ ಹೇಳಿಯೇ ಇಲ್ಲ, ಪಾಪ. ತಮಿಳುನಾಡು ಮತ್ತು ಕೇರಳದ ಸಿನೆಮಾ ತಾರೆಯರು ಹಾಗೂ ದೊಡ್ಡ ರಾಜಕಾರಣಿಗಳು ಆಗಾಗ ಕೊಲ್ಲೂರಿಗೆ ಬಂದು ಮೂಕಾಂಬಿಕೆಯ ದರ್ಶನ ಪಡೆಯುತ್ತಾರೆ. ಆದರೆ ಕೊಲ್ಲೂರಿನಲ್ಲಿ ಈಗಲೂ ಪೂಜೆಗೊಳ್ಳುತ್ತಿರುವುದು ಶಿಶ್ನ ಹಾಗೂ ಯೋನಿಯ ಪ್ರತೀಕಗಳಾದ ಲಿಂಗಗಳು ಎಂದು ಇವರಾರಿಗೂ ಗೊತ್ತಿಲ್ಲ. ನಮ್ಮ ಕರಾವಳಿಯ ಕಾವಿಧಾರಿ ಬಂಟ ಸ್ವಾಮಿಗಳೇ ಆಗಾಗ ಕೊಲ್ಲೂರಿಗೆ ಹೋಗಿ ಉರುಳುಸೇವೆ ಮಾಡಿಬರುತ್ತಾರೆ. ಆದರೆ ಈ ಕಾವಿಧಾರಿಗಳಿಗೂ ತಮ್ಮ ಪೂಜೆ ಮಾನವನ ಯಾವ ಗುಪ್ತಾಂಗಕ್ಕೆ ಸಲ್ಲುತ್ತಿದೆ ಎಂಬುದೇ ಗೊತ್ತಿಲ್ಲ.

ಯೋನಿಯು ಭೂದೇವಿಗೆ ಸಮಾನ ಹಾಗೂ ರೈತನ ನೇಗಿಲು ಪುರುಷ ಶಿಶ್ನವಿಗೆ ಸಮಾನ, ಹಾಗಾಗಿ ನೇಗಿಲಿನಿಂದ ಭೂಮಿ ಉಳುವುದು ಸಂಭೋಗಕ್ಕೆ ಸಮಾನ ಎಂಬ ನಂಬಿಕೆಯೂ ಕೆಲವೆಡೆ ಇದೆ. ಪ್ರಾಣಿಗಳಲ್ಲಿ ಸಂಭೋಗದ ನಂತರ ಸಂತಾನವಾಗುವುದು ಹಾಗೂ ಭೂಮಿಯಲ್ಲಿ ಉಳುಮೆಯ ನಂತರ ಫಸಲು ಆಗುವುದು ಸಮಾನ ಕ್ರಿಯೆ ಎಂದು ಹಳ್ಳಿಗಳಲ್ಲಿ ನಂಬಿಕೆ ಇದೆ. ಯೋನಿ ಅರ್ಥಾತ್ ಭಗದಿಂದ ಉತ್ಪತ್ತಿಯಾದವರೇ ಭಗವತಿ ಭಗವಂತ ಭಗವಾನ್. ಈ ಶಬ್ದದಿಂದಲೇ ಭಗತ್ ಭಗಿನಿ ಭಗವಾ ಶಬ್ದಗಳೂ ಹುಟ್ಟಿರುವುದು. ಆದಿ ಶಂಕರರೂ ಭಗವತಿ ದೇವಿಗೆ ಪೂಜಿಸುತ್ತಿದ್ದದ್ದು ಯೋನಿಪೂಜೆಯೇ ಆಗಿತ್ತಂತೆ.

- ಗಿರೀಶ್ ಟಿ ಶೆಟ್ಟಿ, ಮುಲ್ಕಿ



ಹೊಗಳಿಕೆ ತೆಗಳಿಕೆ


ದೇಶದ ಪ್ರಥಮ ಸುಳ್ಳು ಪ್ರಧಾನಿ

1977 ಮಾರ್ಚ್‌ನಿಂದ 1979 ಜುಲೈ ಕೊನೆಯವರೆಗೆ ಮೊರಾರ್ಜಿ ದೇಸಾಯಿ ಭಾರತದ ಪ್ರಧಾನ ಮಂತ್ರಿಯಾಗಿದ್ದರು. ಅವರೂ ಗುಜರಾತಿ. ಇಂದಿರಾ ಗಾಂಧಿಯವರ ಎಮರ್ಜನ್ಸಿ ಮುಗಿದನಂತರ ಮಾರ್ಚ್ 1977 ರಲ್ಲಿ ನಡೆದ ಚುನಾವಣೆಯಲ್ಲಿ ಜನತಾ ಪಾರ್ಟಿ ಭರ್ಜರಿ ಜಯ ಗಳಿಸಿ ಅತ್ಯಂತ ಜನಪ್ರಿಯವಾಗಿತ್ತು. ಮೊರಾರ್ಜಿ ದೇಸಾಯಿಯವರು ಅತ್ಯಂತ ಪ್ರಾಮಾಣಿಕ ಹಾಗೂ ನೇರ ನಡೆನುಡಿಯ ವ್ಯಕ್ತಿಯಾಗಿದ್ದರು. ಆದರೂ ಅವರು ಕೇವಲ 28 ತಿಂಗಳು ಮಾತ್ರ ಪ್ರಧಾನಿ ಆಗಿರುವುದು ಸಾಧ್ಯವಾಗಿತ್ತು. ಈಗ ಇತಿಹಾಸ ಮರುಕಳಿಸುತ್ತಿದೆ. ಮೊರಾರ್ಜಿಯವರಂತೆ ಗುಜರಾತಿಯಾಗಿರುವ ಮೋದಿ ಪ್ರಧಾನಿಯಾಗಿ ಮುಂದಿನ ವಾರ 24 ತಿಂಗಳು ಪೂರ್ಣವಾಗುತ್ತದೆ. ಮೊರಾರ್ಜಿಯವರ ತದ್ವಿರುದ್ಧ ವ್ಯಕ್ತಿತ್ವವಿರುವ ಮೋದಿಯವರ ಆಧಿಕಾರ ಇನ್ನು ಕೆಲವೇ ತಿಂಗಳು ಮಾತ್ರ ನಡೆಯುವುದಂತೆ.

ಕೆಲವು ಬೊಗಳೆ ಟಿವಿ ಜ್ಯೋತಿಷಿಗಳ ಪ್ರಕಾರ ಶನಿದೇವರು ಒಂದು ಮನೆಯಲ್ಲಿ ನಿಲ್ಲುವುದು ಕೇವಲ 30 ತಿಂಗಳಂತೆ. ಅದರಂತೆ ಶನಿದೇವರ ಜಾತಿಯವರದ್ದೂ ಅಧಿಕಾರ ನಡೆಯುವುದು ಕೇವಲ 30 ತಿಂಗಳಂತೆ. ವೈದಿಕ ಶಾಸ್ತ್ರಗಳ ಪ್ರಕಾರ ಒಂದೊಂದು ದೇವರಿಗೆ ಒಂದೊಂದು ಜಾತಿಯಿದೆಯಂತೆ. ಮಾನವರಿಗೆ ಜಾತಿ ಅಂಟಿಸಿ ಸಮಾಜದಲ್ಲಿ ಮೇಲು-ಕೀಳೆಂಬ ರೋಗ ತಾಗಿಸಿರುವ ವೈದಿಕರು ದೇವರಿಗೂ ಮೇಲು-ಕೀಳೆಂಬ ಜಾತಿರೋಗ ಅಂಟಿಸಿಬಿಟ್ಟಿದ್ದಾರೆ. ಆದರಂತೆ ಎಳ್ಳೆಣ್ಣೆ ನೈವೇದ್ಯ ಬಯಸುವ ಶನಿದೇವರು ಗಾಣಿಗ ಜಾತಿಯ ದೇವರು ಎಂದು ಹೇಳಿ ವೈದಿಕ ಜ್ಯೋತಿಷಿಗಳು ತಮ್ಮ ಹೀನಬುದ್ಧಿ ತೋರಿಸಿದ್ದಾರೆ. ಹಾಗಾಗಿ ಗಾಣಿಗ ಮೋದಿ ಅಧಿಕಾರಕ್ಕೆ ಬಂದಕೂಡಲೇ ಶನಿ ಪ್ರಭಾವದಿಂದ ದೇಶದಲ್ಲಿ ಪ್ರಾಕೃತಿಕ ವಿಕೋಪಗಳು ಹೆಚ್ಚಿ ಈಗ ಭೀಕರ ಬರಗಾಲ ಬಿದ್ದಿದೆ, ಕುಂಭ ಮೇಳದಲ್ಲಿ ಭಾರಿ ಅನಾಹುತವಾಗಿದೆ, ಮುಂದಿನ ಮಳೆಗಾಲ ನಮ್ಮ ದೇಶ ಭಾರಿ ಪ್ರವಾಹ ಎದುರಿಸಲಿದೆಯೆಂದು ಕೆಲವು ಜ್ಯೋತಿಷಿಗಳು ಬೊಂಗು ಬಿಟ್ಟು ತಮ್ಮ ಮೇಲ್ಜಾತಿ ಪೂರ್ವಾಗ್ರಹ ತೋರಿಸಿದ್ದಾರೆ. ಹಾಗಾದರೆ ಬ್ರಾಹ್ಮಣರಾಗಿದ್ದ ನೆಹರೂ, ಇಂದಿರಾ, ಮೊರಾರ್ಜಿ, ನರಸಿಂಹರಾವ್, ವಾಜಪೇಯಿ ಇವರೆಲ್ಲಾ ಪ್ರಧಾನಿಯಾಗಿದ್ದಾಗ ಭಾರತದಲ್ಲಿ ಯಾವುದೇ ಪ್ರಾಕೃತಿಕ ವಿಕೋಪ ಜರುಗಿರಲಿಲ್ಲವೇ?

ಮೌಢ್ಯ ಪಸರಿಸುವ ಜ್ಯೋತಿಷಿಗಳ ಮಾತನ್ನು ಬದಿಗಿಟ್ಟು ಅವಲೋಕಿಸಿದರೂ ಮೋದಿಯ ಒಂದೊಂದೇ ಸುಳ್ಳುಗಳು ಹೊರಬರುತ್ತಿದ್ದು ಅವರು ಘೋಷಿಸಿರುವ 1978 ರ ದಿಲ್ಲಿ ವಿವಿಯ ಬಿ.ಎ. ಪದವಿ ನಕಲಿ ಎಂದು ಆಪ್ ಪಕ್ಷ ದಾಖಲೆ ಸಹಿತ ಸಿದ್ಧ ಮಾಡಿದೆ. ಸಂಪೂರ್ಣ ಆರ್‌ಎಸ್‌ಎಸ್ ಹಾಗೂ ಎಬಿವಿಪಿ ಕೈಯಲ್ಲಿರುವ ಗುಜರಾತ್ ವಿವಿಯ 1983 ರ ಸ್ನಾತಕೋತ್ತರ (ಎಮ್.ಎ) ಪದವಿ ಸಹ ಖೋಟಾ ಪದವಿ ಎಂದು ಸಾಕ್ಷ್ಯಗಳು ದೊರೆತಿವೆ. 'ಎಂಟೈರ್ ಪಾಲಿಟಿಕಲ್ ಸಾಯನ್ಸ್' (ಸಂಪೂರ್ಣ ರಾಜಕೀಯ ಶಾಸ್ತ್ರ) ಎಂಬ ವಿಷಯ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ಕೇವಲ 'ಮೇಜರ್ ಪಾಲಿಟಿಕಲ್ ಸೈನ್ಸ್' ಎಂಬ ವಿಷಯ ಮಾತ್ರ ಎಲ್ಲಾ ವಿವಿಗಳಲ್ಲಿ ಇರುವುದು.

ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗ ತಿಂಗಳಿಗೆ ರೂ. 60,000 ಸಂಬಳ ಪಡೆಯುತ್ತಿದ್ದರೂ ಅವರು ತನ್ನ ಚುನಾವಣಾ ಅಫಿಡವಿಟ್‌ನಲ್ಲಿ ತಾನು ಇಡೀ ವರ್ಷಕ್ಕೆ ಕೇವಲ ಒಂದೂವರೆ ಲಕ್ಷ ಆದಾಯ ಹೊಂದಿದ್ದಾಗಿ ಘೋಷಿಸಿಕೊಂಡಿದ್ದಾರೆ. ಇದೂ ಸಹ ಮೋದಿಗೆ ಉರುಳಾಗಲಿದೆ. ಗುಜರಾತಿನಲ್ಲಿ ಮೋದಿಯ ಆಡಳಿತದಲ್ಲಿ ಹಲವು ಗುಜರಾತಿ ಕಂಪನಿಗಳಿಗೆ ಅಲ್ಲಿಯ ರಾಜ್ಯ ಸರಕಾರದ



ವಿತ್ತ ಸಂಸ್ಥೆಗಳು ವಿಜಯ ಮಲ್ಯಾನಿಗಿಂತಲೂ ಹಲವು ಪಟ್ಟು ದೊಡ್ಡ ಸಾಲಗಳನ್ನು ಕೊಟ್ಟಿದ್ದು ಅವೆಲ್ಲಾ ಮುಳುಗಿವೆಯಂತೆ. ಇನ್ನು ಮೋದಿಯವರ ಇನ್ನೊಂದು ದೊಡ್ಡ ಸುಳ್ಳೇನಾದರೂ ದಾಖಲೆ ಸಹಿತ ಹೊರಬಂದರೆ ಅವರು ಪ್ರಧಾನಿ ಹುದ್ದೆಯಿಂದ ಕೆಳಗಿಳಿದು ಎಲ್.ಕೆ.ಅಡ್ವಾಣಿ ಅಥವಾ ರಾಜನಾಥಸಿಂಗರಿಗೆ ಪ್ರಧಾನಿ ಹುದ್ದೆ ಬಿಟ್ಟುಕೊಡುವುದು ಅನಿವಾರ್ಯವಾಗಲಿದೆ. ಹೀಗೆ ಸುಳ್ಳಿನ ಸರಮಾಲೆ ಹೆಣೆಯುತ್ತಿರುವ 56 ಇಂಚು ಉದ್ದ ನಾಲಿಗೆಯ ಬೂಸಿಬಸ್ಯಾ ಆಗಲಿದ್ದಾರೆ ದೇಶದ ಪ್ರಥಮ ಸುಳ್ಳು ಪ್ರಧಾನಿ.


- ಜೆ.ರವಿಕಿರಣ, ಮೈಸೂರು

ದೇವರ ಭಕ್ತರ ಭಯಂಕರ ಸಮಾಜಸೇವೆ

ಗುಜರಾತಿಗಳು ದೊಡ್ಡ ಲೆಕ್ಕಾಚಾರದ ವ್ಯಾಪಾರಿ ಬುದ್ಧಿಯವರು ಎಂಬುದು ನಿಜ. ಆದರೆ ಕೆಲವರು ತುಂಬಾ ತೂಕದ ಭಾವನೆಗಳುಳ್ಳ ಭಾವುಕ ಜನರೂ ಆಗಿರುತ್ತಾರೆ ಎಂಬುದಕ್ಕೆ ಈ ಘಟನೆ ಸಾಕ್ಷಿ- ಮೊನ್ನೆ ಮೊನ್ನೆ ಒಬ್ಬ ಸೌದಿ ಅರೇಬಿಯಾದ ಶೇಖನೊಬ್ಬ ಲವ್ ಜಿಹಾದ್ ಭಯದ ಹೊರತಾಗಿಯೂ ಗುಜರಾತಿ ಜೈನ ಮೋದಾನಿ ಎಂಬವನ ಮಗಳನ್ನು ಪ್ರೇಮಿಸಿದ. ನಂತರ ಧೈರ್ಯವಹಿಸಿ ಆ ಹುಡುಗಿಯ ಅಪ್ಪನನ್ನೂ ಭೇಟಿಯಾಗಿ ಹೇಳಿದ "ಮೋದಾನಿ ಅಂಕಲ್ ನಾನು ನಿಮ್ಮ ಮಗಳನ್ನು ಬಹಳ ಪ್ರೇಮಿಸುತ್ತೇನೆ. ಅವಳನ್ನು ನನಗೆ ಮದುವೆ ಮಾಡಿಕೊಟ್ಟರೆ ನಾನು ಅವಳ ಭಾರಕ್ಕೆ ಸಮನಾಗಿ ನಿಮಗೆ ಚಿನ್ನದ ಗಟ್ಟಿಗಳನ್ನು ಕೊಡುತ್ತೇನೆ." ಅದಕ್ಕೆ ಜೈನ ಒರಟಾಗಿ ಹೇಳಿದ "ನಂಗೆ ಸ್ವಲ್ಪ ಸಮಯ ಬೇಕು ಶೇಖೂ." "ನಿಮಗೆ ಯೋಚಿಸಲು ಸಮಯ ಬೇಕೆ?" ಎಂದು ಶೇಖ್ ಆತಂಕದಿಂದ ಕೇಳಿದ. "ಅಲ್ಲ, ನನ್ನ ಮಗಳ ಡೈಟಿಂಗ್ ಕೋರ್ಸ್ ಬಿಡಿಸಿ ಅವಳಿಗೆ ಸರಿಯಾಗಿ ತಿನ್ನಿಸಿ ಅವಳ ಭಾರ ಹೆಚ್ಚಿಸಿ ಭಾರವಾದ ಹೃದಯದಿಂದ ಅವಳನ್ನು ಬೀಳ್ಕೊಡಲು ನನಗೆ ಸ್ವಲ್ಪ ಸಮಯ ಬೇಕು" ಎಂದು ಗುಜ್ಜು ಹೇಳಿದ.

ಇಂತಹದ್ದೇ ಒಂದು ತೂಕದ ಭಾವನಾತ್ಮಕ ವಿಷಯ ನಮ್ಮ ಉಡುಪಿಯಲ್ಲೂ ನಡೆಯಿತು. ಜನವರಿ ಪರ್ಯಾಯದ ನಂತರ ದುಬೈಯಲ್ಲಿ ಅದೇನೋ ವ್ಯಾಪಾರ ನಡೆಸುವ ಮಂಗಳೂರಿನ ಶೂದ್ರ ಶೆಟ್ಟಿಯೊಬ್ಬ ಪೇಜಾವರ ಸ್ವಾಮೀಜಿಯನ್ನು ಭೇಟಿಯಾಗಿ ಬೆಳ್ಳಿ ಗಟ್ಟಿಯಲ್ಲಿ ಅವರ ತುಲಾಭಾರ ನಡೆಸಿ ಅಷ್ಟು ಬೆಳ್ಳಿಯನ್ನು ಅವರಿಗೆ ಅರ್ಪಿಸಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿದ. ಸ್ವಲ್ಪ ಸಮಯ ಕೊಡಿ ಎಂದು ಸ್ವಾಮೀಜಿ ಹೇಳಿದರು. "ಆಲೋಚಿಸಲು ಸಮಯ ಬೇಕೆ?" ಎಂದು ಆತಂಕದಿಂದ ಕೇಳಿದ ಶೆಟ್ಟಿ. "ಅಲ್ಲ, ನನ್ನ ಭಾರ ಹೆಚ್ಚಿಸಲು ಸಮಯಬೇಕು" ಎಂದರು ಸ್ವಾಮೀಜಿಗಳು. ಅದರಂತೆ ಹೃದಯ ಸಹಿತ ಸ್ವಾಮೀಜಿಗಳ ತೂಕ ಪರ್ಯಾಯದ ಸಮಯದಲ್ಲಿ ಕೇವಲ 35 ಕೆಜಿ ಇದ್ದಿದ್ದು ಕಳೆದ ವಾರ ಶೂದ್ರ ಶೆಟ್ಟಿ ಸ್ವಾಮೀಜಿಯ ತುಲಾಭಾರ ಮಾಡಿದಾಗ ಅವರು 40 ಕೆಜಿ ಬೆಳ್ಳಿ ಗಟ್ಟಿಗೆ ಸಮನಾಗಿದ್ದರು ಎಂದು ಪತ್ರಿಕೆಗಳು ವರದಿ ಮಾಡಿವೆ. ಅವರು ಕಾವಿಯೊಳಗೆ ಕಲ್ಲು ಕಟ್ಟಿಕೊಂಡಿದ್ದರು ಎಂಬುದು ಅವರ ವಿರೋಧಿಗಳ ಶುದ್ಧ ಕುಹಕವಂತೆ ಪಾಪ. ಭಕ್ತರ ತ್ಯಾಗ ಮತ್ತು ಸಮರ್ಪಣೆಗಳಿಂದ ಯಾವಾಗಲೂ ಎಲ್ಲ ಸ್ವಾಮೀಜಿಗಳ ಹಾಗೂ ಅಸ್ರಣ್ಣಗಳ ಹೃದಯ ಭಾರವಾಗುತ್ತದೆ ಎಂಬುದು ಅಷ್ಟೇ ಸತ್ಯ. ಹೃದಯ ಭಾರವಾದಾಗ ದೇಹವೂ ಭಾರವಾಗುವುದು ಸಹಜ ತಾನೇ.

ಕಳೆದ ತಿಂಗಳು ಮುಂಬೈಯ ಪಾಪ್ಯುಲರ್



ಅಂಡರ್‌ವರ್ಲ್ಡ್ ಶೆಟ್ಟಿಯೊಬ್ಬ ದುರ್ಗಾಪರಮೇಶ್ವರಿಗೂ ಒಂದು ಚಿನ್ನ-ವಜ್ರದ ಕಿರೀಟ ಅರ್ಪಿಸಿ ಧನ್ಯನಾದ. ಆದರೆ ಅವನ ವಿಶಾಲ ಫಾರ್ಮ್ ಹೌಸಿನ ಹತ್ತಿರ ಸರಕಾರ ಕುಡಿಯುವ ನೀರಿಗಾಗಿ ಕಟ್ಟುತ್ತಿರುವ ಬ್ಯಾರೇಜಿಗೆ ಆತ ಅಡ್ಡಗಾಲು ಹಾಕಿ ಮಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿಸಿದ. ಇದುವೇ ದೇವರ ಮುದ್ದಿನ ಭಕ್ತ ಭಯಂಕರರ ಸಮಾಜ ಸೇವೆ!

- ಕ್ಷಿತಿಜ್ ಕೆ ಹೆಗಡೆ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಶೀರ್ಷಿಕೆಯಿಂದಾಗಿಯೇ ಸಾಕಷ್ಟು ಕುತೂಹಲ ಮೂಡಿಸಿದೆ 'ಕರ್ವ' ಚಿತ್ರ. ಸಂಪೂರ್ಣ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ ಇದಾಗಿದ್ದು, ತೆಲುಗು ನಟಿ ಅನಿಶಾ ಆ್ಯಂಬ್ರೋಸ್ ಈ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದಾರೆ.

ಕನ್ನಡಕ್ಕೆ ಮತ್ತೆ ಬಂದ ಅನಿಶಾ



'ಕರ್ವ' ಸಿನಿಮಾ ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ಸಖತ್ ಕ್ರೇಜ್ ಹುಟ್ಟಿಸಿದೆ. 6-5=2 ಸಿನಿಮಾದಿಂದ ಅಚ್ಚರಿ ಸೃಷ್ಟಿಸಿದ್ದ ನಿರ್ಮಾಣ ಸಂಸ್ಥೆಯೇ ಈ ಚಿತ್ರಕ್ಕೂ ಬಂಡವಾಳ ಹೂಡಿದೆ. ಹೀಗಾಗಿ ನಿರೀಕ್ಷೆಯನ್ನೂ ಈ ಚಿತ್ರ ಮೂಡಿಸಿದೆ. ದೇವರಾಜ್, ತಿಲಕ್, ರೋಹಿತ್ ಸೇರಿದಂತೆ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿದ್ದಾರೆ. ತೆಲುಗಿನ ನಟಿ ಅನಿಶಾ ಆ್ಯಂಬ್ರೋಸ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಪಾತ್ರದ ಕುರಿತಾದ ಅನುಭವವನ್ನು ಅವರಲ್ಲಿ ಹಂಚಿಕೊಂಡಿದ್ದಾರೆ.

* ಕನ್ನಡದಲ್ಲಿ ಇದು ನಿಮಗೆ ಮೊದಲನೇ ಸಿನಿಮಾನಾ?

ಕನ್ನಡದಲ್ಲಿ 'ಕರ್ವ' ನನ್ನ ಎರಡನೇ ಚಿತ್ರ. ಈ ಹಿಂದೆ ಅಜಯ್ ರಾವ್ ನಟನೆಯ 'ಸೆಕೆಂಡ್ ಹ್ಯಾಂಡ್ ಲವರ್' ಸಿನಿಮಾದಲ್ಲಿ ನಟಿಸಿದ್ದೆ. ಆದರೆ, ನನಗೆ ಆ ಚಿತ್ರ ಹೆಸರು ತಂದು ಕೊಡಲಿಲ್ಲ. 'ಕರ್ವ' ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದೇನೆ.

* 'ಕರ್ವ' ಸಿನಿಮಾದಲ್ಲಿ ನಿಮಗೆ ಅವಕಾಶ ಸಿಕ್ಕಿದ್ದು ಹೇಗೆ?

'ಸೆಕೆಂಡ್ ಹ್ಯಾಂಡ್ ಲವರ್' ಚಿತ್ರದಲ್ಲಿ ನಟಿಸುವಾಗ 'ಕರ್ವ' ಚಿತ್ರದ ನಿರ್ದೇಶಕ ನವನೀತ್ ಅವರ ಪರಿಚಯ ಆಯಿತು. ಆಗ ಅವರು ತಮ್ಮ ಹೊಸ ಸಿನಿಮಾದ ಬಗ್ಗೆ ಹೇಳಿದ್ದರು. ಪಾತ್ರ ಮಾಡುವುದಾದರೆ, ಕತೆ ಹೇಳುತ್ತೇನೆ ಅಂದರು. ಅವರ ಉತ್ಸಾಹ ನೋಡಿ, ಕತೆ ಕೇಳಿದೆ. ಸ್ಕ್ರಿಪ್ಟ್ ತುಂಬಾನೇ ಹಿಡಿಸಿತು. ನಾನು ಈ ಪಾತ್ರವನ್ನು ನಿರ್ವಹಿಸಬಹುದಾ ಎಂಬ ಅನುಮಾನ ಕೂಡ ನನ್ನಲ್ಲಿತ್ತು. ನನ್ನಲ್ಲಿದ್ದ ಗೊಂದಲವನ್ನು ನಿವಾರಿಸಿದರು. ಹೀಗಾಗಿ ಸಲೀಸಾಗಿ ಪಾತ್ರ ಮಾಡಲು ಅನುಕೂಲ ಆಯಿತು.

* ಇಲ್ಲಿ ನಿಮ್ಮದು ಯಾವ ರೀತಿಯ ಪಾತ್ರ? ಸಸ್ಪೆನ್ಸ್ ಸಿನಿಮಾದಲ್ಲಿ ನಾಯಕಿಯ ಪಾತ್ರಕ್ಕೆ ಮಹತ್ವ ಇದೆಯಾ?

ಶ್ರೀಮಂತ ಕುಟುಂಬದಲ್ಲಿ ಬೆಳೆದ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಇಲ್ಲಿ ನನ್ನದು ಎರಡು ರೀತಿಯ ಪಾತ್ರ. ಮೊದಮೊದಲು ತುಂಬಾ ಮುಗ್ಧ ಹುಡುಗಿ. ಕತೆ ಸಾಗುತ್ತಿದ್ದಂತೆಯೇ ಪಾತ್ರಕ್ಕೊಂದು ಬದಲಾವಣೆ ಸಿಗುತ್ತದೆ. ಈ ಪಾತ್ರಕ್ಕೆ ಅಷ್ಟೊಂದು ಬದಲಾವಣೆ ಬೇಕಿತ್ತಾ ಅನ್ನುವ ಅಚ್ಚರಿ ಕೂಡ ಮೂಡಿಸುವಂತಹ ಕ್ಯಾರೆಕ್ಟರ್ ಅದು.

* ಕನ್ನಡ ಇಂಡಸ್ಟ್ರಿಗೆ ಬಗ್ಗೆ ತಿಳಿದುಕೊಂಡಿದ್ದೀರಾ?

ಸ್ವಲ್ಪ ಸ್ವಲ್ಪ ತಿಳಿದುಕೊಂಡಿದ್ದೇನೆ. ಬೆಂಗಳೂರಿಗೆ ನಾನು ಆಗಾಗ್ಗೆ ಬರ್ತಾ ಇರುತ್ತೇನೆ. ಹೀಗಾಗಿ ಸಮಯ ಸಿಕ್ಕಾಗೆಲ್ಲ ಕನ್ನಡ ಚಿತ್ರಗಳನ್ನೂ ನೋಡಿದ್ದೇನೆ. ನನ್ನ ಪಾಲಿಗೆ ಬೆಂಗಳೂರು ಮ್ಯಾಜಿಕಲ್ ಸಿಟಿ. ಪರಿಚಯದವರು ಇಲ್ಲಿದ್ದಾರೆ. ಹಾಗಾಗಿ ಹೆಚ್ಚೆಚ್ಚು ಬರುತ್ತೇನೆ.

* ಇತ್ತೀಚೆಗಷ್ಟೇ ತೆಲುಗಿನಲ್ಲಿ ರಿಲೀಸ್ ಆದ 'ರನ್' ಚಿತ್ರವು ನಿಮ್ಮ ವೃತ್ತಿ ಬದುಕಿಗೆ ಬ್ರೇಕ್ ನೀಡಿದೆಯಾ?

'ರನ್' ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದೆ. ಅದು ಹುಸಿಯಾಗಲಿಲ್ಲ. ಚಿತ್ರದ ಬಗ್ಗೆ ಒಳ್ಳೆಯ ರೆಸ್ಪಾನ್ಸ್ ಬಂತು. ಅಲ್ಲದೇ ಅದು ಕಾಮಿಕ್ ಥ್ರಿಲ್ಲರ್ ಸಿನಿಮಾ ಆಗಿದ್ದರಿಂದ, ನನ್ನನ್ನೂ ಗುರುತಿಸಿದರು. ಆ ಸಿನಿಮಾ ನನಗೆ ಇನ್ನಷ್ಟು ಧೈರ್ಯ ಕೊಟ್ಟಿದೆ. ಮತ್ತಷ್ಟು ಅವಕಾಶ ಸಿಗುವಂತೆ ಮಾಡಿದೆ.

* ಫಿಟ್‌ನೆಸ್ ಬಗ್ಗೆ ಏನು ಹೇಳುತ್ತೀರಿ? ಈ ವಿಷಯದಲ್ಲಿ ನಾಯಕಿಯರೇಕೆ ಅಷ್ಟೊಂದು ಸೀರಿಯಸ್ ಆಗಿರುತ್ತಾರೆ?

ನನಗೆ ಫಿಟ್‌ನೆಸ್ ಬಗ್ಗೆ ಅಷ್ಟೊಂದು ಕ್ರೇಜ್ ಇಲ್ಲ, ನಿಜ ಹೇಳುತ್ತೇನೆ. ನನಗೆ ತಿನ್ನುವುದೆಂದರೆ ತುಂಬಾ ಇಷ್ಟ. ದಪ್ಪಾಗುತ್ತೇನೆ ಅನ್ನುವ ಯಾವ ಭಯವೂ ನನಗಿಲ್ಲ. ಪಾತ್ರಕ್ಕೆ ತೂಕ ಇಳಿಸಬೇಕು ಅಂದಾಗ ಜಿಮ್‌ಗೆ ಹೋಗುತ್ತೇನೆ. ಹಾಗಂತ ದೇಹವನ್ನು ದಂಡಿಸುವುದಿಲ್ಲ. ಒಬ್ಬೊಬ್ಬರು ಫಿಟ್‌ನೆಸ್ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಳ್ಳುತ್ತಾರೆ. ಸಣ್ಣಗಿದ್ದರೆ ಮಾತ್ರ ಪಾತ್ರ ಸಿಗುತ್ತೆ ಅಂತೇನೂ ಇಲ್ಲ. ಒಳ್ಳೆಯ ನಟಿ ಹೇಗಿದ್ದರೂ ಚೆಂದ ಕಾಣಿಸುತ್ತಾರೆ.

* 'ಕರ್ವ' ಸಿನಿಮಾದ ಕತೆಯ ಬಗ್ಗೆ ಹೇಳುವುದಾದರೆ?

ವಿಭಿನ್ನವಾದ ಕತೆ ಇಲ್ಲಿದೆ. ಯಾವುದನ್ನೂ ಬೇಕು ಅಂತ ಮಾಡಿಲ್ಲ. ಹೆದರಿಸೋಕೆ ಗಿಮಿಕ್ ಕೂಡ ಮಾಡುವುದಿಲ್ಲ. ಬಹಳ ನ್ಯಾಚುರಲ್ ಆಗಿ ಕತೆ ಸಾಗುತ್ತದೆ. ಹಾರರ್ ಸಿನಿಮಾ ಅಂದಾಗ ಸಾಮಾನ್ಯವಾಗಿ ಲವ್, ರೊಮಾನ್ಸ್, ಫೈಟ್ ಇದ್ದೇ ಇರುತ್ತವೆ. ಇಲ್ಲಿ ಅಂತಹ ಅನಗತ್ಯ ದೃಶ್ಯಗಳನ್ನು ಸೇರಿಸುವುದಕ್ಕೆ ಹೋಗುವುದಿಲ್ಲ.

* ಮತ್ತೆ ಕನ್ನಡದಲ್ಲಿ ಅವಕಾಶ ಸಿಗುತ್ತದೆ ಅನ್ನುವ ನಂಬಿಕೆ ಇದೆಯಾ?

'ಕರ್ವ' ಸಿನಿಮಾ ರಿಲೀಸ್ ಆದ ನಂತರ ಕಂಡಿತಾ ಕನ್ನಡದ ಪ್ರೇಕ್ಷಕರು ನನ್ನನ್ನು ಒಪ್ಪಿಕೊಳ್ಳುತ್ತಾರೆ. ಈ ಸಿನಿಮಾದಲ್ಲಿ ನಿರ್ವಹಿಸಿದ ಪಾತ್ರದಂತೆಯೇ ಇನ್ನಷ್ಟು ಪಾತ್ರಗಳು ಸಿಗುತ್ತವೆ ಅನ್ನುವ ನಂಬಿಕೆಯಂತೂ ಇದೆ.

* ಎಂತಹ ಪಾತ್ರಗಳಲ್ಲಿ ನೀವು ಕಾಣಿಸಿಕೊಳ್ಳಲು ಇಷ್ಟಪಡುತ್ತೀರಿ?

ಇಂತಹ ಪಾತ್ರಗಳೇ ಬೇಕು ಅಂತೇನೂ ಇಲ್ಲ. ಹೋಮ್ಲಿ ಪಾತ್ರಕ್ಕೆ ಒಪ್ಪುತ್ತೇನೆ ಅಂತ ಹೇಳುತ್ತಾರೆ. ನನಗೆ ಗ್ಲಾಮ್ ಪಾತ್ರಗಳೆಂದರೆ ಇಷ್ಟ. ಕಲಾವಿದರು ಎಲ್ಲಾ ರೀತಿಯ ಪಾತ್ರಗಳನ್ನೂ ಮಾಡಬೇಕು. ■

16⇦ ಕತೆ

ಸಾಧ್ಯವಿಲ್ಲವೆನ್ನಿಸಿ ಭ್ರಮನಿರಸವಾಗತೊಡಗಿತು. ಮೈಕಿನಲ್ಲಿ ಮಾತ್ರ ಪ್ರತಿಯೊಬ್ಬರಿಗೂ ಲಾಡು ಸಿಕ್ಕೇ ಸಿಗುತ್ತದೆ, ಲಾಡು ಪಡೆದೇ ಹೋಗಬೇಕೆಂದು ಪ್ರಕಟವಾಗುತ್ತಲೇ ಇತ್ತು. ನಾಲ್ಕಾರು ಬಕೆಟ್‌ಗಳಲ್ಲಿ ತಂದಿದ್ದ ಲಾಡು ಉಂಡೆಗಳು 'ಅಗೀಗ' ಅನ್ನುವಷ್ಟರಲ್ಲಿ ಖಾಲಿಯಾದವು. ಲಾಡು ಹಂಚುತ್ತಿದ್ದ ಮಂದಿ ಬಕೆಟ್‌ಗಳನ್ನು ಉಲ್ಟಾ ಮಾಡಿ ಕೊಡವಿ ಖಾಲಿಯಾಗಿರುವುದನ್ನು ಸಾರ್ವಜನಿಕರಿಗೆ ತೋರಿಸಿ ಖಾತ್ರಿಪಡಿಸಿ ಹೊರಟುನಿಂತರು.

ಎಷ್ಟೋ ಹೊತ್ತಿನಿಂದ ಲಾಡುಗಾಗಿ ಕಾಯುತ್ತಾ ನಿಂತ ಹಲವರು ಸಿಟ್ಟಿನಿಂದ ಕುದಿಯತೊಡಗಿದರು. ಅವರೆಲ್ಲ ತಹಸೀಲ್ದಾರ್ ಕಚೇರಿಯ ಸಿಬ್ಬಂದಿಯ ಮೇಲೆ ಜಗಳಕ್ಕೆ ನಿಂತರು. ಮಾತಿಗೆ ಮಾತು ಬೆಳೆಯಿತು. ಕೈಕೈ ಮಿಲಾಯಿಸುವ ಹಂತ ತಲುಪಿದರು. ಜೋರು ಹೊಡೆದಾಟವಾಗುವ ಎಲ್ಲ ಲಕ್ಷಣಗಳೂ ಕಂಡುಬಂದವು.

ನಿರಾಶೆ ತುಂಬಿ, ಸುಸ್ತಾಗಿ, ಹಣ್ಣುಹಣ್ಣಾಗಿದ್ದ ಅಸ್ಲಾಮನಿಗೆ ಸಹ ಸಿಟ್ಟು ನೆತ್ತಿಗೇರಿತ್ತು, ಲಾಡು ಸಿಗದವರು ಯಾರ ಹತ್ತಿರ ಜಗಳ ಕಾಯುತ್ತಿದ್ದರೋ ಅವರ ಮುಂದೆ ನಿಂತು "ಲಾಡು ಕೊಡ್ರಿ. ನಾನು, ನನ್ನ ತಂಗಿ ಮೊದ್ಲಿಂದ ಕಾಯ್ತಾ ಇದ್ವಿವಿ" ಎಂದು ಕೂಗಿ ಹೇಳಿದ. ಲಾಡು ಹಂಚುವವನು "ಯಾಕ್ಲಾ ಸಾಬಣ್ಣಾ, ಲಾಡು ತಿನ್ನಕೆ ನಿಮ್ಮ ದೇಶಕ್ಕೆ ಹೋಗ್ಲ! ಇಲ್ಲಿ ನಿನ್ನ ದ್ವಿಲ್ಲೂ ಬ್ಯಾಡ, ಧರ್ಮ್ಮೂ ಬ್ಯಾಡ. ಲಾಡು ಬೇಕಂತೆ ಲಾಡು!" ಎಂದ.

ತಮ್ಮ ಕಳ್ಳತನ, ಭ್ರಷ್ಟತೆಯನ್ನು ಮುಚ್ಚಿಹಾಕಲು ಅವನು ಯೋಚಿಸಿ ಹಾಗಂದದ್ದು ಅದ್ಭುತವಾಗಿ ಕೆಲಸ ಮಾಡಿತು. ಕೂಡಲೇ ಅಲ್ಲಿ ತಲೆಗೊಂದೊಂದರಂತೆ ಮಾತುಗಳು ಪ್ರಾರಂಭವಾದವು.

"ಸರಿಯಾಗಿ ಹೇಳ್ದೆ ಕಣಯ್ಯ."

"ಥ್ರಂ ಸಖತ್ತಾಗಿ ಬಾರಿಸ್ದೆ ಕಣೋ. ಆದ್ರೆ .... ಸಾಬ್ರನೇನು ನೀನು?"

"ಸಾಬಿ ಆದ್ರೂ ಪರವಾಗಿಲ್ಲ ಕಣಯ್ಯ."

"ನಿಮ್ಗೂಗೆ ಸ್ವತಂತ್ರ ದಿನ ನಿನ್ನೇನೇ ಆಯ್ತೂ?" ಎಂದು ಸಾಬರ ಕನ್ನಡದಲ್ಲಿ ಅಣಕಿಸಿದ ಮತ್ತೊಬ್ಬ.

"ಅಲ್ನೋಡು. ತಂಗಿ ಕರಕೊಂಡು ಬಂದಿದಾನೆ. ಡಜನ್ ಮಕ್ಳನ್ನ ಮಾಡಿದಾನೇನೋ ನಿಮ್ಮಪ್ಪ?" ಎಂದು ಪೋಲಿ ಸಂಜ್ಞೆ ಮಾಡಿ ನಕ್ಕ ಮಗದೊಬ್ಬ. ಲಾಡು ಸಿಗದೆ ಹೋದದ್ದು ಗುಂಪಿನೆಲ್ಲರಿಗೂ ಮರೆತೇಹೋಗಿತ್ತು.

ಜಗಳ ಆಗುವ ಸೂಚನೆ ಇದ್ದುದರಿಂದ ಪೊಲೀಸರು ಕೈಯ್ಯಲ್ಲಿದ್ದ ಲಾಠಿಗಳನ್ನು ತಿರುಗಿಸುತ್ತ ಗುಂಪಿನ ಕಡೆ ಬಂದರು. ಇಲ್ಲದ ಉಸಾಬರಿ ಯಾಕೆ ಎಂದು ಹೆದರಿ ಜನ ಜಾಗ ಖಾಲಿ ಮಾಡಿದರು. ಅಸ್ಲಾಂ ತನ್ನ ತಂಗಿಯನ್ನು ಕರೆದುಕೊಂಡು ಹೊರಟ. ಜನರಾಡಿದ ಮಾತುಗಳಿಂದ ಅವನಿಗೆ ಭಾರೀ ಅವಮಾನವಾಗಿತ್ತು. ತನ್ನ ನಂಬುಗೆ ಮತ್ತು ಬ್ರದುಕುಗಳೆಲ್ಲ ಬೇರೆಯವರಿಗೆ ನಾಟಕದಂತೆ ಕಾಣುವ ವಿಪರ್ಯಾಸಕ್ಕೆ ವಿಚಲಿತನಾಗಿದ್ದ.

ಹೀಗೆ ಪ್ರಕ್ಷುಬ್ಧ ಮನಸ್ಥಿತಿಯಲ್ಲಿ ತಂಗಿಯೊಡನೆ ಅಸ್ಲಾಮನು ತನ್ನ ಅಮ್ಮನನ್ನು ಕರೆದುಕೊಂಡು ಹೋಗಲು ನೇರವಾಗಿ ತಹಸೀಲ್ದಾರ್ ಮನೆಯ ಹತ್ತಿರ ಬಂದ. ತಹಸೀಲ್ದಾರರ ಅರಮನೆಯಂಥ ಮನೆಯ ಬಳಿ ಮುನಿಸಿಪಲ್ ಮೈದಾನದಲ್ಲಿ ಹಾಕಿದ್ದಕ್ಕಿಂತ ಭವ್ಯವಾದ ಪೆಂಡಾಲ್ ಹಾಕಿ, ಹೂಹಾರಗಳಿಂದ ಸಿಂಗಾರ ಮಾಡಿದ್ದರಿಂದ ಆ ಪ್ರದೇಶವೇ ಘಮಘಮಿಸುತ್ತಿತ್ತು. ಶಾಸಕರು, ತಾಲ್ಲೂಕಿನ ಎಲ್ಲ ಜನಪ್ರತಿನಿಧಿಗಳು, ಎಲ್ಲ ಇಲಾಖೆಗಳ ಅಧಿಕಾರಿವರ್ಗ, ಹತ್ತಿಪ್ಪತ್ತು ಜನ ಪೊಲೀಸರು ಅಲ್ಲಿ ಹಾಜರಿದ್ದರು. ದೊಡ್ಡ ದೊಡ್ಡವರೆಲ್ಲ ಮಹಾರಾಜ ಕುರ್ಚಿಗಳಲ್ಲಿ ಆಸೀನರಾಗಿದ್ದರು. ಮಹಲಿಂಗಪ್ಪ ಗಾಡಿಯಲ್ಲಿ ಮಿನರಲ್ ವಾಟರ್ ಬಾಟಲ್‌ಗಳನ್ನು ಹೇರಿಕೊಂಡು ಬಂದು ಇಳಿಸುತ್ತಿದ್ದ.

ತಾಲ್ಲೂಕಿನ ಎಲ್ಲ ಅಭಿವೃದ್ಧಿ ಕಾರ್ಯಗಳು ಸಾಂಗೋಪಾಂಗವಾಗಿ ನಡೆಯುತ್ತಿರುವ ಬಗ್ಗೆ ಹಾಗೂ ಸುಗಮವಾಗಿ ನಡೆದ ಅಂದಿನ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದ ಬಗ್ಗೆ ಸಂತೋಷವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಅಂದಿನ ಕಾರ್ಯಕ್ರಮಕ್ಕೆ ಮಾಡಿಸಿದ್ದ ಲಾಡು ಉಂಡೆಗಳಲ್ಲಿ ಮುಕ್ಕಾಲು ಪಾಲು ಅಲ್ಲಿದ್ದವು. ಅಲ್ಲಿ ನೆರೆದಿದ್ದ ಎಲ್ಲ ಮಹನೀಯರುಗಳು ಅಚ್ಚುಕಟ್ಟಾಗಿ ಕೂತು ಇಷ್ಟಬಂದಷ್ಟು ಲಾಡು ಉಂಡೆಗಳನ್ನು ಸಾವಕಾಶವಾಗಿ ಮೆಲ್ಲುತ್ತಿದ್ದರು. ಭಿಕ್ಷುಕರಂತಿದ್ದ ಈ ಎರಡು ಮಕ್ಕಳು ಯಾರ ಕಣ್ಣಿಗೂ ಕಾಣಲಿಲ್ಲ.

ಅಸ್ಲಾಮನಿಗೆ ತಹಸೀಲ್ದಾರ್ ಮನೆಯ ಒಳಗೆ ಹೋಗಿ ತಾಯಿಯನ್ನು ನೋಡುವುದಿರಲಿ ಒಳಗೆ ಇಣುಕಿ ಹಾಕಲು ಸಹ ಆಗಲಿಲ್ಲ. ದಿನವೂ ಚೆನ್ನಾಗಿ ಮಾತನಾಡಿಸುತ್ತಿದ್ದ ಜವಾನರು ಇಂದು ಹಾಕೂರೀಕೂ ಸಮವಸ್ತ್ರವಲ್ಲಿದ್ದು, ಅಸ್ಲಾಮನನ್ನು ಉಬಾಯಿಸಿ ಮಾತನಾಡಿ ಹಿಂದಕ್ಕೆ ಕಳುಹಿಸಿದರು. ಅಮೀನಮ್ಮ ಆ ಅರಮನೆಯ ಯಾವ ಮೂಲೆಯಲ್ಲೋ ಕೆಲಸದಲ್ಲಿ ಮುಳುಗಿರಬೇಕೆಂದುಕೊಂಡ ಅಸ್ಲಾಂ ತನ್ನ ತಂಗಿಯ ಕೈ ಹಿಡಿದುಕೊಂಡು ಮನೆಯ ಕಡೆ ಹೆಜ್ಜೆ ಹಾಕತೊಡಗಿದ.

"ಅವರೆಲ್ಲ ತಿನ್ನುತ್ತಿದ್ದಾರಲ್ಲ ಅದೇನಾ ಲಾಡು ಉಂಡೆ?" ಎಂದು ಶಂಷಾದ್ ಅಣ್ಣನನ್ನು ಪ್ರಶ್ನಿಸಿ ಉತ್ತರಕ್ಕಾಗಿ ಕಾದಳು.

■ ಡಾ. ಮಿರ್ಜಾ ಬಷೀರ್, ತುಮಕೂರು

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 25-05-2016 RNI No. KARKAN200



ಸಿಪಾಯಿ ಹಿಂದೆ ಬಿದ್ದ ಶ್ರುತಿ

ರಜತ್ ಮಯಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಸಿಪಾಯಿ' ಚಿತ್ರದಲ್ಲಿ ಶ್ರುತಿ ಹರಿಹರನ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅದು ಕಾಲೇಜು ಹುಡುಗಿಯ ಪಾತ್ರವಾಗಿದ್ದರೂ, ಚಿತ್ರಕತೆಯಲ್ಲಿ ವಿಶೇಷ ಸ್ಥಾನವಿದೆಯಂತೆ. ಹೀಗಾಗಿ 'ಸಿಪಾಯಿ' ಚಿತ್ರ ತಮಗೊಂದು ಬ್ರೇಕ್ ನೀಡಲಿದೆ ಅನ್ನುವ ನಂಬಿಕೆ ಅವರದ್ದು. ಇವರ ಜತೆ ಸಿದ್ಧಾರ್ಥ್ ಮಹೇಶ್ ನಟಿಸಿದ್ದಾರೆ. ಈ ಚಿತ್ರದ ಮೂಲಕ ಇವರು ಕನ್ನಡ ಸಿನಿರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಕರಾಟೆಪಟುವಾಗಿರುವ ಇವರು, ಕರಾಟೆಯಲ್ಲಿ ಬ್ಲಾಕ್‌ಬೆಲ್ಟ್ ಪಡೆದಿದ್ದಾರೆ. ಈ ಚಿತ್ರದಲ್ಲಿ ಆ್ಯಕ್ಷನ್ ದೃಶ್ಯಗಳು ತುಂಬಾ ಇರುವುದರಿಂದ ಈ ಕಲೆಯನ್ನು ನಿರ್ದೇಶಕರು ಸಮರ್ಥವಾಗಿ ಬಳಸಿಕೊಂಡಿದ್ದಾರಂತೆ. ಅಂದಹಾಗೆ ನಿರ್ದೇಶಕರ ಚೊಚ್ಚಲು ಸಿನಿಮಾವಿದು. 'ಲೂಸಿಯಾ' ಚಿತ್ರಕ್ಕೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ ಅನುಭವ ಇವರಿಗಿದೆ. ಚೊಚ್ಚಲು ಸಿನಿಮಾದಲ್ಲೇ ಆ್ಯಕ್ಷನ್ ಕಂ ಥ್ರಿಲ್ಲರ್ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದು ಮತ್ತೊಂದು ವಿಶೇಷ. ಅಚ್ಯುತ್, ಸಂಚಾರಿ ವಿಜಯ್, ಗೌರೀಶ್ ಅಕ್ಕಿ ಸೇರಿದಂತೆ ಹೆಸರಾಂತ ತಾರಾಬಳಗ ಸಿನಿಮಾದಲ್ಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಮಾಡಿದ್ದಾರೆ.

ಅತಿಥಿ ಪಾತ್ರದಲ್ಲಿ ರಕ್ಷಿತ್

ಸುದೀಪ್‌ಗಾಗಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ನಟ, ನಿರ್ದೇಶಕ ರಕ್ಷಿತ್ ಶೆಟ್ಟಿ. ಸುದೀಪ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ 'ಜಿಗರ್‌ಥಂಡ' ಚಿತ್ರದಲ್ಲಿ ರಕ್ಷಿತ್ ಪುಟ್ಟ ಪಾತ್ರ ನಿರ್ವಹಿಸಿದ್ದಾರೆ. ಇದು ಕೇವಲ ಸುದೀಪ್ ಪ್ರೀತಿಗಾಗಿ ಅನ್ನುವುದು ವಿಶೇಷ. ರಕ್ಷಿತ್ ಈ ಸಿನಿಮಾದಲ್ಲಿ ಬಾಬಿ ಸಿಂಹ ಎಂಬ ಪಾತ್ರದಲ್ಲಿ ಮಿಂಚಿದ್ದಾರೆ. ರವಿಶಂಕರ್ ಮಾಡಬೇಕಿದ್ದ ಪಾತ್ರವು ಕೊನೆಯ ಕ್ಷಣದಲ್ಲಿ ಇವರಿಗೆ ಒಲಿದು ಬಂದಿದೆಯಂತೆ. ಪಾತ್ರದ ಬಗ್ಗೆ ರಕ್ಷಿತ್ ಖುಷಿಯಿಂದಲೇ ಮಾತಾಡಿದ್ದಾರೆ. "ನಾನು ಮೂಲಚಿತ್ರವನ್ನು ನೋಡಿದ್ದೇನೆ. ಬಾಬಿ ಸಿಂಹ ಅವರ ಪಾತ್ರ ನೋಡಿ ಅಚ್ಚರಿಯಾಗಿತ್ತು. ಈಗ ಆ ಪಾತ್ರವನ್ನು ನಾನು ಮಾಡುತ್ತಿರುವುದು ಖುಷಿ ತಂದಿದೆ. ಇದು ಫುಲ್ ಫ್ಲೆಜ್ಡ್ ಪಾತ್ರವಂತೂ ಅಲ್ಲ. ಆದರೂ ಪಾತ್ರಕ್ಕೆ ಬಹಳ ಮಹತ್ವ ಇದೆ. ಸುದೀಪ್ ಅವರ ಸಿನಿಮಾದಲ್ಲಿ ನಟಿಸುವುದಕ್ಕೆ ಇನ್ನೂ ಖುಷಿ ಇದೆ" ಅಂದಿದ್ದಾರೆ. ಸದ್ಯ ರಕ್ಷಿತ್ ತಮ್ಮ ಹೊಸ ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಇದ್ದಾರೆ. ಅಲ್ಲದೇ ಸುದೀಪ್‌ಗಾಗಿ ಸಿನಿಮಾವೊಂದನ್ನು ಮಾಡಲಿದ್ದಾರೆ.

ಸೆಂಚುರಿ ಬಾರಿಸಿದ ಶಿವಣ್ಣ



ಶಿವರಾಜ್‌ಕುಮಾರ್ ನಟನೆಯ 'ಶಿವಲಿಂಗ' ಚಿತ್ರ ನೂರರ ದಿನದತ್ತ ಮುನ್ನುಗ್ಗುತ್ತಿದೆ. ಸ್ಟಾರ್ ನಟರ ಚಿತ್ರಗಳು ಸಾಲುಸಾಲು ಸೋಲುತ್ತಿರುವಾಗ ಶಿವಣ್ಣ ಸೆಂಚುರಿ ಬಾರಿಸುತ್ತಿರುವುದು ಸಹಜವಾಗಿಯೇ ಅಭಿಮಾನಿಗಳಿಗೆ ಖುಷಿ ತಂದಿದೆ. ಇನ್ನೊಂದೇ ವಾರದಲ್ಲಿ ಶತದಿನ ಪೂರೈಸಲಿರುವ ಚಿತ್ರವು ಸುಮಾರು ನೂರು ಚಿತ್ರಮಂದಿರಗಳಲ್ಲಿ 50 ದಿನ ಪೂರೈಸಿದೆ. ಅಷ್ಟೇ ಸಂಖ್ಯೆಯ ಚಿತ್ರಮಂದಿರಗಳಲ್ಲಿ ಶತದಿನ ಕಾಣುತ್ತಿರುವುದು ಇದರ ಹೆಗ್ಗಳಿಕೆ. ಈ ಮಧ್ಯೆ ಪೈರಸಿಯ ಹಾವಳಿ ಚಿತ್ರತಂಡವನ್ನು ಕಾಡುತ್ತಿದೆ. ಅದನ್ನು ತಡೆಗಟ್ಟುವಲ್ಲಿ ಸಿನಿಮಾ ತಂಡ ಹರಸಾಹಸ ಪಡುತ್ತಿದೆ.

ಅಂದಹಾಗೆ ಅನೇಕ ಕಾರಣಗಳಿಂದಾಗಿ ಈ ಚಿತ್ರ ಪ್ರೇಕ್ಷಕರ ಗಮನ ಸೆಳೆದಿತ್ತು. ಇದೇ ಮೊದಲ ಬಾರಿಗೆ ಪಿ.ವಾಸು ನಿರ್ದೇಶನದಲ್ಲಿ ಶಿವರಾಜ್‌ಕುಮಾರ್ ನಟಿಸಿದ್ದರು. ಅಲ್ಲದೇ ಸಿಬಿಐ ಆಫೀಸರ್ ಪಾತ್ರದಲ್ಲಿ ಇವರು ಕಾಣಿಸಿಕೊಂಡಿದ್ದರು. ಇದು ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಚಿತ್ರವಾಗಿದ್ದರಿಂದ ಅಭಿಮಾನಿಗಳೂ ಎರಡೆರಡು ಬಾರಿ ಸಿನಿಮಾ ವೀಕ್ಷಿಸಿದ್ದರು.

ಶತದಿನದ ಸಂಭ್ರಮದಲ್ಲಿರುವ ನಿರ್ಮಾಪಕರು ಇದೇ ಹೊತ್ತಿನಲ್ಲಿ ಮತ್ತೊಂದು ಸುದ್ದಿಯನ್ನು ಹರಿಬಿಟ್ಟಿದ್ದಾರೆ. 'ಶಿವಲಿಂಗ'ದ ಮುಂದುವರೆದ ಭಾಗವನ್ನು ಸಿನಿಮಾ ಮಾಡುವುದಾಗಿ ಹೇಳಿದ್ದಾರೆ. ಹೀಗಾಗಿ ಅತೀ ಶೀಘ್ರದಲ್ಲೇ 'ಶಿವಲಿಂಗ-2' ಚಿತ್ರವು ಸೆಟ್ಟೇರಲಿದೆ.

ನಾಣಿ ವಿರುದ್ಧ ಅಸಮಾಧಾ

ಮೊನ್ನೆಯಷ್ಟೇ ರಾಗಿಣಿ ಕಣ್ಣೀರು ಹಾಕಿ ಸುದ್ದಿಯಾ ಈಗ ಐಂದ್ರಿತಾ ರೇ ಸರದಿ. ನಾಯಕಿಯರನ್ನು ಸರಿ ನಡೆಸಿಕೊಳ್ಳುತ್ತಿಲ್ಲ, ಸಂಭಾವನೆ ವಿಚಾರದಲ್ಲೂ ತಾರತಮ್ಯ ನಡೆ ನಾಯಕರಿಗೆ ಕೊಡುವ ಸವಲತ್ತು ಕೂಡ ತಮಗೆ ದೊರೆಯುತ್ತಿಲ್ಲ ಐಂದ್ರಿತಾ ಅಸಮಾಧಾನಗೊಂಡಿದ್ದಾರೆ. ತನಗೆ ಆದ ತ ನೆನೆದು ಕಣ್ಣೀರಾಕಿದ್ದಾರೆ. ಐಂದ್ರಿತಾ ರೇ ಕಣ್ಣೀರು ಹಾಕುತ್ತಿದ್ದ ನಿರ್ದೇಶಕ ಎಸ್.ನಾರಾಯಣ್ ಜಾಗೃತರಾಗಿದ್ದಾರೆ. "ನನ್ನ ಸಿನಿಮ ಐಂದ್ರಿತಾ ನಟಿಸಿದ್ದರೂ, ನನ್ನಿಂದ ಅವರಿಗೆ ಯಾವುದೇ ತೊ ಆಗಿಲ್ಲ" ಎಂದು ಹೇಳಿಕೆ ಕೊಟ್ಟಿದ್ದಾರೆ. ಹೀಗಾಗಿ ಜಂ ಹುಡುಗಿ ಅತ್ತಿದ್ದು ನಾಣಿಗಾಗಿ ಅನ್ನುವುದು ಗುಟ್ಟಾಗಿ ಉ ಸಂಭಾವನೆ ವಿಚಾರದಲ್ಲಿ ನಟಿಯೊಬ್ಬರು ಅಸಮಾ ಹೊರಹಾಕುತ್ತಿರುವುದು ಇದೇ ಮೊದಲೇನೂ ಅಲ್ಲ. ಬಾರಿ ರಮ್ಯಾ ಮಾತಾಡಿದ್ದಾರೆ. ಸಂಭಾವನೆ ವಿಚಾರವಾ ಅನೇಕ ಸಿನಿಮಾಗಳನ್ನು ತಿರಸ್ಕರಿಸಿದ್ದಾರೆ. ಈ ಹಿಂದೆಯೂ ರಾಮ್ ಇದೇ ವಿಚಾರವಾಗಿ ಸದ್ದು ಮಾಡಿದ್ದರು. ಇದರ ಎಲ್ಲಾ ನಾಯಕಿಯರು ಮಾತಾಡಬೇಕು ಎಂದು ಕರೆ ನೀಡಿ



ಗಾಯಕಿಯಾದ ರಶ್ಮಿ

ಆರ್ಜೆ ರ್‍ಯಾಪಿಡ್ ರಶ್ಮಿ ಗಾಯಕಿಯಾಗಿ ಭಡ್ತಿ ಪಡೆದಿದ್ದಾರೆ. ಕೋಮಲ್ ನಟನೆಯ 'ಡೀಲ್ ರಾಜ' ಚಿತ್ರಕ್ಕಾಗಿ ಅವರು ರಿಂಗ್ ಸ್ವಾಮಿ ಎಂಬ ಗೀತೆಯನ್ನು ಹಾಡಿದ್ದಾರೆ. ಅಭಿಮಾನ್ ರಾಯ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಹಾಡು ಕೂಡ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆಯಂತೆ. ಈವರೆಗೂ ರೇಡಿಯೋ, ಕಿರುತೆರೆ ಹಾಗೂ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿರುವ ರಶ್ಮಿ, ಇದೇ ಮೊದಲ ಬಾರಿಗೆ ಚಿತ್ರವೊಂದಕ್ಕೆ ಹಾಡಿದ್ದು ವಿಶೇಷ.

ಆಡಿಯೋ ಸೂಪರ್ ಹಿಟ್ ಆಗಿರುವುದರಿಂದ ಸದ್ಯದಲ್ಲೇ ಇದರ ವೀಡಿಯೋವನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲಿದ್ದಾರಂತೆ ನಿರ್ದೇಶಕ ರಾಜ್ ಗೋಪಿ. ಹಾಡಿನ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡಿರುವ ರಶ್ಮಿ "ಇದೇ ಮೊದಲ ಬಾರಿಗೆ ಹಾಡಿದ್ದೇನೆ. ಹಾಡುವುದು ಸುಲಭದ ಮಾತಲ್ಲ. ಸಂಗೀತ ನಿರ್ದೇಶಕರು ನಾನೇ ಹಾಡಬೇಕು ಅಂದರು. ಅವರ ಒತ್ತಾಸೆಗೆ ಹಾಡಿದ್ದೇನೆ. ಜನರೂ ಇಷ್ಟಪಟ್ಟಿದ್ದಾರೆ. ಹೀಗಾಗಿ ಸಹಜವಾಗಿ ಖುಷಿ ಆಗಿದೆ" ಅಂದಿದ್ದಾರೆ.

ರವಿಚಂದ್ರ ರೆಡ್ಡಿ ಮತ್ತು ಕೃಷ್ಣಮೂರ್ತಿ ನಿರ್ಮಾಣವಿರುವ ಈ ಚಿತ್ರಕ್ಕೆ ಜೈ ಆನಂದ್ ಛಾಯಾಗ್ರಹಣ ಮಾಡಿದ್ದಾರೆ. ಕೋಮಲ್ ಜೋಡಿಯಾಗಿ ಭಾನುಶ್ರೀ ನಟಿಸಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com